TIGHT BINDING BOOK

TEXT FLY WITHIN
THE BOOK ONLY

UNIVERSAL LIBRARY
OU_200604
UNIVERSAL LIBRARY

ಮೊದಲ ಮುದ್ರಣ: ಆಗಸ್ಟ್ ೧೯೫೭.

ಮುದ್ರಕರು:
ಕಲ್ಯಾಣ್ ಪ್ರಿಂಟರ್ಸ್ (ಪ್ರೈವೇಟ್) ಲಿಮಿಟೆಡ್,
೧೨, ಶ್ರೀ ಜಯಚಾಮರಾಜ ರಸ್ತೆ
ಬೆಂಗಳೂರು ೨

ಎಲ್ಲ ಹಕ್ಕುಗಳೂ ಸಂಪಾದಕರವು

ಬೆಲೆ:

ಸಾದಾ ಪ್ರತಿ: ರೂ. ೨.೦೦
ಕ್ಯಾಲಿಕೊ ಪ್ರತಿ: ರೂ. ೩.೦೦

## ಒಳಪಿಡಿ


೧. ದರ್ಶನಂ ಸಕಲಧರ್ಮಕ್ಕಂ ಧರಾಚಕ್ರದೊಳ್ . . ೧

೨. ಕೊಲೆಯೊಳ್ ಪೊರ್ದದಿರ್ಪ ಸದ್ಧರ್ಮವೆ ಮುಖ್ಯಂ . ೨೩

೩. ಬೇಯುರೆ ಪರಸ್ತ್ರೀಗಾಸೆಗೆಯ್ದಿರ್ಪವರ್ . . ೫೮

೪. ಕಳವಿಂ ಪೊಲ್ಲಮೆ ಪೆಱತೊಳವೆ . . . ೭೯

## ಅಚ್ಚಿನಲ್ಲಿರುವ ಇದೇ ಲೇಖಕರ ಇತರ ಪುಸ್ತಕಗಳು

೧. ಗದ್ಯ ಮಣಿಮಾಲೆ – ೨ನೆಯ ಭಾಗ

೨. ಗದ್ಯ ಮಣಿಮಾಲೆ – ೩ನೆಯ ಭಾಗ

೩. ಕಾವ್ಯಾರಾಮ – ೧ನೆಯ ಭಾಗ

೪. ಕಾವ್ಯಾರಾಮ – ೨ನೆಯ ಭಾಗ

೫. ಧರ್ಮಾಮೃತ ಕಥಾಸಂಗ್ರಹ (ಗದ್ಯ)

★

ಪ್ರಕಾಶಕರು

**ಜಿ. ಕೆ. ಅಂಡ್ ಬ್ರದರ್ಸ್**

**ಬಸವನಗುಡಿ – ಬೆಂಗಳೂರು ೪**

## ೧. ದರ್ಶನಂ ಸಕಲಧರ್ಮರ್ಕ್ಕಂ ಧರಾಚಕ್ರದೊಳ್

ಶ್ರೀರಾಮಾರಮಣೀಯ ಪಾದಸರಸೀಜಾತಂ ನಿಲಿಂಪೇಂದ್ರವೃಂ
ದಾರಾಧ್ಯಂ ಭುವನತ್ರಯಪ್ರಭು ವಿನೇಯಾನೀಕಕಲ್ಪದ್ರುಮಂ
ಧೀರಂ ನಿತ್ಯನನಂತನಕ್ಷಯಸುಖಂ ಮುಕ್ತ್ಯಂಗನೇಶಂ ಜಗ
ತ್ಸಾರಂ ವೀರಜಿನೇಂದ್ರನೀಗೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ೧

ಜಿನಮತದೊಳೆನಿತು ಸಾರಮ
ದನಿತುಂ ಲೇಸಾಗಿ ತೋರ್ಪುದೀಕೃತಿಯೊಳದೆಂ
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲಿಭದ ರೂಪು ವಿಸ್ತರದಿಂದಂ ೨

ಅತಿಶಯಜಿನೇಂದ್ರವಚನಾ
ಮೃತಮಂ ಸಕಲೈಕಜೀವಹಿತಮಂ ಪುಣ್ಯೋ
ದಿತಮಂ ಭವ್ಯನಿಕಾಯ
ಸ್ತುತಮಂ ನೆಱೆ ಪೇೞ್ವೆನಱಿಯೆ ಧರ್ಮಾಮೃತಮಂ ೩

ಅದು ಮತ್ತೆಂತೆಂದೊಡಿಂದ್ರಪ್ರಣುತ ಪದಯುಗಂ ಮೋಕ್ಷಲಕ್ಷ್ಮೀ ವಿಳಾಸಂ
ಮದನೇಭೇಂದ್ರೋಗ್ರಕಂಠೀರವನಮಳಯಶಂ ನಿರ್ಮಳಂ ಸರ್ವಸೌಖ್ಯಾ
ಭ್ಯುದಯಂ ಶ್ರೀವೀರನಾಥಂ ನೆಲಸಿರೆ ವಿಪುಳಾದ್ರೀಂದ್ರದೊಳ್ ಶೋಭೆಯಿಂ ಮು
ತ್ತಿದ ದೇವಾನೀಕದಿಂ ಸುತ್ತಿದ ಖಚರನರಾಧೀಶಸಂದೋಹದಿಂದಂ ೪

ಅಂತಾ ಗಿರೀಂದ್ರದೊಳ್ಚರಮತೀರ್ಥಕರ ಪರಮದೇವರ ಸಮವಸರಣಂ ಬಂದು ನೆಲಸಿರ್ದುದನಱಿದು ಋಷಿನಿವೇದಕಂ ಷಡ್ಋತುಫಲಂಗಳನಾಶ್ಚರ್ಯ

ಮಪ್ಪಂತೆ ಶ್ರೀಣಿಕಮಹಾರಾಜಂಗೆ ಕಾಣ್ಕೆಗೊಟ್ಟು ಸರ್ವಾಂಗಪ್ರಣತನಾಗಿ ಕೈಮುಗಿದು ದೇವಾ ನಿಮ್ಮ ವಿಪುಳಗಿರಿಯೊಳ್ ಶ್ರೀವೀರವರ್ಧಮಾನಸ್ವಾಮಿಗಳ ಸಮವಸರಣಂ ಬಂದು ನೆಲಸಿರ್ದುದೆಂದು ಬಿನ್ನಪಂಗೆಯ್ಯಲೊಡನೆ ಕೇಳ್ದು ಸಿಂಹಾಸನದಿಂದಿಳಿದತ್ತಲೇಳಡಿಯುಂ ನಡೆದು ವಿನಮಿತಶಿರಸ್ಕನಾಗಿ ಋಷಿನಿವೇದಕಂಗೆ ಪೂರ್ಣಾನಂದಪುರಸ್ಸರಮಂಗಚಿತ್ತಮುಂ ಕೊಟ್ಟಾನಂದಭೇರಿಯಂ ಪೊಯ್ಸಿ ಪಡೆವಳನಂ ಬರಿಸಿ ಬೀಡೆಲ್ಲಮರ್ಚನಾದ್ರವ್ಯಂಬೆರಸು ಪೋಜಿಮಡುವಂತೆ ಸಾರೆಂದು ನಿಯಮಿಸಿ ತಾನುಂ ಚೇಳಿನಿಮಹಾದೇವಿಯುಂ ಪಟ್ಟವರ್ಧನಗಜೇಂದ್ರಮನೇಱಿ ಸಪರಿವಾರಂ ವಿಪುಳಾದ್ರಿಯನೆಯ್ದಿ ದೂರೋತ್ಸಾರಿತವಾಹನಂ ವಿಚಿತ್ರಾತಪತ್ರ ಪ್ರಮುಖರಾಜಚಿಹ್ನಂಗಳಂ ಬಿಟ್ಟು ಸಮವಸರಣಮನೆಯ್ದಿ ಗಂಧಕುಟಿಯಂ ತ್ರಿಃಪ್ರದಕ್ಷಿಣಂಗೆಯ್ದು ಪರಮೇಶ್ವರನ ಪಾದಪದ್ಮಂಗಳಂ ದಿವ್ಯಾರ್ಚನೆಗಳಿಂದರ್ಚಿಸಿ ತ್ರೈಲೋಕ್ಯಸ್ವಾಮಿಗಭಿಮುಖನಾಗಿ ನಿಂದು ಮುಕುಳಿತಕರಕಮಳನುಂ ವಿಕಸಿತಹೃತ್ಕಮಳನುಮಾಗಿ

ದುರಿತತಿಮಿರಪ್ರಭಾವಂ
ಪರಿಹರಿಪುದು ದೇವ ನಿನ್ನ ಮುಖಚಂದ್ರಮನಿಂ
ತ್ವರಿತಂ ನೋಡಲದೆಂತುಂ
ದೊರೆಕೊಳ್ವುದು ವೀರಜಿನಪ ನಿರ್ವೃತಿಸೌಖ್ಯಂ ೫

ಎಂದನೇಕಸ್ತುತಿಸಹಸ್ರಂಗಳಿಂ ಸ್ತುತಿಯಿಸಿ ನಿರ್ಭರಭಕ್ತಿಯಿಂದೆಱಗಿ ಪೊಡೆಮಟ್ಟು ಶ್ರೀಣಿಕಮಹಾರಾಜಂ ಜ್ಞಾನಾರ್ಧಿಸಂಪನ್ನರಪ್ಪ ಗೌತಮಸ್ವಾಮಿಗಳ್ಗೆ ಪೊಡೆಮಟ್ಟು

ತಿರಿಕನಾರಕಮಾನವಾಮರಲೋಕದೊಳ್ ನೆಲೆಗೊಂಡು ನಿ
ತ್ತರಿಸದೆಲ್ಲಿಯುಮಲ್ಲಿಗಲ್ಲಿಗೆ ಪುಟ್ಟಿ ರಾಟಳದಂದದಿಂ
ತಿರಿವ ಸಂಸೃತಿದುಃಖದಿಂ ಪೋಱಮಟ್ಟು ಶಾಶ್ವತಸೌಖ್ಯದೊಳ್
ನೆರೆವುಪಾಯಮನಟ್ಟಿಯಿಂ ಬೆಸಸಲ್ಕೆವೇಟ್ಕು ಮುನೀಶ್ವರಾ ೬

ಎನೆ ನಯದಿಂ ಚತುರ್ವಿಧಸುರಾಳಿ ಶಿರೋನತರಾಗಿ ಹಸ್ತಕೋ
ಕನದಯುಗಂಗಳಂ ಮುಗಿಯೆ ದಂತಮರೀಚಿ ಸುಧಾಂಶುರಶ್ಮಿಯಂ
ತನುಪಮಮಾಗಿ ಶೋಭಿಸಿರೆ ಸರ್ವಜನಸ್ತುತರಪ್ಪ ಗೌತಮರ್
ಪನಧಿಗಭೀರದಿಂ ನುಡಿದರಾಪ್ತಮುಖೋದ್ಗತಮಪ್ಪ ತತ್ವಮಂ ೭

ನೀಂ ಬೆಸಗೊಂಡ ಚತುರ್ಗತಿಚ್ಛೇದಮುಂ ಜಾತಿಜರಾಮರಣದೂರಮುಂ ಸಾರಮುಮಪ್ಪ ನಿರಂತರಸುಖಂ ಮುಕ್ತಿಯೊಳಲ್ಲದೆ ದೊರೆಕೊಳದಾ ಮುಕ್ತಿಯುಂ ತ್ರಿಜಗನ್ಮಾಂಗಲ್ಯಮಪ್ಪ ಸಮ್ಯಗ್ದರ್ಶನದಿಂದಲ್ಲದೆ ಸಮನಿಸದಾ ಸಮ್ಯಗ್ದರ್ಶನಮುಂ ಕರಣಲಬ್ಧಿಯಿಲ್ಲದೆ ಕೂಡದಾ ಸಮ್ಯಗ್ದರ್ಶನಮಿಲ್ಲದೆ ನಿರಂತರಸ್ಥಾಯಿಯಪ್ಪ ಮುಕ್ತಿಶ್ರೀಯಂ ಪಡೆವೆನೆಂಬಾತಂ ಮತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮಂ ಬರೆವೆನೆಂಬ, ಗೋತ್ರಮಱಿಯದೆ ಕೂಸುಗುಡುವೆನೆಂಬ, ತೂಬಿಲ್ಲದೆ ಕೆಱಿಯುಂ ಕಟ್ಟುವೆನೆಂಬ, ಕೀಲಿಲ್ಲದೆ ಪಡಿದೆಱಿವೆನೆಂಬ, ಕೆಯ್ಯಿಲ್ಲದೆ ಬೇಲಿಯಿಕ್ಕುವೆನೆಂಬ, ಪಚ್ಚಪಸಿಯೊಗ್ಗನಂ ಪೋಲ್ಕುಂ.

ವರಚಕ್ರವರ್ತಿಪದವಿಗ
ಮುರುಗೀರ್ವಾಣಾಧಿಪತಿಯ ಸದ್ವಿಭವಕ್ಕಂ
ಪರಮಾರ್ಹಂತ್ಯ ಪದಕ್ಕಂ
ಪರಮಾರ್ಥಂ ಶುದ್ಧದರ್ಶನಂ ಮೊತ್ತಮೊದಲ್ ೮

ಪಟುದೇಹಕ್ಕಸುವೆಂತುಟಂತುಟಿ ಮುಖಾಂಭೋಜಕ್ಕೆ ಮೂಗೆಂತುಟಂ
ತುಟಿ ಬಿತ್ತಿಂಗೆಲೆಯೆಂತುಟಂತುಟಿ ತಟಾಕಕ್ಕೇರಿ ತಾನೆಂತುಟಂ
ತುಟಿ ಕೈಗಂಗುಲಿಯೆಂತುಟಂತುಟಿ ಲಸದ್ದೀಪಕ್ಕೆ ಸಂದೆಣ್ಣೆಯೆಂ
ತುಟು ತಾನಂತುಟಿ ದರ್ಶನಂ ಸಕಲಧರ್ಮಕ್ಕಂ ಧರಾಚಕ್ರದೊಳ್ ೯

ಕಂಪಿಲ್ಲದ ತುಪ್ಪಮುಂ, ಕೋಡಿಲ್ಲದ ಸಿರಿಯುಂ, ನಾಡಿಲ್ಲದರಸುಂ, ನಚ್ಚಿಲ್ಲದ ಪೆಂಡತಿಯುಂ, ದಯೆಯಿಲ್ಲದ ನೆಗಟ್ತೆಯುಂ, ಭಂಡಮಿಲ್ಲದಂಗಡಿಯುಂ, ಭಕ್ತಿಯಿಲ್ಲದ ಕೊಂಡಾಟಮುಂ, ಶಕ್ತಿಯಿಲ್ಲದ ಸೆಣಸುಂ,

ಕೇರಿಲ್ಲದ ಮನೆಯುಂ, ಘೃತವಿಲ್ಲದೂಟಮುಂ, ಸಮ್ಯಗ್ದರ್ಶನವಿಲ್ಲದ ದಾನಮುಂ ತಪಮುಂ ಜಪಮುಂ ಧರ್ಮಮುಮೊಪ್ಪಲಾರ್ಕುಮೆ?

ದುರಿತವಶದಿಂದೆ ತಿಱ್ಱನೆ
ತಿರಿಯದೆ ಸುಖನಿಳಯಮಪ್ಪ ಮುಕ್ತಿಶ್ರೀಯೊಳ್
ನೆರೆದಿರ್ಪೆನೆಂಬ ಭವ್ಯಂ
ಪರಮಾದರದಿಂದೆ ತಾಳ್ದುವುದು ದರ್ಶನಮಂ ೧೦

ಎಸೆವಂಗ*ಮೆಂಟಱಿಂ ರಂ
ಜಿಸುವ ಮಹಾನರ್ಘ್ಯಮಪ್ಪ ದರ್ಶನಮುಂ ಶಂ
ಕಿಸದೆ ತಡೆದಿರದೆ ಕೈಕೊಂ
ಡೆಸಗುಗೆ ತಾಂ ಬಱಿಕಮೈದಣುಬ್ರತತತಿಯುಂ ೧೧

ಅವಾವುವೆಂದೊಡೆ

ಕೊಲ್ಲದ ಪುಸಿಯದ ಕಳವಿನಿ
ಸಿಲ್ಲದ ಪರವನಿತೆಯರ್ಗೆ ಪದಪಿಂ ಚಿತ್ತಂ
ಸಲ್ಲದ ಪರಿಗ್ರಹಕ್ಕಳಿ
ಪಿಲ್ಲದ ಸುವ್ರತಮಿವೈದುಮಲ್ಲವೆ ರತ್ನಂ ೧೨

ಎಂಬುದುಂ ಗಣಧರದೇವರ್ಗೆ ಮಗಧಾವನೀವಲ್ಲಭಂ ಭಕ್ತಿಪೂರ್ವಕಂ ವಂದಿಸಿ ನಿಮ್ಮಡಿಯೆನಗೆ ತಿಳಿವಂತಾಗೆ ದರ್ಶನಮುಂ ನಿಶ್ಶಂಕಾದ್ಯಷ್ಟಗುಣಂಗಳುಂ ಪಂಚಾಣು ವ್ರತಮುಮೆಂಬ ಪದಿನಾಲ್ಕು ಮಹಾರತ್ನಂಗಳೊಳೊಂದೊಂದಱೊಳ್ ಚರಿಯಿಸಿ ನಿರ್ವೃತಿಯನೆಯ್ದಿದ ಮಹಾಪುರುಷರ ಕಥೆಗಳಂ ಬೆಸಸಲ್ವೇೞ್ಕುಮೆಂಬುದುಂ ಮೃದುಮಧುರಗಂಭೀರಧ್ವನಿಯಿನಿಂತೆಂದು ಪೇೞಲ್ತಗುಳ್ದರ್

* ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ.

ಮುದದಿಂದೊಂದೊಂದಱೊಳ್ತಾಗುವ ಜಲಚರಸಂದೋಹದಳ್ಳೇಱಿನಿಂ ಪೊಣ್ಮಿದ ತಚ್ಛೀತಾಂಬುವಿಂ ತಜ್ಜಲದಿನೊಗೆದ ಮುಕ್ತಾಳಿಯಿಂದೆಯ್ದೆ ಶುಭ್ರಾಂಬುದಮುಂ ತಾರಾಳಿಯುಂ ಪೋಲ್ತೆಸೆವ ನೆಱೆ ನಭೋಭಾಗದಂತೊಪ್ಪಿ ಸುತ್ತಿರ್ದುದು ಜಂಬೂದ್ವೀಪಮುಂ ವಾರಿಧಿ ಕವಯುರಮುಂ ಬೀಸಿದಂತಾಗೆ ಚೆಲ್ವಿಂ

ಆ ಜಂಬೂದ್ವೀಪದ ನಟ್ಟನಡುವೆ

ಮುದದಿಂ ಜಿನಾಭಿಷೇಕ
ಕ್ಕಿದು ಮಜ್ಜನಪೀಠವೆನಿಸಿ ಮಹಿಮೆಯಿನೊಪ್ಪಿ
ರ್ದುದು ಪೆಂಪಿಂ ತ್ರೈಲೋಕ್ಯಾ
ಭ್ಯುದಯಂ ರಮಣೀಯಮಪ್ಪ ಮಂದರಶೈಲಂ ೧೪

ಆ ಮೇರುಗಿರಿಯ ದಕ್ಷಿಣಭಾಗದ ಭರತಕ್ಷೇತ್ರದೊಳ್ ಸೌರಾಷ್ಟ್ರವಿಷಯವೆಂಬುದು ನಾಡಲ್ಲಿ

ಜಿನಭವನಾವಳಿಯಿಂದುಪ
ವನದಿಂ ಪೆರ್ಗೆಱೆಗಳಿಂ ಸರೋಜಾಕರದಿಂ
ಧನದನ ಪುರದಂತೊಪ್ಪುವು
ದನವರತಂ ಶೋಭೆಯಿಂ ಕರಂ ಗಿರಿನಗರಂ ೧೫

ಆ ಪುರವನಾಳ್ವಂ ವಿಶ್ವಸೇನನೆಂಬ ಮಹಾಮಂಡಳಿಕನಾತನ ರಾಜಶ್ರೇಷ್ಠಿಯನ್ವಯ ಶುದ್ಧನುಂ ಪ್ರಸಿದ್ಧನುಮಪ್ಪ ದಯಾಮಿತ್ರಸೆಟ್ಟಿಯೆಂಬ ಪರದನಿರ್ಪನಾತಂ

ಸಿರಿಯೊಳ್ ಕುಬೇರನಂ ತ್ರ
ಸ್ತರಿಯಾಡುವನಹಿಪನೊಡನೆ ಭೋಗಕ್ಕಂ ಮ
ಚ್ಚರಿಸುವನುದಾರಗುಣದೊಳ್
ಪುರುಡಿಸುವಂ ಕಲ್ಪವೃಕ್ಷದೊಳ್ತದ್ವಣಿಜಂ ೧೬

ಅಂತು ನೆಗೞ್ತೆವೆತ್ತು ಸುಖಸಂಕಥಾವಿನೋದದಿಂ ಪಲವುಕಾಲಂ ಪೋಪುದುವೊಂದು ದಿವಸಂ ತನ್ನೊಳಿಂತೆಂದಂ :

ಪುರುಷಂ ಧನಮೊನಗುಂಟೆಂ
ದಿರಲಾಗದು ದ್ರವ್ಯಮುಳ್ಳೊಡಂ ದ್ರವ್ಯಮನಾ
ರ್ಜಿಪುದೇಕೆನೆ ವಿತ್ತಂ ತಾಂ
ದೊರೆಕೊಳೆ ಕೇಳಿಹಪರಂಗಳೆರಡುಂ ಸಾಧ್ಯಂ ೧೭

ಎಂದು ಪರದುವೋಪೆನೆಂಬ ಬಗೆಯುಂ ತಂದು ಯಥೋಚಿತಮಪ್ಪ ಭಂಡಮುಂ ಕೊಂಡು ಶುಭದಿನದೊಳ್ ಪೊಱವೀಡಂ ಬಿಟ್ಟು ತನ್ನನಾಶ್ರಯಿಸಿ ಬರ್ಪವರ್ ಬರ್ಪನ್ನೆವರಮಿರ್ಪನ್ನೆಗಂ,

ಕೊರಲ ಪೊಸಜನ್ನಿವರಮೊ
ಪ್ಪಿರೆ ನಿಡುಬೊಟ್ಟೆಸೆಯೆ ದರ್ಭೆ ಕರಮತಿಶಯದಿಂ
ಬೆರಳೊಳ್ ರಂಜಿಸೆ ಕಾಶಾಂ
ಬರಮೆಸೆದಿರೆ ಬಂದು ನಿಂದು ಭೂಸುರನೊರ್ವಂ ೧೮

ವೇದರುಕ್ಕಂ ಪೇೞ್ದಕ್ಷತೆಯನೀವುದುಂ ದಯಾಮಿತ್ರಸೆಟ್ಟಿ ನೋಡಿ ನಿಮ್ಮ ಪೆಸರೇನೆಂದೆತ್ತಣಿಂ ಬಂದಪ್ಪಿರಿನ್ನೆಲ್ಲಿಗೆ ಪೋದಪ್ಪಿರಿಲ್ಲಿಗೇಂ ಕಾರಣಂ ಬಂದಿ ರೆಂದು ಬೆಸಗೊಳ್ವುದುಂ ಪಾರ್ವನಿಂತೆಂದಂ

ವಸುಭೂತಿಯೆಂಬುದೆನ್ನಯ
ಪೆಸರುನ್ನತಿವೆತ್ತ ತೆಂಕನಾಡಿಂ ಬಂದೆಂ
ವಸುಧೆಗೆಸೆದಿರ್ದ ಗಂಗೆಯ
ನಸಹಾಯನೆಯರ್ತಿವೆರಸು ಮೀಯಲ್ಕೆಂದಾಂ ೧೯

ಎಂದು ಮುಂದಡವಿಯಪ್ಪುದಱಿಂ ಕ್ರೂರಮೃಗಂಗಳಿಂದಾನುಂ ವನ

ಚರರಿಂದಾನುಂ ಪ್ರಾಣಭಯಮಕ್ಕುಮೆಂದಂಜಿ ನೆರವಂ ಪೊಲಿನೊಳಱ ಸುತ್ತುಮಿರ್ದು ನಿಮ್ಮ ಪೋಗಂ ಪುರಜನಂ ಪೇೞೆ ಕೇಳ್ದು ನಿಮ್ಮ ನೆರವನಾಶ್ರಯಿಸಿ ಬಂದೆನೆಂಬುದುಂ ಸೆಟ್ಟಿ ಕರಮೊಳ್ಪಿತ್ತು ಬನ್ನಿಮೆನೆ ವಸುಭೂತಿ,

ಕರಮೊಸೆದು ರಾಗದಿಂ ಪೆ
ರ್ಚಿರೆ ಸೆಟ್ಟಿ ಮನೋನುರಾಗದಿಂದೊಡನೆಯವರ್
ಬರೆ ನಯದಿಂ ಪಿರಿದು ಬಲಂ
ಬೆರಸು ಮಹೋತ್ಸಾಹಚಿತ್ತದಿಂ ಮಱುದಿವಸಂ ೨೦

ಮುಪ್ಪತ್ತಿರ್ವರ್ಪೆಂಡಿರುಮಂ ಬಂಧುಜನಮುಮಂ ಜ್ಯೇಷ್ಠಪುತ್ರನುಮಂ ಕರೆದು,

ಸಂತತಂ ಮುನಿಸಂಕುಳಕ್ಕೆಱೆದನ್ನಮಂ ಜಿನಪೂಜೆಗೋ
ರಂತೆ ಬೇಳ್ಪ ಸಮಸ್ತವಸ್ತುವ ಸಾರಿಸಾರಿಗೆ ದಾನಮುಂ
ಸಂತಸಂ ಮಿಗೆ ನಿಮ್ಮನಾಶ್ರಯಿಸಿರ್ಪ ಭವ್ಯಜನಕ್ಕೆ ನಾ
ನೆಂತು ಮಾಡುವೆನೆನ್ನ ಬರ್ಪಿನಮಂತೆ ಮಾಡಿ ನಿರಂತರಂ ೨೧

ಎಂದು ಕೈಮುಗಿದು ಬೇಡಿಕೊಂಡು ಭರದಿಂದೊಪ್ಪೈಸಿ ಪೊಱಮಟ್ಟು ಪಯಣಂಬೋಗುತ್ತುಂ ತನಗೆ ದಿವಸಕ್ಕೆ ಮೂಱುಗಳಿಗೆವರಂ ಧರ್ಮಶ್ರವಣಮಂ ಕೇಳ್ದಲ್ಲದುಣ್ಣೆನೆಂಬ ವ್ರತಮುಂಟಪ್ಪುದಱಿಂ ಬಿಟ್ಟಬೀಡುಗಳೊಳ್ ಸಕಲ ಶ್ರಾವಕರ್ಗೆ ಧರ್ಮಮಂ ಪೇಳ್ವ ದಯಾಮಿತ್ರಸೆಟ್ಟಿಯ ಧರ್ಮಶ್ರವಣಕ್ಕೆ ವಸುಭೂತಿ ಕಳಕಳಿಸಿ ನಕ್ಕು ತನ್ನೊಳಿಂತೆಂದಂ

ಅಕಟಕಟ ವೈಶ್ಯಜಂ ಭಾ
ವಕನಲ್ಲಂ ಲಜ್ಜೆಗೆಟ್ಟ ಸವಣರ ಮಾತಂ
ನಿಕರಕ್ಕೆ ನಂಬಿ ಠಕ್ಕಿಂ
ಗೆ ಕರಂ ಮತಿಗೆಟ್ಟು ಗತಿಯನಱಿಯದೆ ಕೆಟ್ಟಂ ೨೨

ಕುಲಮಂ ಮಾಸಿಸಿ ವಿವಾಹಮಂ ತೊಱೆದು ಕಂದರ್ಪೇಸೆ ಮೆಯ್ಯೊಳ್ ಮಹಾ
ಮಲಮಂ ತಾಳ್ದಿದ ಕಷ್ಟರಂ ಸವಣರಂ ಕಂಗೆಟ್ಟರಂ ಕಂಡು ಸಂ
ಚಲಚಿತ್ತಂ ಕುಲದೈವಮೆಂದು ಪದಪಿಂ ಕೊಂಡಾಡುವಿಂತಪ್ಪ ಗಾ
ವಿಲನಂ ಗಾಂಪನನೆಗ್ಗನಂ ಜಡನನಾಂ ಕಾಣೆಂ ಮಹೀಚಕ್ರದೊಳ್ ೨೩

ಎಂದು ನಾನಾವಿಧದಿಂ ದೂಷಿಸಿ ಮತ್ತಂ ಸ್ಪೈರಿಸಲಾಱದೆ ಈತನ ಧನಮುಂ ಬುದ್ಧಿಯುಂ ವೃಥೆಯಾಗದಂತೆನ್ನ ಬಲ್ಲ ಮಾರ್ಗದಿಂ ತಿಳಿಪಿ ಬೞಕ್ಕೀ ಧರ್ಮಮಂ ಪತ್ತುವಿಡಿಸಿ ಮದೀಯಧರ್ಮದೊಳ್ ಪತ್ತಿಸುವೆನೆಂಬ ಬಗೆಯಂ ತಂದು ಸೆಟ್ಟಿಗಿಂತೆಂದಂ

ವರವಸ್ತುವನಱವೆಡೆಗಂ
ಪರದರ್ಕಡುಜಾಣರೆಂದು ಕರಮಾದರದಿಂ
ನರನಾಥಪೂಜಿಸುವ
ರ್ಧರೆ ಪೊಗೞ್ವದು ವಸ್ತುಪುರುಷರೆಂದುೞ ನಿಮ್ಮಂ ೨೪

ಎಲ್ಲೆಲ್ಲ ವಸ್ತುಗಳುಮಂ
ಬಲ್ಲಿರ್ನಿಮ್ಮನ್ನರಿಲ್ಲ ಬುದ್ಧಿಗೆ ನೀವುಂ
ನಿರ್ಲಜ್ಜರಪ್ಪ ಸವಣರ
ಸೊಲ್ಲಿಂಗೊಳಗಾದುದಕ್ಕೆ ನಾಂ ಬೆಱಗಾದೆಂ ೨೫

ಮಾಯಮನೆ ಬೀಸಿ ಪೆಱರನು
ಪಾಯದೆ ಠಕ್ಕಿಕ್ಕಿ ದೇವಕಾರ್ಯದೊಳಿನಿಸುಂ
ನೋಯದೆ ಸುಖಿಯಿಪ ಸವಣರು
ಪಾಯಮನಿಂ ನಿನ್ನೊಳಣ್ಣ ಭಾವಿಸಿ ನೋಡಾ ೨೬

ಮಲಮಂ ಧರಿಯಿಸಿ ನಾಣಂ
ತೊಲಗಿಸಿ ನಿರ್ಗ್ರಂಥಮಿರ್ದು ಸೊಂಬಿಂ ಪಲ್ಲಂ

ಸುಲಿಯದೆ ಮೀಯದೆ ಮಿಳ್ಕದೆ
ಕುಲದಿಂ ಕೆಟ್ಟವರನಣ್ಣ ನೀಂ ಮನ್ನಿಪುದೇ ೨೭

ಮತ್ತಂ ಭಾವಿಸುವೊಡವರ ಮಾಟಮೆಲ್ಲಂ ಕೂೞ್ಕಾರಣಮಲ್ಲದೆ ಗತಿಕಾರಣಮಲ್ಲದು, ಗತಿವಡೆವೆನೆಂಬುದು ಕಾಯಕ್ಲೇಶಂ ಬೇೞ್ಪುದು; ಆ ಕಾಯಕ್ಲೇಶಂ ನಿಮ್ಮ ನಚ್ಚಿನ ಸವಣರ ಮೆಯ್ಯೊಳೆಳ್ಳನಿತುಮಿಲ್ಲ; ನೀನವರುಮನವರ ದೈವಮುಮಂ ಕೊಂಡಾಡುವ ಮರುಳಾಟಕ್ಕೆನಗೆ ಪಿರಿದುಂ ವಿಸ್ಮಯಮಾದಪುದೆಂಬುದಂ ದಯಾಮಿತ್ರಸೆಟ್ಟಿ ಮುಗುಳ್ನಗೆನಕ್ಕು ತನ್ನೊಳಿಂತೆಂದಂ

ಬೇಡಂ ಮಾಣಿಕಮೊಂದಂ
ಕಾಡೊಳ್ ಕಂಡೊರ್ಮೆ ಮೆಲ್ದು ಪಗಿನಲ್ಲೆಂದೀ
ಡಾಡಿದನೆಂಬೀ ನಾಣ್ಣುಡಿ
ನಾಡೆಯುಮೆಸೆದಪುದು ದುರಿತವಶದಿಂದಿವನೊಳ್ ೨೮

ಬೆಳಗಿನೊಳಂಕಾಣದು ನಿಶಿ
ಯೊಳ್ಕಾಣ್ಬುದು ಪೆಗ್ಗಣಕ್ಕೆ ನಿರ್ಗುಣರ್ಗಂತು
ಜ್ಜ್ವಳ ಧರ್ಮಮನಱಿಯದೆಯು
ಮ್ಮಳವಂ ಪೊರ್ದುವುದು ಜಡರ್ಗೆ ಸಹಜಮೆನಿಕ್ಕುಂ ೨೯

ಮದ್ದುಕುಣಿಕೆಯಂ ತಿಂದಂಗೆ ಕಲ್ಲುಂ ಮಣ್ಣುಂ ಮರನುಂ ಪೊಂಬಣ್ಣಮಾಗಿ ತೋರ್ಪಂತೆ ಕರ್ಮದ ತೀವ್ರತೆಯಿಂದೀ ಪಾರ್ವಂಗೆ ಲೌಕಿಕಧರ್ಮಮೆ ಧರ್ಮಮಾಗಿ ತೋರ್ಪುದದುಕಾರಣದಿಂ ಸದ್ಧರ್ಮಮನೊರ್ಮೆಯೆ ಪೇೞ್ದನಪ್ಪೊಡೆ ಪಿತ್ತಜ್ವರಮುಳ್ಳವಂಗೆ ಕುದಿವ ಪಾಲನೆಱೆವಂತಾನುಂ, ಕಪಿಯ ಕೊರಲೊಳ್ ಪೂಮಾಲೆಯಿಕ್ಕಿದಂತಾನುಂ, ಶಿಶುವಿನ ಕೆಯ್ಯೊಳ್ ಮಸೆದ ಬಾಳಂ ಕೊಟ್ಟಂತಾನುಮಕ್ಕುಮದಱಿಂದುಪಾಯದೊಳೆ ತಿಳಿಪಲ್ವೇೞ್ಕುಮೆಂದು ದಯಾಮಿತ್ರಸೆಟ್ಟಿ ಪತ್ತೆಂಟುದಿವಸಂ ಪೋಗಲ್ ಮತ್ತೊಂದು ದಿವಸಂ

ಬಱಿಸಿ ವಸುಭೂತಿಯಂ ವಿ
ಷ್ಟರಮಂ ಕುಡವೇೞ್ದು ಪಿಱಿದು ಮನ್ನಣೆಯಿಂದಾ
ದರದಿಂ ವೀಳಯಮುಮಂ ಕ
ರ್ಪೂರಸಹಿತಂ ಕೊಟ್ಟು ವೈಶ್ಯಸುತನಿಂತೆಂದಂ ೩೦

ಭಟ್ಟರೆ ಕೇಳಿಂ ನಿಮ್ಮಂ
ಬಿಟ್ಟು ಕೆಲರ್ಕುಲಜರೊಳರೆ ನಂಬಿದೆನೀಗಳ್
ನೆಟ್ಟನೆ ನಿಮ್ಮಿಂ ಸುಗತಿಯ
ಬಟ್ಟೆಯ ತೆಱನಱಿಯಲಾಯ್ತು ಪುಣ್ಯೋದಯದಿಂ ೩೧

ಎಂಬುದುಂ ವಸುಭೂತಿ ಮಹಾಭೂತಿವೆತ್ತರಂತೆ ಮನದೊಳ್ ಪೆರ್ಚಿ ದಯಾಮಿತ್ರಸೆಟ್ಟಿ ಮೆಲ್ಲನಿಂತೆಂದಂ:

ಎಮ್ಮನ್ವಯದಿಂ ಬಂದುದು
ತಾಮ್ಮಿಗಿಲಪ್ಪೊಂದು ನೋಂಪಿಯಾನೋಂಪಿಯುಮಂ
ನಾಮ್ಮಱಿದೆಂ ಸಂತತಮೆಂ
ತೆಮ್ಮಯ್ಯಂ ನೋಂಪನಂತು ನೋನುತುಮಿರ್ಪೆಂ ೩೨

ಕೇಡಿಲ್ಲದೊಂದು ಸುಖಮಂ
ಮಾಡುವೊಡರ್ಹತ್ಪದಾಂಬುಜಾತಮೆ ಮಾೞ್ಕುಂ
ಮಾಡವು ಪೆಱವೆಂಬೀ ಬಗೆ
ಕೂಡಿದೊಡಾತಂ ಕೃತಾರ್ಥನಾತನೆ ಧನ್ಯಂ ೩೩

ಅದೆಂತೆಂದೊಡೆ ಮನೋಜಮದಹರನುಂ ಸುರಾಸುರಮಕುಟತಟಘಟಿತ ಚರಣಾರವಿಂದನುಮಪ್ಪರ್ಹತ್ಪರಮೇಶ್ವರನೆಮ್ಮನ್ವಯದಿಂ ಬಂದ ಕುಲದೈವಮು ಮಿಷ್ಟದೈವಮುಮಪ್ಪುದಱಿಂ ಜಿನೇಶ್ವರಸಾಕ್ಷಿಯಾಗಿ ಮಹರ್ಷಿಯರ್ಕಳಿಂ ನೋನಿಸಿ ಬೇೞ್ಪುಧಂ ಕುಡುವೆನೀಗಳ್. ಆ ನೋಂಪಿಯಂ ನೋಂಪ ಕಾಲ

ಮಾಸನ್ನಮಾಯ್ತಿಯವಸರದೊಳ್ ಋಷಿಯರಾರುಮಿಲ್ಲ ಇಲ್ಲದೊಡಮೇ ನಾಯ್ತು,

ಪಾಲೇಽಮರ್ದೆಂಬಂತಿರೆ
ಭೂಲೋಕಸ್ತುತ್ಯರಪ್ಪ ನಿಮ್ಮನ್ನೊರ್ವರ್
ಸಾಲದೆ ಜಗದೊಳ್ ನೀವಿರೆ
ಮೇಲೆನಿಸುವರಾರೊ ಕುಲದೊಳಂ ಶೀಲದೊಳಂ ೩೪

ನಿಮಗೆ ಮಾಡಿದ ದಾನಮುಂ ಪಾಲುಕ್ಕಿವುಮ್ಮಡಿಸುವಂತಿಮ್ಮಡಿಯಕ್ಕುಮದು ಕಾರಣದಿನಿಲ್ಲಿ ನೋಂಪಿಯಂ ನೋಂತು ನೋಂಪಿಯ ತದನಂತರಂ ಬೇಟ್ಪನಿತು ದಕ್ಷಿಣೆಯುಂ ಬೇಡಿಕೊಳ್ಳಿಮೆನೆ ಸೆಟ್ಟಿಯ ಮಾತಿಂಗೆ ವಸುಭೂತಿ ಮನದೊಳ್ ಗುಡಿಗಟ್ಟಿ,

ಚಿತ್ತರದಿಂ ಕುರುಡಂ ಕ
ಣ್ಬೆತ್ತಂತಿರೆ ರಾಗವೊದವೆ ಬೆಲೆವೆಣ್ ಪೆಣ್ಣಂ
ಪೆತ್ತಂತಿರೆ ಪಾರ್ವಂ ಮ
ಣ್ಬೆತ್ತಂತಿರೆ ಪಿರಿದು ಸಂತಸಂ ಮಿಗೆ ಮನದೊಳ್ ೩೫

ಮರ್ದನಗಳಲ್ಪೋದಂ ನಿದಿಗಂಡಂತೆ ಪೆರ್ಚಿ ಕರಮಶುಚಿಗಳಪ್ಪ ಸವಣರ್ಗೆ ಕುಡುವಾತನೆಮ್ಮನ್ನರಪ್ಪ ಸದ್ಬ್ರಾಹ್ಮಣರ್ಗೆ ಕುಡುವನೆಂಬುದಾವಚೋದ್ಯಂ,

ಒದವಿದ ಪೊನ್ನಪ್ಪೊಡೆ ಜೋ
ಳದ ರಾಸಿಯೊಲಿರ್ಪುದಿಲ್ಲಿ ತಾನೇನಂ ಬೇ
ಡಿದೊಡಂ ಬೇಡಿದುದಂ ಕುಡು
ವುದು ಪುಸಿಯೇ ವೈಶ್ಯನಂದನಂ ಪುಸಿದಪನೇ ೩೬

ನೆರಪಲ್ಬಾರದ ವಿತ್ತಂ
ದೊರೆಕೊಂಡುದು ನೆಲೆಗೆ ಪೋಗಿ ಮಕ್ಕಳೊಳಂ ಪೆಂ

ಡಿರೊಳವೊಡಗೂಡಿ ಸುಖದಿಂ
ಚರಿಯಿಸುವೆಂ ಮೆಚ್ಚಿದಂದದಿಂ ಭೋಗಿಸುವೆಂ ೩೭

ಎಂದು ಮನದೊಳೆ ಪಾಲ್ಗುಡಿದು ನೋಂಪಿಯುಂ ನೋಂಪ ಕ್ರಮಮುಂ ಪೇೞ್ವೆನೆ ವೈಶ್ಯವಂಶಲಲಾಮನಿಂತೆಂದನಾ ನೋಂಪಿ ತೀರ್ವನ್ನಂ ಗ್ರಾಸದೊಳ್ ಕಳವೆಯ ಕೂೞಂ ತಿಳಿದುಪ್ಪಮುಂ ಪೆಱರೊರ್ವರ್ಬಡಿಸೆ ಕಯ್ಯೊಳ್ ಮೋನದಿಂದುಂಡು,

ಮಱುದಿನಮಾಪ್ರೊತ್ತಪ್ಪಿನ
ಮಱಿಕೆಯ ನೀರೂಟ ತಂಬುಲಂಗಳ ಮಾತಂ
ತೊಱೆದು ಮತಿಮಱೆದು ಮನೆಯೊಳ್
ಪೊಱಮಡದೋದುತ್ತುಮಿರ್ಪುದಿರುಳುಂ ಪಗಲುಂ ೩೮

ಸಲೆ ಮಱೆಯೊಳ್ಪಡುವುದು ಮೈ
ಮಲವೇಱಿತ್ತೆಂದು ಮೀಯಲಾಗದು ಪಲ್ಲಂ
ಸುಲಿಯದೆ ವನಿತೆಯರಂ ಪಂ
ಬಲಿಸದೆ ತಲ್ಲಣಿಸದಿರ್ಪುದತ್ಯುತ್ಸವದಿಂ ೩೯

ಮತ್ತಂ ನೋಂಪಿಯ ಪ್ರಾರಂಭದೊಳಂ ನೆಱವಿಯೊಳಂ ತಲೆಯ ರೋಮಂಗಳೆಲ್ಲಮಂ ಪಱಿಯಿಸಿ ರಾಗದಿನೆಮಗೀವುದಿತ್ತು ಮನದೊಳುಮ್ಮಳಿಸದೊಂದೆಡೆಯೊಳ್ ಮುನ್ನಿನ ವಿನೋದಂಗಳಂ ಮಱೆದಪ್ಪೊಡಂ ನೆನೆಯದೆ ಸ್ವಾಧ್ಯಾಯಪರನಾಗಿ ಬೀಡಿನೊಳಾದಿಸಿತಕ್ಕಂ ವಿಸ್ಮಯಕ್ಕಂ ವಸ್ತ್ರಕ್ಕಮುಪೇಕ್ಷೆಯಿಂದೆಳಸದಿಂತೆರಡು ತಿಂಗಳ್ವರಂ ಎಮ್ಮ ಪೇೞ್ದೋಜೆಯಿಂ ನೋಂಪುದೆಂದು ಪೇೞ್ವುದುಂ,

ಒಳಗಱಿಯದನಿತುಮಂ ಸಂ
ಚಲಚಿತ್ತಂ ಮಾೞ್ಪೆನೆಂದು ಪೂಣ್ದಂ ತನ್ನೊಂ

ದಳವಱಿಯದೆ ಕಡುಲೋಭದಿ
ನೆಳಗಱು ಭಯಮಱಿಯದೆಂಬವೊಲ್ತದ್ವಿಪ್ರಂ ೪೦

ಆರಯ್ದು ನೋಡಿ ನಗುವವ
ರಾರೆನ್ನಂ ದೂರದೇಶಮಾಂ ನೋಂಪೆನಿದಂ
ಸ್ವೈರಣೆಯಿಂ ಚೆಂಬೊಂಗಳ
ನೋರಂತಿರೆ ಬೇಡಿಕೊಳ್ವೆನೆನ್ನಾರ್ಪನಿತಂ ೪೧

ಉಸಿರದೆ ಗಳಿಗೆವರಂ ಸೈ
ರಿಸಿ ತಲೆಯಂ ಪಱಿಸಿಕೊಂಡು ಚೆಂಬೊನ್ನಂ ಸಂ
ತಸದಿಂ ಕೈಕೊಳ್ವೆಂ ಭಾ
ವಿಸುವೊಡೆ ತಲೆಯಲ್ಲಿ ಮತ್ತೆ ಪುಲ್ಮೊಳೆದಪುದೇ ೪೨

ಉಂಬುದು ಕಳವೆಯ ಕೂೞ್ಗಡ
ತಂಬುಲಮಿಪ್ಪೊರ್ತ್ತಿನುಣಿಸು ಮೀಹಂ ಕೇಳಿ
ಲ್ಲೆಂಬಿನಿತೆ ಗಡಂ ತಿಂಗಳು
ವೆಂಬುದು ತಾಂ ದೂರಮಾಯ್ತೆ ಪೇೞೀಂ ಗಹನಂ ೪೩

ಎಂದು ತನ್ನೊಳ್ ರಾಗಿಸುತ್ತಿರೆ ವಣಿಗ್ವಂಶಲಲಾಮಮಂ ಬೀಡಿನುಪ್ಪಯಣಂ ಮಾಡಿ ಮಱುದಿವಸಂ ಸಮಸ್ತದುರಿತವಿಳಯನಪ್ಪ ಜಿನಸ್ವಾಮಿಗೆ ತೂರ್ಯ್ಯರವ ಮೆಸೆಯೆ ಮಹಾಭಿಷೇಕಪೂಜೆಯಂ ಮಾಡಿಸಿ ವಸುಭೂತಿಯಂ ಬಡಗಮುಖನಾಗಿ ಕುಳ್ಳಿರಿಸಿ,

ತಲೆಯಂ ಬಲುದಡಿಗರ್ಕಳೆ
ನಿಲಲಾಱದೆ ಸುಂಟಿದಿಂದ ಕೋಡಗದಂತು
ಮ್ಮಳಿಸಿ ಕಳವಳಿಸಿ ನೋವಿಂ
ತಲೆಯಂ ತಿರಿಪುತ್ತುಮಂಜಿ ಕೆಟ್ಟೆನೆನುತ್ತುಂ ೪೪

ನಡುಗೆ ಶರೀರಂ ಪಲ್ಲಂ
ಗಿಡಿಗಿಱಿದೆರ್ದೆಗೂಡುವಾಯೆ ಪಂದೆಯಮೇಲ್ವಾ
ವಡರ್ದಂತಿರೆ ದೇಹಂ ಮರ
ವಡೆ ಕಣ್ಣೀರ್ಸುರಿಯೆ ತಳದಿನದನೊತ್ತುತ್ತುಂ ೪೫

ಬಿಡದೌಡುಗರ್ಚಿ ನೋವಿಂ
ದಡಿಗಡಿಗಹಹಾಯೆನುತ್ತು ಮೆಡಗಯ್ಯಿಂದಂ
ತಡವರಿಸುತ್ತುಂ ಸಾಸವೆ
ಗುಡಿದಂತಿರೆ ಕರಮೆ ಮಱುಗಿ ತಳವೆಳಗಾದಂ ೪೬

ಮತ್ತಂ ಸಾಕ್ಷಿಯಿಲ್ಲದೆ ಸಾಲಂಗೊಟ್ಟೊಕ್ಕಲಿಗನಂತೆ ಸುಯ್ಯುತ್ತುಂ, ಪೇನುಳ್ಳನಂತೆ ತಲೆಯಂ ತುಱಿಸುತ್ತುಂ, ಮುಳ್ಳೊಕ್ಕವನಂತೆ ಕುಸಿಯುತ್ತುಂ, ಸೂಲೆಯುಳ್ಳವನಂತೆ ಕವಿದು ಬೀೞುತ್ತುಂ, ನಿಶ್ರೇಯಸಶ್ರೀಯ ವಿವಾಹ ಗೇಹದ ಭೂಮಿ ಶೋಧನೆಯೆನಿಪ ಲೋಚನೆಂತಾನುಂ ಸೈರಿಸಿ,

ವಿನಯ ಪಯೋನಿಧಿ ಸತ್ಯದ
ಮನೆಯೆನಿಸಿದ ಸೆಟ್ಟಿ ಪೇೞ್ದ ಮಾರ್ಗದೊಳಂತಂ
ದಿನದಿನಮುಪವಾಸಮನಿ
ರ್ದನುನಯದಿಂದೇಕಚಿತ್ತದಿಂ ಮಱುದಿವಸಂ ೪೭

ಅಯಾಚಿತವ್ರತಮಪ್ಪುದಱಿಂ ಸೆಟ್ಟಿ ನಿಱಿಸೆ ಮನೆಗೆ ಪೋಗಿ ವೈಶ್ಯೋತ್ತಮಂ ಪೇೞ್ದೋಜೆಯಿಂ ನಿಂದಿರ್ದು ಪಾಣಿಪಾತ್ರೆಯೊಳ್ ಶರ್ಕರೆವೆರಸಿದ ಪಾಲಂ ಕುಡಿದು ತದನಂತರಂ,

ಸೊಗಯಿಪ ಘೃತಪೂರಂ ಹೋ
ಳಿಗೆ ಮಂಡಗೆ ತಱಗು ನಾಡೆ ರುಚಿವೆರಸಿದ ಲ

ಡ್ಡುಗೆ ಚಕ್ಕುಲಿ ಗಾಱಿಗೆ ಪೂ
ಱಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ೪೮

ಕಳವೆಯ ಕೊೞ್ಮಗಮಗಿಸುವ
ತಿಳಿದುಪ್ಪಂ ತಿವುಡುಗಳೆದ ಪೊಂಬೆಸಜ ಮಹೋ
ಜ್ಜ್ವಳಮಪ್ಪ ಕಂಪಿನಿಂಪಿನ
ನಿಳಯಮುಮೆನಿಸಿರ್ದ ಸವಿಯಿನೊದವಿದ ತೊಃಪೆಯಂ ೪೯

ಅಂತಮೃತದೊಳ್ ಪುರುಡಿಸುವ ದಿವ್ಯಾಹಾರಮಂ ಕಯ್ಯೊಳಿಕ್ಕುವುದು ಮಾಕಂಠಂ ಉಂಡು ಬೞಲ್ಕೆವೋಗಿರ್ಪುದುಂ,

ಬಾೞೆಯ ಕರ್ಜೂರದ ಕಿ
ತ್ತೀಳೆಯ ಕಂಮರದ ರಂಜಿಪಿಮ್ಮಾವಿನ ಪೇ
ಱೀಳೆಯ ನಾಱಂಗದ ಕಂ
ಚೀಳೆಯ ತನಿವಣ್ಣನಿಕ್ಕೆ ಮೆಲ್ದಾದರದಿಂ ೫೦

ತಣ್ಗರಗದ ತಣ್ಗೋಡುವಾಲಿನೀರಂ ಆರ್ಪನಿತಂ ಕುಡಿದು ಸಂತೋಷದಿಂ ನುಡಿದು ದಯಾಮಿತ್ರಸೆಟ್ಟಿಯಧ್ಯಕ್ಷಂ ಬೆರಸು ವಿಹಾರಕ್ಕೆ ಬಂದು ಕಾಷ್ಠಾಸನದೊಳ್ ಕುಳ್ಳಿರ್ದು ತನ್ನೊಳ್

ಇವು ಲೇಸವು ಲೇಸೆಂಬೀ
ವಿವರದೊಳೇಂ ಸಕಲಭಕ್ಷ್ಯಮುಂ ಬಾಡುಗಳುಂ
ಸವಿಯೊಳ್ ಸಾಸಿರಮಡಿ ಮಿ
ಕ್ಕುವು ಭಾವಿಸಿ ನೋೞ್ಪೊಡಿಂದ್ರನುಣ್ಬಮೃತಮುಮಂ ೫೧

ಎಂದು ತನ್ನತೂಟಂ ತನಗೆ ಜನ್ಮಾಪೂರ್ವಮಪ್ಪುದಱಿಂ ಮಹಾವಿಸ್ಮಯಂ ಬಟ್ಟು ಇರುಳ್ಕಂಡ ಕನಸುಗಳಂ ಪಗಲ್ನೆನೆವಂತೆ ನೆನೆಯುತ್ತುಂ ಪಗಲೆಲ್ಲಂ

ಸಂತಸದಿಂದಿರ್ದು ನೇಸರ್ಪಟ್ಟೊಂದು ಜಾವಕ್ಕೆ ತೊಟ್ಟನೆ

ಅಸದಳಮೆನಿಸುವ ತೀವ್ರದ
ತೃಷೆ ಮೊಕ್ಕಳಮಾಗೆ ನಾಡೆಯುಂ ಮನದೊಳ್ಸೈ
ರಿಸಲಾಱದೆ ತಲ್ಲಣದಿಂ
ಬಿಸುಸುಯ್ದುಮ್ಮಳಿಸಿ ಬಾಬಲರಿದಾಯ್ತೆನುತುಂ ೫೨

ಕೋಡಗವಮಂ ಪುಲ್ಲೊಳ್ ಮುಚ್ಚಿ ಸಿಡಿಮಿಡಿಗೊಂಬಂತೆ ಸಿಡಿಮಿಡಿಗೊಳುತ್ತುಂ ಪೆಱರ್ಗೆ ಪೇಬಲಂಜಿ ಲಜ್ಜೆಯಿಂ ಮೂಗಿಯ ಕೋಗಿಲೆಯಂತೆ ಬಾಯ್ವಿಟ್ಟಾಡದೆ ಮಳಲೇರಿಯಂತೆ ಜಱಿನೆ ಜರಿದು, ತರುವಲಿಯ ತಲೆಯ ಕಿರೀಟಮನಾಲಿಕಲ್ಲ ಮಱಿಕೊಂಡುದೆಂಬಂತೆನಗೀ ಮುನ್ನಿನಿರುಳ್ಗಳಂ ನೋಡಲಿಂದಿನಿರುಳ್ಪಿರಿದಾಯ್ತೀವೊ ಕೆಟ್ಟೆನೆಂದು,

ನೀರಱಿಕ್ಕೆ ಪೆರ್ಚಿ ನಿಲಲುಂ
ಸೈರಿಸಲುಂ ಬಾರದಳ್ಕಿ ತನ್ನಿಂದಂ ತಾ
ನೋರಂತೆ ಕುದಿದು ಮಱುಗುವ
ಸಾರಂಗದ ಪೋಱಿಯಂದಮಂ ನೆಱೆ ಪೋಲ್ತಂ ೫೩

ಅಂತಿರುಳ್ ನಾಲ್ಕುಂ ಜಾವಮುಂ ಪೆರ್ಬಾವಿನಂತೆ ಮಂಡಲಂಗೊಳ್ಳುತ್ತುಂ, ಮಱಿಯಂ ಪಾರ್ಪೊಕ್ಕಲಿಗನಂತೆ ಗಗನಮಂಡಲಮಂ ನೋಡುತ್ತುಂ, ಕಪ್ಪೆಯಂತೆ ತಣ್ಪುಪ್ಪೆಡೆಯೊಳ್ ಪತ್ತುತ್ತುಂ, ಚೊಚ್ಚಲ್ ಪೆಱುವಳಂತೆ ತೊಬಲುತ್ತುಂ, ಕಣ್ಣೊಳೆ ಬೆಳಗಾಗೆ,

ನಿಲಲಾಱದಲಸಿ ಪೋದೊಡೆ
ಪಲವುಂ ಚೆಂಬೊನ್ನ ಪಡಪು ಕೆಟ್ಟಪುದು ಕರಂ
ಕಲಿಯಾಗಿ ನಿಂದೆನಪ್ಪೊಡೆ
ನಿಲಲಾಱಿದು ನೀರ ದೆಸೆಯನುಱಿದಸುವಿನಿಸುಂ ೫೪

ಮತ್ತಂ ದಯಾಮಿತ್ರಸೆಟ್ಟಿ ನಿಱಿಸೆ ಮನೆಗೆ ಪೋಗಿ ಮನದ ಕಾಂಕ್ಷೆಯಿಂ ಮುನ್ನಿನಂತುಂಡು ಮುನ್ನಿನ ಮಱುಕದಿಂದಿಮ್ಮಡಿ ಮಱುಕಮಾಗೆ ಮಱುದಿವಸಂ ಭಕ್ಷ್ಯದ ದೆಸೆಗೆ ಪಕ್ಷಂಗೆಟ್ಟು, ಪಾಲಿಂಗೆ ಬೆರ್ಚಿ ತುಪ್ಪಕ್ಕೆನಿಸಪ್ಪೊಡಂ ಮನಂದರಲಾಱದೆ ತೃಷೆಯೊಳಾದ ಭೀತಿಯಿಂದೊಲ್ಲೆನೆಂಬುದುಂ ವೈಶ್ಯವಂಶಲಲಾಮನಿಂತೆಂದಂ

ಅಂತಿಂತೆನ್ನದೆ ಮುಂ ಪೇ
ೞ್ದಂತುಸಿರದೆ ಮೋನದಿಂದಮುಣ್ಬುದು ನಾನೇ
ನಂ ತಂದಿಕ್ಕಿದೊಡಂ ಗುಣ
ವಂತರ್ಕುಲದೊಡೆಯರೆನಿಪ ನಿಮಗಿದು ಪಿರಿದೇ ೫೫

ಅಱಿಪರಪ್ಪ ರಿಸಿಯರ್ಮೋದಲಾಗಿಯುಸಿರದೆಮ್ಮ ಪೇೞ್ದಂತೆ ಮೋನದಿಂದುಂಬರೆಂದೊಡೆ ಕುಲಜರುಂ ಭೂದೇವರುಮಪ್ಪ ನಿಮಗಿದಾವುದರಿದಾಯ್ತು-ಸಿರದಿರಿಮೆಂಬುದುಂ ಮಱುಮಾತುಗುಡಲಱಿಯದುಮ್ಮಳಿಸಿ ಬೆಮರ್ತುಸಿರದುಣುತ್ತುಮಿಾ ಮಾರ್ಗದಿಂದೇೞಿಂಟುದಿವಸಮಿರ್ದಿರಲಾಱದೆ ತಲ್ಲಣಿಸಿ ನಿಂದುಣಿಸಿನಂದಕ್ಕಲಸಿ "ಕಯ್ಯೊಳುಂಬುದು ರಯ್ಯಮಲ್ಲದು; ಬತ್ತಲೆಯಿರವು ನಿತ್ತರಿಸಲರಿದು; ನೆಲೆವಕ್ಕೆ ಸಲೆ ಕಷ್ಟಂ" ಎಂದು ಸೈರಣೆಗೆಟ್ಟು,

ಕುಂದದಿನಿಸಂ ಮನಕೆ ಬಂದುಣಿಸನುಂಡು ಪದ
ಪಿಂದೆ ಪೆಱತೇಂ ಕೆಱೆಗೆ ಪೋಗಿ ತಿಳಿನೀರಂ
ಮಿಂದು ಬಿಡದೂರೊಳಗಣೊಂದುಲಿವ ಮಾತುಗಳ
ದಂದುಗದೊಳಾರ್ತಿಸಗಿ ಕೂರ್ತಿರದೆ ನಿಚ್ಚಂ ೫೬

ನಿಂದುಣಿಸಿನಿಂದೊಡಲದೊಂದು ತಿನಿಸಿಂ ತೃಷೆಯ
ದೊಂದು ಕುದಿಪಿಂ ತಿಗುಳನಾಡ ಸೆಱೆಯಿಂ ತಾ
ನೊಂದಿದತಿ ದುಃಖದೊಳೆ ಬೆಂದು ನಿಲಲಿನ್ನರಿದಿ
ದೆಂದು ವಸುಭೂತಿ ಪೆಡೆದಳ್ಕಿ ಬಡವಾದಂ ೫೭

ಅಂತು ಗಾಳಿಗೊಡ್ಡಿದ ಸೊಡರಂತೆ ನಡುಗಿ, ಮಟದ ಬೆಕ್ಕಿನಂತೊಳಗ ಹ್ಹೋಡಿಯಾಡಿ, ಬೇಸಗೆಯ ಕೋಣನಂತೆ ನಾಲಗೆಯನುರ್ಚಿ, ಹಾಸುಗೊಂಡ ನಾಯಂತೆ ಸಿಡಿಮಿಡಿಗೊಂಡು, ಹುಣಿಸೆಯ ಕಾಯಂ ತಿಂದರಂತೆ ಚಳಿತು, ಬಡವೊಡಲಂತೆ ಜೋಲ್ದು, ಪಾಱುವಡೆಯದ ಪರದನಂತೆ ಕಂದಿ, ತಣ್ಪೇಱಿದ ಪಱೆಯಂತೆ ದನಿ ಪೊಱಮಡದೆ, ಬಯಲೊೞಕ್ಕಿದ ಮೀನಂತೆ ಮಿಡುಕಿ, ಸಮ್ಯಕ್ತ್ವಚೂಡಾಮಣಿಗಿಂತೆಂದಂ

ಪುಲಿಯ ಮೀಸೆಯನಂಜದುಯ್ಯಾಲನಾಡಲಪ್ಪುದು ನಂಜನೆಂ
ಜಲಿಸಲಪ್ಪುದು ಸಿಂಹಮಂ ಪಿಡಿದೇಱಲಪ್ಪುದು ಕಿಚ್ಚಿನೊ
ಳ್ತೊಲಗದೊರ್ಮೆಯೆ ಪಾಯಲಪ್ಪುದು ಸೊಕ್ಕಿದಾನೆಗೆ ಸಂದು ಮಾ
ರ್ಮಲೆಯಲಪ್ಪುದು ನಿನ್ನ ನೋಂಪಿಗೆ ಗಂಡನಾವನೊ ಸೈರಿಪಂ ೫೮

ಪೇಱಿನ ಮೇಲೆ ಪಾಸಱೆ ಯೇಱಿನ ಮೇಲೆ ಬಡಿಗೋಲ್ ಕೊಲೆಯ ಮೇಲೆ ಕವರ್ತೆಯೆಂಬಂತೆ ಸಂತಾಪದ ಮೇಲೆ ಸಂತಾಪಮಂ ಮಾಳ್ಪ ನಿನ್ನ ನೋಂಪಿಯೆಂಬ ಗರಗಸಕ್ಕೆನ್ನ ಮೆಯ್ಯನೊಡ್ಡಲಾಱೆಂ, ಮತ್ತಮೊಂದೆರಡು ತಿಂಗಳ್ ವಿಶೇಷಮಾಗಿ ನೋಂತುಕೊಟ್ಟಪೆಂ, ಪಿರಿದಪ್ಪೆನ್ನುಮ್ಮಳಿಕೆ ಪೋಪಂತು ನಿಮ್ಮಧ್ಯಕ್ಷಂಬೆರಸು ಕೆಱೆಗೆ ಪೋಗಿ ಮೆಯ್ಯಂ ಕರ್ಚಿಕೊಂಡೊರ್ಮೆಯಿರ್ಮೆ ನೀರಂ ಕುಡಿದು ನಿಮ್ಮ ಬೀಡಿನೊಳೊಂದೆರಡು ಗಳಿಗೆ ಸುಟಿದಾಡುವಂತು ಮಾಳ್ಪುದೆನೆ, ದಯಾಮಿತ್ರಸೆಟ್ಟಿ ಬಾಯ ತಂಬುಲಂ ಸೂಸೆ ಕಳಕಳಿಸಿ ನಕ್ಕು,

ಕಡುಮೂರ್ಖರ್ ತಮ್ಮಿಚ್ಛೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನಮಾರ್ಗದೊಳೀಂ
ನಡೆಯಲ್ ಬರ್ಕುಮೆ ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ ೫೯

ಇಂತು ಪಲವು ನೆಗಱ್ತೆಗಳಂ ಮರಣಪರ್ಯಂತಂ ಬೆಂಬೀಳದಲಸದೋ ಸರಿಸದಾಱೆನೆನ್ನದೆ ಬೆಚ್ಚದೆ ನಡೆಯಿಸುವ ಮಹರ್ಷಿಗಳ ಮನದ ಧೈರ್ಯಮಂ

ಬಣ್ಣಿಪನಾವನವಱೊಳ್ಕಱಿಯುವಪ್ಪೊಂದೆರಡು ಪರೀಷಹಂಗಳ್ಗೆ ಬೆಂಬಿರ್ದ ರಕ್ಕಟಾಯೆಂಬುದುಂ ವಸುಭೂತಿ ವಿಸ್ಮಯಂಬಟ್ಟು,

ಅಳಿಪಿಂದಮುಳಿಯ ಬರ್ದಗೆ
ಯುಳಿಯಂ ಕುಡಿಯಿಸಿದರೆಂಬ ತೆಱದಿಂ ಮುನಿಸಂ
ಕುಳಮುಮುನಾನುರ್ಕಿಂದಂ
ಪಳಿದೊಡೆ ಮುನಿದೆನ್ನ ಸಿಟ್ಟನೆನ್ನೊಳ್ ಕಳೆದಂ ೬೦

ನರೆ ಬಂದನಿತಱೊಳೆ ನರರ್
ಪಿರಿಯರೆ ಜಿನನಾಥ ಸೇವೆಯುಳ್ಳ ಮನುಷ್ಯರ್
ಧರೆಯೊಳ್ ಕೂಸಾದೊಡಮುವ
ರೆರಡಿಲ್ಲದೆ ಪಿರಿಯರವರೆ ಧನ್ಯರ್ ಮಾನ್ಯರ್ ೬೧

ಧರೆ ರಾಜ್ಯಂ ರೂಪು ವೀರಂ ಮಹಿಮೆ ತನುವಿಲಾಸಂ ಬಲಂ ಜೀವಿತತ್ವಂ
ಸಿರಿ ಸೌಭಾಗ್ಯಂ ಧನಂ ಯೌವನಮುಳವು ಬಳಂ ಸೌಖ್ಯಮೆಂದಿಂತಿವೆಲ್ಲಂ
ಸುರಚಾಪಾಕಾರದಂದಂ ದರಿಯ ಮಹಿಜದಂದಂ ಕರಂ ಕಷ್ಟಮೆಂದುಂ
ಸ್ಥಿರಮಲ್ಲೆಂಬೊಂದು ಜೈನೋಕ್ತಿಯ ಮಹಿಮೆಯ ನಿಂದಾನೆ ಕಣ್ಣಾರೆ ಕಂಡೆಂ

ಆರುಮಿದಕ್ಕೆ ನಿತ್ತರಿಸಲಾಱರೆನಿಪ್ಪ ಪರೀಷಹಂಗಳಂ
ಸ್ಥೈರಣೆಯಿಂದೆ ಗೆಲ್ವ ಮುನಿಮುಖ್ಯರ ಸಾರ್ದ ಜಿನೇಂದ್ರಧರ್ಮಮಂ
ಸಾರಮೆನಿಪ್ಪುದಂ ತಿಳಿದು ನಂಬಿದರನ್ಯರನೇಕೆ ಪೊರ್ದುವರ್
ಮೇರುವನೇಱಿ ನೋಡಿದವರ್ಗೀಧರೆ ತಾಂ ಕಿಱಿದಾಗಿ ತೋರದೇ ೬೩

ಎಂದು ತನ್ನೊಳೆ ವಿಚಾರಿಸಿ ವಾತ್ಸಲ್ಯರತ್ನಾಕರಂಗೆ ಕೈಗಳಂ ಮುಗಿದು ನಿಮ್ಮ ಪಿಡಿದ ಧರ್ಮಮೆ ಲೇಸೆಂಬುದನೀಗಳಱಿದೆಂ ನೀನೆನಗೆ ಧರ್ಮದೊಳಾದಭಿಪ್ರಾಯಮುನಱಿಯೆ ಪೇಟಲ್ವೇಟಕ್ಕೆಂಬುದುಂ ಸೆಟ್ಟಿಯಿಂತೆಂದಂ

ಪರಮಾರ್ಥಮುಪ್ಪುದಂ ಮು
ಚ್ಚರಿಸದೆ ಕೋಪಿಸದೆ ಡಂಗೆಗೊಳ್ಳದೆ ಪಕ್ಷ
ಕ್ಕಿರಿದೇಳದೊಂದೆ ಮನದಿಂ
ನಿರುತಂ ಕೇಳ್ವವನೆ ಧರ್ಮದೊಳಗಂ ತಿಳಿಗುಂ ೬೪

ರಸಮಂ ಪೊರ್ದಿ ಸಮಂತು ಲೋಹನಿಕರಂ ಪೊನ್ನಪ್ಪವೋಲುರ್ವಿಯೊಳ್
ರಸಮೆಂಬೀ ಪೆಸರಿಂಗೆ ಕೇರ ರಸದೊಳ್ ಪೊನ್ನಕ್ಕುಮೇ ನೋಡ ಪೊ
ರ್ದಿಸಿ ಸದ್ಧರ್ಮಮನೇನು ನಂಬಿ ಸುಖಮುಪ್ಪಂತಣ್ಣ ನೀಂ ನೋಡ ಭಾ
ವಿಸಿ ಪೊರ್ದಿರ್ದೊಡೆ ಕೊಲ್ಲ ಧರ್ಮದೊಳದೇಂ ಕೈಸಾರ್ಗುಮೇ ತತ್ಸುಖಂ ೬೫

ಎಲ್ಲೆಲ್ಲ ಸುಖಂಗಳೊಳಂ
ನಿಲ್ಲದೆ ನೆರೆದಿರ್ಪೆನೆಂಬ ಮನಮುಳ್ಳೊಡೆ ತ
ಪ್ಪಿಲ್ಲದೆ ಪಿರಿದಾದರದಿಂ
ಕೊಲ್ಲದ ಧರ್ಮಮನೆ ಪಿಡಿಗೆ ನಂಬುಗೆಯಿಂದಂ ೬೬

ಮರಣಂ ಚಿಂತೆ ಭಯಂ ಮದಂ ಮುಳಿಸು ಮೋಹಂ ಖೇದಂ ರೋಗಂ ಬೆಮ
ರ್ಜರೆ ನೀರಟ್ಕೆ ವಿಷಾದಮೂಟೆ ಜನನಂ ಲೋಭಂ ಮಹಾವಿಸ್ಮಯಂ
ಸ್ಮರಬಾಣಾಹತಿ ನಿದ್ರೆಯೆಂಬಿವಿನಿತಂ ಗೆಲ್ದಾತನೇ ತಾಂ ಜಿನೇ
ಶ್ವರನಿಂದ್ರಾರ್ಚಿತಪಾದನಾತನೆ ವಲಂ ಸೌಖ್ಯಕ್ಕೆ ತಾಂ ಕಾರಣಂ ೬೭

ಮರನನಜೀವಂತು ಬಲ್ಲರೆ
ಸಿರಿಖಂಡವನಣ್ಣ ಪಗಿನನಜೀವಂತಿರೆ ಕ
ರ್ಪುರಮಂ ಬಲ್ಲರೆ ಕುತ್ಸಿತ
ಸುರರಂ ನರರಜೀವ ತೆಜದಿನಜೀವರೆ ಜಿನನಂ ೬೮

ಎಂದು ವಣಿಗ್ವಂಶಲಲಾಮಂ ಪೇೞೆ ವಸುಭೂತಿ ಕೇಳ್ದು ತಾಗಿ ಬಾಗಿದ
ನಂತೆ ಮುನ್ನಿನ ದರ್ಪಂಗೆಟ್ಟು ಕದಡಿ ತಿಳಿದ ನೀರಂತೆ ಮನದೊಳ್ ನಿರ್ಮಳ

ನಾಗಿ ಸಮ್ಯಗ್ದರ್ಶನಂ ದೊರೆಕೊಂಡುದಕ್ಕೆ ಮನದೊಳಾನಂದಂಬೆತ್ತು ಸಮ್ಯಕ್ತ್ವ ಚೂಡಾಮಣಿಯುಂ ನಾನಾವಿಧದಿಂ ಪೊಗಟ್ದು ದರ್ಶನದೊಳ್ ದೃಢನಾಗಿರ್ದನನ್ನೆಗಮಿಭಾನ್ವಯು ಪವಿತ್ರಂ ಮಱುದಿವಸಂ ಬೀಡನೆತ್ತಿ ಕತಿಪಯ ಪಯಣಂಬೋಗಿ ನಂದ್ಯಾವಲಿಯೆಂಬ ಪೇರಡವಿಯೊಳ್ ಬೀಡಂ ಬಿಡುವುದುಂ,

ನೆರೆದು ವನಚರರುಮೊರ್ಮೆಯೆ
ಭರವಶದಿಂ ತಾಗೆ ಸೆಟ್ಟಿ ಪಿರಿದಪ್ಪ ಬಲಂ
ಬೆರಸಿದಿರನದಿರದಣ್ಮಿಂ
ಕರಿಯೊಡ್ಡಂ ಸಿಂಹದೊಡ್ಡು ತಾಗುವ ತೆಱದಿಂ ೬೯

ತಾಗಿ ಕಿಚ್ಚುಂ ಕಿಡಿಯುಮಾಗಿ ಕಾದುತ್ತುಮಿರೆ, ದೂರದೊಳಿರ್ದ ವಸುಭೂತಿಯುಂ

ಅಂಬರಿಗುಮಾಯುತಪ್ಪಿದೊ
ಡೆಂಬೀ ನಾಣ್ನುಡಿಯನಲ್ಲಿ ಪುಸಿಮಾಡದೆ ಕೂ
ರಂಬೊಂದು ಬಂದು ನಡೆ ನೋ
ವಿಂ ಬಿದ್ದಂ ಸಾವ ಪೊತ್ತನಾವಂ ಬಲ್ಲಂ ೭೦

ಅನಂತರಂ ಸೆಟ್ಟಿ ಬೇಡರೊಡ್ಡಂ ಗೆಲ್ದು ಬಂದು ನೊಂದಿರ್ದ ವಸುಭೂತಿಗೆ ಧರ್ಮವಾತ್ಸಲ್ಯದಿಂ ಸನ್ಯಸನಮುಂ ಕೊಟ್ಟು ಪಂಚನಮಸ್ಕಾರಮುಂ ಪೇೞುತ್ತಿರ್ಪುದುಂ ತನಗೆ ಜಿನನೆ ದೈವಮೆಂಬ ಭಾವನೆಯಿಂ ವಸುಭೂತಿ ದಯಾಮೂಲಮಪ್ಪ ಧರ್ಮಮುಂ ನೆನೆಯುತ್ತೆ ಮುಡಿಪಿ ದರ್ಶನಫಲದಿಂ ಸೌಧರ್ಮಕಲ್ಪದೊಳ್ ಮಣಿಪ್ರಭಾವಿಮಾನದೊಳ್ ಮಣಿಕುಂಡಲನೆಂಬ ದೇವನಾಗಿ ಪುಟ್ಟುವುದುಂ,

ಇದು ನಿನ್ನಿರ್ಪ ಮಹಾಪ್ರಭೋರ್ಜಿತವಿಮಾನಂ ನೂತ್ನಲಾವಣ್ಯದಿಂ
ದೊದವಿರ್ದೀ ದಿವಿಜಾಂಗನಾಸಮಿತಿ ಪೆಂಪಿಂ ನಿನ್ನ ಕಾಂತಾಜನಂ

ಮುದದಿಂದೀ ವಿಬುಧಾಳಿ ನಿನ್ನ ಪರಿವಾರಂ ದೇವ ಕೈಕೊಂಡು ಕಾ
ವುದು ನೀನೆಂದು ಸುರಾಳಿ ಬಿನ್ನವಿಸೆ ತದ್ದೇವಂ ಮಹಾಚೋದ್ಯದಿಂ ೭೧

ಆ ನಾರೀಲೋಕಮಾವುದೀ ಕೇಳಿಸುತ್ತಿರ್ದ ಪರಿಜನಮಾರೆಂದು ಕುಱುಂಬ ನರಸುಗಂಡಂತೆ ನೋಡುತ್ತುಮಿರ್ಪನ್ನೆಗಂ ಭವಪ್ರತ್ಯಯಜ್ಞಾನಂ ಪುಟ್ಟಿ ತಜ್ಞಾನದಿಂ ಪೆಱಗಣ ಭವಮುನಱಿದು ಬೆಱಗಾಗಿ,

ಪುಸಿದೆನ್ನಂ ಪೊನ್ನಿಂ ಬಂ
ಚಿಸಿ ವೈಶ್ಯನುಪಾಯದಿಂದೆ ದರ್ಶನಮುಂ ಬ
ಣ್ಣಿಸೆ ನಂಬಿ ದೇವನಾದೆಂ
ವಸುಧೆಗೆ ಸಮ್ಯಕ್ತ್ವಮುಳ್ಳ ಮನುಜನೆ ದೇವಂ ೭೨

ಎಂದು ಮಹಾವಿಭೂತಿಯಿಂ ಬಂದು ದಯಾಮಿತ್ರಸೆಟ್ಟಿಗೆ ಪೊಡೆಮಟ್ಟು ನಿನ್ನ ಪ್ರಸಾದದಿಂದಾಂ ದೇವನಾದೆನೆಂದು ತನ್ನ ಮಹಿಮೆಯಂ ತೋಱಿ ದೇವ ಲೋಕಕ್ಕೆ ಪೋಗಿ, ಅಲ್ಲಿನ ಸುಖಮನೊಂದು ಸಾಗರೋಪಮಕಾಲಮನನು ಭವಿಸಿ ಬಂದಿಲ್ಲಿ ನಿನಗಂ ನಿನ್ನಗ್ರಮಹಿಷಿಗಂ ನಂದಶ್ರೀಗಮುಭಯಕುಮಾರ ನಾಗಿ ಪುಟ್ಟಿ ಪ್ರತ್ಯಕ್ಷಮಿರ್ದಪನೆಂದು ಗಣಧರಸ್ವಾಮಿಗಳ್ಪೇೞ್ವುದುಂ ದರ್ಶನ ದೊಳಾದ ಪ್ರತ್ಯಕ್ಷಫಲಮಂ ಕಂಡು ನಂಬಿ, ಮಗಧಾವನೀಶ್ವರಂ ಪಿರಿದುಂ ಸಂತೋಷದಿಂದಂ ತನಗೆ ಸಕಲಸಾಮ್ರಾಜ್ಯಮುಂ ಕೈಗೆವಂದಂತಿರೆ ಪೆರ್ಚಿ ದೊರ್ಂದು ಮುಯ್ಯಿಲ್ಲದೆ ನಲಿದಂ.

# ೨. ಕೊಲೆಯೊಳ್ ಪೊರ್ದದಿರ್ಪ ಸದ್ಧರ್ಮಮೆ ಮುಖ್ಯಂ

ಶ್ರೀದಯಿತೆಗೆ ನಿರ್ವಾಣ
ಶ್ರೀದಯಿತೆಗೆ ದರ್ಶನಾಂಗಮೆಂಟುಂ ಚಿತ್ತಾ
ಹ್ಲಾದಕರಮೆಂದು ನಂಬಿದ
ನಾದರದಿಂ ಸುಕವಿನಿಕರ ಪಿಕಮಾಕಂದಂ ೧

ಮತ್ತಂ ಶ್ರೇಣಿಕಮಹಾರಾಜಂ ವಿಶ್ವಲೋಕೈಕವಂದ್ಯರೆನಿಸಿದ ಗೌತಮ ಸ್ವಾಮಿಗಳ್ಗೆ ಪೊಡೆಮಟ್ಟು ಸುಗತಿವನಿತೆಯ ಕಡೆಗಣ್ಣ ಚೆಲ್ಲಮೆನಿಸುವ ಕೊಲ್ಲದ ವ್ರತಮನೆನಗಱಿಪುವುದೆಂದು ಕೈಗಳಂ ಮುಗಿದು ಬೆಸಗೊಳ್ವುದುಂ, ಮುನಿ ರತ್ನರಿಂತೆಂದು ಪೇೞ್ದರ್.

ರಾಶಿಗೆ ಬಂದಾರಂಬದಂತೆ ಮಿಾಸೆ ಬಂದ ಜವ್ವನದಂತೆ ದರ್ಶನದೆಂಟಂಗದೊಳಂ ಮುನ್ನಂ ಸಂಪೂರ್ಣನಾಗಿ ನೆರೆದು ಬುದ್ಧಿವಂತನಪ್ಪ ಮಗಂಗೆ ಬಯ್ಕೆಯಂ ತೋಱುವಂತೆ ಕೇಡಿಂಗಂ ಬಡತನಕ್ಕಮಪ್ಪ ಪೆಂಡತಿಗೆ ಮನೆವಾರ್ತೆಯಂ ನುಡಿವಂತೆ ಕೊಲ್ಲದ ವ್ರತಮಂ ಕೈಕೊಂಡು

ಮನಮೊಸೆದು ನಡೆದನಪ್ಪೊಡೆ
ಮನಕತಮುಂ ನೋವನೆಲ್ಲಿಯುಂ ಪೊರ್ದದೆ ಮೇ
ದಿನಿಪೂಜ್ಯನಾಗಿ ಮುಕ್ತ್ಯಂ
ಗನೆಗಾತನೆ ಕಾಮನೆನಿಸಿ ಸೊಗಯಿಸಿ ತೋರ್ಕುಂ ೨

ನೆಗೞ್ದಿರ್ದಾಮಾಳವೋರ್ವೀವಳಯದೊಳಮರಾಧೀಶನಂತಪ್ಪ ಸದ್ಭೋ
ಗಿಗಳಿಂ ದೇವೇಂದ್ರಧಾತ್ರೀರುಹಮನಿೞಿಸಿ ಕಯ್ವಾರದಿಂದೀವ ಸತ್ತ್ಯಾ
ಗಿಗಳಿಂ ಶ್ರೇಯಾಂಸನೊಳ್ ಮುಚ್ಚರಿಸಿ ಬಿಡದೆ ನಿರ್ಲೋಭದಿಂದೀವ ಸದ್ದಾ
ನಿಗಳಿಂದುಜ್ಜೈನಿಯೆಂಬಾ ಪುರವರಮೆಸೆಗುಂ ನಾಡೆಯುಂ ಶೋಭೆಯಿಂದಂ ೩

ಆ ಪುರಮನಾಳ್ವಂ ವಿಶ್ವಂಭರ ಮಹಾರಾಜನಾತನ ರಾಜಶ್ರೇಷ್ಠಿ ಗುಣಪಾಲ ನೆಂಬನಾತನ ಭಾರ್ಯೆ ಧನಶ್ರೀಯೆಂಬಳ್

ಸುರರಾಜಂಗಂ ಖಚರೇ
ಶ್ವರಂಗಮಾರಯ್ದು ನೋಱೆ್ಪಡಿಮ್ಮಡಿ ಮಿಗಿಲು
ರ್ವರೆಯೊಳ್ ಜಿನಭಕ್ತಿಯೊಳಂ
ಸಿರಿಯೊಳಮೈಶ್ವರ್ಯದೊದವಿನೊಳಮಾ ಪರದಂ ೪

ನೆಗೞ್ದ ಗುಣಪಾಲಂಗಂ
ಮೃಗನಯನೆಯೆನಿಪ್ಪ ತದ್ಧನಶ್ರೀಗಂ ಕೈ
ಮಿಗೆ ರಾಗಂ ಪುಟ್ಟೆದಳು
ರ್ವಿಗೆ ಲಕ್ಷ್ಮಿಯೆ ಪುಟ್ಟುವಂತೆ ಕನ್ಯಾರತ್ನಂ ೫

ಸುಬಂಧು ಶ್ರೀಯೆಂಬಳಂತವರ್ ಸುಖಸಂಕಥಾವಿನೋದದಿಂದಿರ್ಪುದುಂ ಒಂದು ದಿವಸಂ ಧನಶ್ರೀ ಬೆಳಗಪ್ಪ ಜಾವದೊಳ್ ಸುರಗಜಮುಂ ಚಂದ್ರನು ಮಾದಿತ್ಯನುಂ ತನ್ನಲ್ಲಿಗೆ ಬಂದುದಂ ಕನಸುಗಂಡು ನೇಸಱ್ ಮೂಡುವುದು-ಮೆೞ್ಚತ್ತು ಗುಣಪಾಲಸೆಟ್ಟಿಗಱಿಪುವುದುಂ ಸೆಟ್ಟಿ ತತ್ಸ್ವಪ್ನಫಲಂಗಳಂ ಋಷಿಯರಲ್ಲಿ ಬೆಸಗೊಳ್ವಮೆಂದು ಪಲವುತೆಱದರ್ಚನೆವೆರಸು ಬಸದಿಗೆ ವಂದು ಜಿನಭವನಮುಂ ಮೂಱು ಸೂೞ್ಬಲಗೊಂಡು ಒಳಗಂ ಪೊಕ್ಕು ದೇವರನರ್ಚಿಸಿ ಪೊಡೆಮಟ್ಟು ಶ್ರುತಮುಮಂ ಋಷಿಯರುಮಂ ಪೂಜಿಸಿ ಭಕ್ತಿಯಿಂ ವಂದಿಸಿ ವಿನಯದಿಂದಿರ್ವರುಂ ಕೈಮುಗಿದು ಕನಸುಗಳ ಫಲಮಂ ಬೆಸಗೊಳ್ವುದುಂ ಅವರಿಂತೆಂದರ್

ಸರಸಿರುಹನೇತ್ರೆ ಸುರಸಿಂ
ಧುರಮಂ ಕಂಡುದಱಿನಧಿಕ ಜಿನಭಕ್ತನಮು
ರ್ವರೆ ಪೂಜ್ಯನಂ ಮುನೀಶ್ವರ
ಚರಣಾಂಭೋಜಾತ ಭೃಂಗನಂ ನೀಂ ಪಡೆವೈ ೬

ಶಶಿಯಂ ಕಂಡುದಱಿಂದಂ
ಶಶಿಮುಖಿ ತತ್ವಜ್ಞನಂ ಮಹಾಪ್ರಭುವಂ ಸಂ
ತಸದಿಂದೆ ಪಡೆವೆ ಮಗನಂ
ಕುಸುಮಾಯುಧನಿಭನನುದಿತ ಧರ್ಮಾನ್ವಿತನಂ ೭

ರವಿಯಂ ಕಂಡುದಱಿಂದಂ
ಧವಳಾಕ್ಷಿ ಜಿನೇಂದ್ರಸಮಯವರ್ಧನನಂ ಮಾ
ನವರತ್ನನಂ ಧರಿತ್ರೀ
ಧವನಂ ಪಡೆವೈ ಮನೋಜನಿಭನಂ ಮಗನಂ ೮

ಎಂಬುದುಮುವರಿರ್ವರುಂ ಸಂತಸದಂತಮನೆಯ್ದಿ "ಸವಣೋ ಅಮೋಘ ವ ಅಣೋ" ಎಂಬ ಋಷಿವಾಕ್ಯಮೆಂತುಂ ತಪ್ಪಲಱಿಯದೆಂದು ನಿಶ್ಚಯಿಸಿ ನಂಬಿ ದೇವರ್ಗಂ ಪುನರ್ನಮಸ್ಕಾರಂಗೆಯ್ದು ಮನೆಗೆ ವಂದು ಮನಮೊಸೆದಿರ್ಪುದುಂ ಕೆಲವು ದಿವಸಕ್ಕೆ ಧನಶ್ರೀಗೆ ಗರ್ಭಮಾಗಿ ಜಿನೇಂದ್ರಪೂಜೆಯುಂ ಮಾಡಲುಂ ನೋಡಲುಂ, ತ್ರಿಷಷ್ಟಿಶಲಾಕಾಪುರುಷರ ಕಥೆಗಳಂ ಕೇಳಲುಂ ಬಯಕೆ ತಿಣ್ಣಮಾಗೆ,

ತರುಣಿಗೆ. ಸಂತಸಮಪ್ಪಂ
ತಿರೆ ಗೀತಾತೋದ್ಯವಾದ್ಯನೃತ್ಯಮನರ್ಹ
ತ್ಪರಮೇಶ್ವರನಾಸ್ಥಾನದೊ
ಳಿರುಳುಂ ಪಗಲುಂ ಸುಭೋಗಮಂ ಮಾಡಿಸುವರ್ ೯

ಮೊಸರಿಂ ಪಾಲಿಂ ಘೃತದಿಂ
ಪೊಸಕಬ್ಬಿನ ರಸದಿನಾಗಳುಂ ಜಿನನಾಥಂ
ಗೊಸೆದಭಿಷೇಕವನೊಪ್ಪಿರೆ
ಬಿಸರುಹಮುಖಿಗರ್ತಿಯಪ್ಪಿನಂ ಮಾಡಿಸುವಂ ೧೦

ಭರತೇಶ್ವರನಷ್ಟಾಪದ
ಗಿರಿಯೊಳ್ ಲೇಸಾಗಿ ಸಮೆದ ಚೈತ್ಯಾವಳಿಯಂ
ತರಳಾಕ್ಷಿಗೆ ಬಣ್ಣಿಸುತುಂ
ಪುರುಪರಮೇಶ್ವರನ ಚರಿತೆಯಂ ಕೇಳಿಸುತುಂ ೧೧

ಜಿನರ ಪ್ರತಿಮೆಗಳಂ ನೆ
ಟ್ಟನೆ ಪೊನ್ನಿಂ ಮಾಡಿ ಪಲವು ತೆಱದರ್ಚನೆಯಿಂ
ದನವರತಂ ಪೂಜಿಸುತುಂ
ವನಜಾಸ್ಯೆಗೆ ಪಿರಿದು ಸಂತಸಂ ಪುಟ್ಟುವಿನಂ ೧೨

ಮತ್ತಂ ಜಿನಭವನಂಗಳೊಳ್ ನಾನಾವಿಧರಂಗವಲ್ಲಿಯನಿಕ್ಕಿಸುತ್ತುಂ ಆಹಾರಾಭಯ ಭೈಷಜ್ಯಶಾಸ್ತ್ರದಾನಮಂ ಮಾಡಿಸುತ್ತುಂ ಧನಶ್ರೀಯ ಬಯಕೆಯನೀ ಮಾರ್ಗದಿಂ ಸಲಿಸುತ್ತುಮಿರ್ಪುದುಮೊಂದುದಿವಸಂ ವಿಶ್ವಂಧರಮಹಾರಾಜಂ ಮಹಾವಿಭೂತಿಯಿಂ ಗಂಧಗಜಾರೂಢನಾಗಿ ವನಕ್ರೀಡೆಗೆ ಪೋಗುತ್ತುಂ ತನ್ನ ಮನೆಯ ಪೆಱಗಣ ನಂದನವನದೊಳ್ ಶೃಂಗಾರಂಗೆಯ್ದು ವಿರಾಜಿಸಿ ವಿಳಾಸಿನೀ ಜನಪರಿವೃತೆಯಾಗಿ ಪೊನ್ನುಯ್ಯಲನಾಡುವ ಸುಬಂಧುಶ್ರೀಯಂ ತೊಟ್ಟನೆ ಕಾಣ್ಬುದುಂ

ನನೆಯಂಬಂ ತೊಟ್ಟು ಕಾಮಂ ಮುಳಿದು ನರಪನಂ ನೋಡಿ ಲೇಸಾಗಿ ಭೋರ್ಭೋ
ರೆನೆ ಕಾಯ್ಪಿಂದಾರ್ದು ಬಾಣಂ ನಡೆ ಗಱಿಯನಗುರ್ವಪ್ಪಿನಂ ಕಚ್ಚಿ ಬೇಗಂ
ಮನದಿಂ ಮುಂ ಪಾಯ್ದು ಮತ್ತಂ ತುಱುಗಿ ನಡುವಿನಂ ದೇಹಮಂ ನಾಡೆಯುಂ ಕಾ
ಮಿನಿಯಂ ಶ್ಯಾಮಾಂಗಿಯಂ ಮತ್ತೆಸಿಸದೆ ಮಱೆಗೊಂಡಿರ್ದು ತೂಳ್ದೆಚ್ಚನಾಗಳ್ ೧೩

ಅಂತಾ ಪೊಸನನೆಯ ಬಿರಿಮುಗುಳ ಕುಸುಮಬಾಣಂಗಳಿಂ ತೋಡುಂ

ಬೀಡುಂ ಕಾಣಬಾರದೆನಿಸಿ ಕಿವಿವರಂ ತೆಗೆದು ನೇರನಱಿದೆಸೆವುದುಂ ವಿಶ್ವಂಧರ ಮಹಾರಾಜಂ ಝುರ್ಝುರಿತಗಾತ್ರನಾಗಿ ಚಿತ್ರದ ರೂಪಿನಂತೆ ಮಿಟ್ಟನೆ ಮಿಡುಕದೆ ನಿಂದು ವಿರಹಾನಳನಿಂ ಬೆಂದು ಸೈರಿಸಲಾರದೆ

ಬಿಲ್ಲೊಳ್ ಕೋವಿದರೆನಿಸಿದ
ಬಿಲ್ಲಾಳಪ್ಪವರನಱಿವೆನತನುವ ತೆಱದಿಂ
ನಿಲ್ಲದೆ ಮೆಯ್ಯೊಳ್ ಪುಣ್ಣಿನಿ
ಸಿಲ್ಲದೆ ವೇದನೆಯ ಮಾಟ್ಪ ಗಂಡರುಮೊಳರೇ ೧೪

ಎಂದು ಮನದೊಳ್ ಗುಜುಗುಜುಗೊಂಡು ಉದ್ದಮೇಱದ ಪಸುಗೂಸಿನಂತೆ ಪೋಗಲಱಿಯದೆ, ಕೋಣಂ ಪೊಕ್ಕ ಮಡುವಿನಂತೆ ಮನದೊಳ್ ಕದಡಿ, ಕಿಱಿದಾನುಂ ಬೇಗಮಿರ್ದು, ವನಕ್ರೀಡೆಗೆ ಪೋಗಲೊಲ್ಲದರಮನೆಗರಸಂ ಮಗುಳ್ದು ಬಂದು ಕಣ್ಣೊಳಂ ಮನದೊಳಂ ಸುಬಂಧುಶ್ರೀಯ ರೂಪೆ ತೋಱೆ ಮತಿಗೆಟ್ಟು ವಿಹ್ವಲೀಭೂತನಾಗಿ ಸೈರಿಸಲಾಱದೆ,

ಪೊಸನೀರೇಱದ ನಾಳದಿಂ ನಿಮಿರ್ದ ನೀಳಾಂಭೋಜ ಪುಷ್ಪಂಗಳಿಂ
ಪೊಸತಪ್ಪಾಮ್ರಮಹೀಜದಾ ತಳಿರ್ಗಳಿಂ ಚೆನ್ನೆಯ್ದಿಲಿಂ ಬಾೞೆಯಿಂ
ದೊಸೆದುಂ ಮಾಡಿದ ಪಾಸಿನೊಳ್ ಪೊರಳುತಂ ಜೊಂಪಂಗಳೊಳ್ ಪೋಗಿ ಸೇ
ವಿಸುತಂ ಚಂದನಪಂಕದೊಳ್ ಮುೞುಗುತುಂ ಶೀತಾಂಬುವಂ ಮೀಯುತುಂ

ಕಾಮಸಂತಾಪಮನೆಂತುಂ ಮಾಣಿಸಲಾಱದೆ ಪೆರ್ಗಡೆಗಳಂ ಕರೆದು ತನ್ನ ಮನದ ಕಾರ್ಯಮನೆಲ್ಲಮನಿಂಬಾಗೆ ಪೇೞ್ದು

ಆವಾವುಪಾಯದಿಂದಂ
ನೀವಿಂದು ಸುಬಂಧುವಂ ಮನೋಹರಮಪ್ಪಂ
ತಾವಗಮೆನ್ನೊಳ್ ನೆರೆಪುವು
ದಾವಗಮಿಂ ನೆರೆಪದಂದು ನೋವೆಂ ತಿಬ್ಬಂ ೧೫

ಎಂದು ಪೆರ್ಗಡೆಗಳಂ ಗಣಪಾಲಸೆಟ್ಟಿಯಲ್ಲಿಗೆ ಸುಬಂಧುಶ್ರೀಯಂ ಬೇಡಿಯಟ್ಟುವುದುಂ ಅವರ್ ಗುಣಪಾಲಸೆಟ್ಟಿಯ ಮನೆಗೆ ವರ್ಪುದುಂ ಸೆಟ್ಟಿ ಪೆರ್ಗಡೆಗಳಂ ವಸ್ತ್ರತಾಂಬೂಲಾದಿಗಳಿಂ ಮನ್ನಿಸಿ ನಿಮ್ಮ ಬಂದ ಕಾರ್ಯಮನೆಮಗಱಿಯೆ ಪೇೞಿಮೆಂಬುದುಮುಪರಿಂತೆಂದರ್.

ನಿಮ್ಮ ಮಗಳಪ್ಪ ಸುಬಂಧುಶ್ರೀಯಂ ನಂದನವನದೊಳುಯ್ಯಲಾಡುವಳಂ ವಿಶ್ವಂಧರ ಮಹಾರಾಜಂ ಕಂಡು ಕಣ್ಬೇಟಂಗೊಂಡು ಕಾಮಸಂತಾಪದಿಂ ಕರಮಲ್ಲದೆ ನೊಂದು ರಾಜಮಂದಿರಕ್ಕೆ ಬಂದು ಕುಸುಮಾಸ್ತ್ರನ ಕುಸುಮಶರದ ಕೋೞಿಂಗಿರಲಾಱದೆಮ್ಮನಿಲ್ಲಿಗೆ ಸುಬಂಧುಶ್ರೀಯಂ ಬೇಡಿಯಟ್ಟಿದಂ; ನೀವುಂ ತಲೆಯೊಡೆಯರ್ಗೆ ತಲೆಸುತ್ತಂ ಮಾರ್ಕೊಂಡರೆನಿಸಿ ನಗೆಯಂ ಮಾಡಿಕೊಳ್ಳದೆ ಸರ್ವಸ್ವಕ್ಕಮೊಡೆಯನಪ್ಪ ಕುಲಸ್ವಾಮಿಗೆ ಮಾರ್ಕೊಳ್ಳದೆ ಕೂಸಂ ಕುಡುವುದೆಂಬುದುಂ ಪೆರ್ಗಡೆಗಳ ಮಾತಂ ಕೇಳ್ದು ಗುಣಪಾಲಸೆಟ್ಟಿ ಬೆಱಗಾಗಿ ಪೆರ್ಗಡೆಗಳಂ ಚಾಟುಕಾರಿಸಲೆಂದು ಕೃತಕವಚನಂಗಳಿಂ ನಂಬೆ ನುಡಿದು ಮತ್ತಮಿಂತೆಂದಂ

ಅರಸಂ ಗಡ ಪಿರಿದಪ್ಪಾ
ದರದಿಂ ಗಡ ಮತ್ತನೂಜೆಯಂ ಬೇಡಿ ಪುರಂ
ದರವಿಭವನಟ್ಟುವಂ ಗಡ
ನರರೆನ್ನಿಂ ಬಿಟ್ಟು ಧನ್ಯರಾರುರ್ವರೆಯೊಳ್ ೧೭

ಎಂದು ಮೆಚ್ಚಿಡೆ ನುಡಿದು ಪೆರ್ಗಡೆಗಳನರಮನೆಗೆ ಕಟಿಪಿ ಸೆಟ್ಟಿ ತನ್ನೊಳಿಂತೆಂದಂ

ಜಿನಪದಸೇವೆಯಿಲ್ಲದನ ರೂಪು ವಿಳಾಸ ಮಹೋನ್ನತಿಕ್ಕೆ ಮೇ
ದಿನಿ ಸೊಬಗೊಳ್ಪು ತೇಜ ಮಹಿಮಾಸ್ಪದಮುದ್ಧತಿ ವಿದ್ಯೆ ಶೌಚಮಾ-
ತನ ವಿಭವಂ ಕುಲಂ ಬಲಮುಮಾರ್ಪು ಗುಣಾಳಿ ಗಾಡಿ ಯೌ
ವನಮಿನಿತುಂ ಕುಱುಂಬನರಸಗ್ನಿಯ ತಣ್ಪು ವಿಷಾನ್ನಭೋಜನಂ ೧೮

ಕೊಲೆಯೊಳ್ ಪೊರ್ದದಿರ್ಪ ಸದ್ಧರ್ಮಮೆ ಮುಖ್ಯಂ ೨೯

ಉರಗನ ವಿಷಮೇಱಿದರುಂ
ಸಿರಿಯುಳ್ಳರು ಮದ್ದುಗುಣಿಕೆಯಂ ತಿಂದವರುಂ
ಪಿರಿದುಂ ಪಿತ್ತಾಧಿಕರುಂ
ಧರೆಯೊಳ್ ಮೆಯ್ಯಱಿಯರೆಂಬ ನುಡಿ ತಪ್ಪುಗುಮೇ ೧೯

ಮೊದಲೊಳ್ ಮುಳ್ಳಿನ ಮೊನೆಗಳ್
ಮೃದುವಪ್ಪುವು ಬೞಿಕ ಬೆಟ್ಟಿತಪ್ಪುವು ಖಳರುಂ
ಮೊದಲೊಳ್ ಗುಣಿಯೆನಿಸಿರ್ಪರ್
ತುದಿಯೊಳ್ ತಂತಮ್ಮ ಮಾಯೆಯಂ ಪ್ರಕಟಿಸುವರ್ ೨೦

ಗಿರಿಶಿಖರಾಗ್ರದಿಂ ಕೆಡೆಯೆ ನೂಂಕುವುದೊರ್ಮೆಯೆ ಕಟ್ಟಿ ತಂದು ನಿ
ಷ್ಠುರ ಗಜರಾಜಿಯಿಂ ತುೞಿಸಿ ಕೊಲ್ವುದು ಪೆರ್ಗಡಲಲ್ಲಿ ಗಂಟಲಂ
ಮುರಿದು ತಳರ್ಚದಿಕ್ಕುವುದು ಲೇಸು ಕುದೃಷ್ಟಿಗೆ ಸೋಲ್ತು ಕೂಸನಾ
ದರದೊಳೆ ಬೇಗಮೀವುದಱ ನೆಯ್ದೆ ವಿಚಾರಿಸಿ ನೋೞ್ಪೊಡುರ್ವಿಯೊಳ್ ೨೧

ಎಂದು ಪರಮಾಗಮಮುಮಂ ಭಾವಿಸಿ ಧನಶ್ರೀಯ ಮನದ ನಿರ್ಮಳಿಕೆಯು
ಮಂ ಸಮ್ಯಕ್ತ್ವಮುಮನಾರಯಲೆಂದು ಗುಣಪಾಲಸೆಟ್ಟಿಯಿಂತೆಂದಂ

ಧರಣೀವಲ್ಲಭನುಗ್ರವೈರಿಹರಣಂ ಬಾಲಾರ್ಕತೇಜಂ ಮಹೇ
ಶ್ವರವಂದ್ಯಂ ಮನಮೊಲ್ದು ಸೋಲ್ತು ಪದಪಿಂ ಸದ್ರಾಗದಿಂದಟ್ಟಿದಂ
ಪಿರಿದುಂ ಸ್ನೇಹದಿನಿಂದು ಕೇಳ ಕನಕಾಂಭೋಜಾಕ್ಷಿಯಂ ಬೇಡಿ ನ
ಮ್ಮರಸಂ ನೋಡ ಸುಬಂಧುವಂ ಧರಣಿಯೊಳ್ ನಮ್ಮಂತು ಮುಂ
ನೋಂತರಾರ್ ೨೨

ಪರದರ ಸಿರಿಯಿಂದರಸರ
ಸಿರಿ ಸರಿಯಲ್ಲದೊಡೆ ಕೂಸನಿತ್ತೊಡಾತನ ದೆಸೆಯಿಂ
ಪಿರಿದಪ್ಪುದವಿದ ಶೌರ್ಯಂ
ದೊರೆಕೊಳ್ಗುಂ ಮೇಲೆ ರಾಜ್ಯಮುಂ ಕೈಸಾರ್ಗುಂ ೨೩

ಸುಬಂಧುಶ್ರೀಯನರಸಂಗೆ ಕುಡುವವೆಂಬುದುಂ ಧನಶ್ರೀಸೆಟ್ಟಿಯ ಮಾತಿಂಗೆ ವಿಸ್ಮಯಂಬಟ್ಟು ನಿತ್ಯಮಲ್ಲದ ಸಂಸಾರಸುಖಕ್ಕಮಲ್ಪಶ್ರೀಗಮಾಸೆಗೆಯ್ದು ಮಿಥ್ಯಾದೃಷ್ಟಿಗೆ ಕೂಸಂ ಕೊಟ್ಟು ಮಗವಿಂಗಂ ತನಗಂ ಪಿರಿದಪ್ಪ ನರಕ ದುಃಖಮಂ ಮಾಡಿಕೊಂಡಪನೆಂದು ತನ್ನೊಳೆ ಮಱುಗಿ ಸೆಟ್ಟಿಗಿಂತೆಂದಳ್.

ಕಾಕತಾಳನ್ಯಾಯದಿಂ ನಿನ್ನಂತಪ್ಪ ಮಹಾಪುರುಷನ ಬಸಿಱೊಳ್ ಬಂದು ಜಿನಧರ್ಮಮಂ ಪೊರ್ದಿದಳಂತು ಪೊರ್ದಿದ ಮಗಳಂ ಪಗೆವರ ಕೊಲೆಯಂ ಬಂಚಿಸಿ ಪೋಪನಂ ಕರಡಿಯ ಮುಂತಿಕ್ಕಿದರೆಂಬಂತಾನುಂ, ಮಿಥ್ಯಾದೃಷ್ಟಿಯಪ್ಪನ ರಾಜ್ಯಶ್ರೀಯುಮಂ ಸಂಪತ್ತುಮನುನ್ನತಿಕ್ಕೆಯುಮಂ ಕಂಡು ಶೂನ್ಯಹೃದಯರಂತೆ ಮೇಲಣನಂತಭವದ ದುಃಖಮಂ ಭಾವಿಸದೆ ಪೆರ್ಚಿಂದಂ ಕೂಸಂ ಕುಡುವೆನೆಂಬ ನಿಮ್ಮ ಮರುಳ್ತನಕ್ಕೆನಗೆ ಪಿರಿದುಂ ವಿಸ್ಮಯಮಾದಪುದು ; ನಿಮ್ಮಂತಪ್ಪ ಸದ್ದೃಷ್ಟಿಗಳುಮಿಂತಪ್ಪ ಕಜ್ಜಮಂ ಮನದೆ ಕೊಳ್ವರೆಂದೊಡಿಂ ಮತ್ತಿನಱಿಶ್ರಾವಕರ ಮತಿಹೀನತೆಗಂ ಕೇಡಿಂಗಮುಬಲಲಾಗದು

ಕಿಡುವ ಸಿರಿಗಳಿಪಿ ಕೆಮ್ಮನೆ
ಕಿಡದ ಸುಖಾಸ್ಪದಮನೀವ ಸದ್ದರ್ಶನಮಂ
ಬಿಡುವಾತಂ ಬಿರ್ದೂಟಮ
ನೊಡಬಡದೆ ಗಂಜಿಗುಡಿವ ಮರುಳಂ ಪೋಲ್ಕುಂ ೨೪

ದರಿಯ ಮರಂ ಪಣ್ತ ಮರಂ
ಸುರಧನು ತಿರಿದುಂಬ ತಿರಿಕರೊಳ್ ಕೂಟಮಿದೊಂ
ದರಿಸಿನದ ಬಣ್ಣಮೆನ್ನದೆ
ಸಿರಿ ಶಾಶ್ವತಮೆಂದು ನಂಬಿ ಪದೆವನೆ ಗಾಂಪಂ ೨೫

ಅಂತು ಪಡೆಯಲ್ಬಾರದಪೂರ್ವಮಪ್ಪ ದರ್ಶನಮುಂ ಸದ್ಧರ್ಮಮುಂ ಪಿರಿದಪ್ಪ ಪುಣ್ಯದಿಂದಲ್ಲದೆ ಸಮನಿಸವಂತಪ್ಪ ದರ್ಶನಮುಮಂ ಸದ್ಧರ್ಮಮುಮಂ ಔದಾಸೀನ್ಯಂಗೆಯ್ದು ಬಿಟ್ಟು, ಮೂಱು ದಿನದ ಪಗರಣಕ್ಕೆ ಗಡ್ಡ ಮೀಸೆ ಮಂಡೆಯಂ ಬೋಳಿಸಿಕೊಳ್ವಂತೆ, ಸಜ್ಜನವೆಂಡಿತಿಯನೊಲ್ಲದೆ ಗಾಳುವಪ್ಪ

ಸೂಳೆಯಂ ಮೆಚ್ಚುವಂತೆ, ಸ್ವರ್ಗಮೋಕ್ಷದೊಳಪ್ಪನಂತ ಸುಖಮಂ ನೀರೊಳಟ್ಟಿ ನರಕತಿರ್ಯಗ್ಗತಿಗಳೊಳ್ ತಿಱ್ಱನೆ ತಿರಿವ ಕಜ್ಜಮನೆತ್ತಿಕೊಳ್ವೊಡೆ ನೀಮಱಿವಿರ್; ನಿಮಗಾದಿತ್ಯಂಗೆ ಸೊಡರಂ ತೋಱಿಸಿದರೆಂಬಂತೆ ಎನ್ನಂತಪ್ಪ ಜಡಮತಿಗಳ್ ಬುದ್ಧಿವೇೞ್ವುದುಚಿತಮಲ್ಲದು; ಗಂಡನಿದಿರೊಳ್ ಪೆಂಡತಿ ನುಡಿಯಲಾಗದು; ಮಿಗಿಱಿಕೊಟ್ಟರಪ್ಪೊಡೆನಗೆ ಬಸದಿಯೆ ಶರಣೆಂದು ಧನಶ್ರೀ ನುಡಿದು ಮಾಣ್ಬುದುಂ;

ಕುಲಾಂಗನೆಯೊಳಾದ ವಿಪರೀತಭಾವನೆಯಂ ಭಾವಿಸಿ ನೋಡಿ ದರ್ಶನಮುಂ ಧರ್ಮಬುದ್ಧಿಯುಮಿಲ್ಲದ ಪೆಂಡತಿಗಳಪಿ ಮೋಹದಿಂದಿರ್ದವಂ ಪಱಿದ ಪಱುಗೊಲನೇಱಲಾ ಪಱುಗೋಲುಂ ತಾನುಂ ತೊಱೆಯೊಳದ್ದು ಸಾಯುವಂತೆ ಪೆಂಡತಿಯುಂ ತಾನುಮೊಡನೆ ನರಕಕ್ಕಿೞಿದು ದುಃಖಮಂ ಪೊರ್ದುಗುಂ; ದರ್ಶನಶುದ್ಧಿಯುಂ ಸದ್ಧರ್ಮಸಮೇತೆಯುಮಪ್ಪ ಪೆಂಡತಿಯಂ ನಚ್ಚಿ ಕೂರ್ತು ಕೈಕೊಂಡಾತಂ ಬಳ್ವೈತ್ರಮನೇಱಿದವನೆಂತು ಸಮುದ್ರದೊಳಾಳದೆ ಸುಖದಿಂ ಸಮುದ್ರದ ತಡಿಯನೆಯ್ದುಗುಮಂತೆ ಪೆಂಡಿರುಂ ತಾನುಂ ಸ್ವರ್ಗಮೋಕ್ಷಮನೆಯ್ದಿ ಪಿರಿದಪ್ಪ ಸುಖಮನೆಯ್ದುವರದಱಿಂ

ಧನಮಂ ಗಳಿಸುವ ಗಂಡನ
ಧನಮಂ ಕಳ್ದೋವಿ ತಮ್ಮವರ್ಗೀವ ಗುಣಂ
ವನಿತೆಯರ್ಗೆ ಸಹಜಮಿಂತೀ
ವನಿತೆಗಮಾ ಕಷ್ಟೆಯರ್ಗಮೇನಂತರಮೋ ೨೬

ಮುಱಿಕಿಸುವ ಧರ್ಮಮೆಂದೊಡೆ
ಗುಱುಗುಱಿಸುವ ಗಂಡನಿದಿರೊಳೆದ್ದಾಡುವ ಬೇ
ಳ್ವಱಸುಗಳಂ ಕಿಸುಗುಳೆಯರ
ನಱಿವೊಡೆ ಪೋಲಿಪುದೆ ಧರ್ಮರತ್ನಾಕರೆಯಂ ೨೭

ಎಂದು ಮನದೊಳೆ ಪೊಗೞ್ದು ಧನಶ್ರೀಯ ಸಮ್ಯಕ್ತ್ವದೊಳಾದ ನಂಬುಗೆಗೆ ಕರಂ ಮೆಚ್ಚಿ ಸಂತೋಷಂಬಟ್ಟು ಮುಯ್ಯಂ ನೋಡಿ ಕರ್ಮರಾಜನೊಡ್ಡ

ನಿಱಿಯಲ್ ನೆರಂಬಡೆದೆನೆಂದು ಪೆರ್ಚಿ ಸುಬಂಧುಶ್ರೀಯ ಸಮ್ಯಕ್ತ್ವಮುಮಂ ಜಿನಭಕ್ತಿಯುಮಂ ಆರಯಲೆಂದು ಮಗಳಂ ಕರೆದು ತೊಡೆಯನೇಱಿಸಿಕೊಂಡು ಕದಪಂ ಕರ್ಚಿ ತಂಬುಲಮನಿಕ್ಕಿ ಮೊಗಮಂ ನೋಡಿ ಕಿಱಿದು ಬೇಗಂ ಮಗಳ ಮುದ್ದುನುಡಿಗಳಂ ಕೇಳ್ದು ಹರ್ಷಚಿತ್ತನಾಗಿ ಗುಣಪಾಲಸೆಟ್ಟಿ ಮೆಲ್ಲನಿಂತೆಂದಂ

ನಿನ್ನಂತು ಮಗಳೆ ಪುಣ್ಯ
ಕ್ಕೆನ್ನೊಂತವರಾರೊ ಮಾಳವೇಶ್ವರನವಟಂ
ಸನ್ನುತ ಗುಣಗಣನಿಳಯಂ
ನಿನ್ನಂ ತನಗರಸಿಮಾಡಿದಪ್ಪಂ ಪದೆಪಿಂ ೨೮

ನೀನರಸಿಯಾದೆಯಪ್ಪೊಡೆ
ಮಾನವಪತಿ ನಿನಗೆ ಮುಖ್ಯಪದವಂ ಕುಡುಗುಂ
ಶ್ರೀನಿಳಯೆಯಾಗಿ ಸುಖದಿಂ
ನೀನಿರ್ಪೆ ರಾಜ್ಯಲೀಲೆಯಿಂ ಕ್ರೀಡಿಸುತುಂ ೨೯

ಎಂಬುದುಂ ಸುಬಂಧುಶ್ರೀ ತಂದೆಯ ಮಾತಿಂಗೆ ನಕ್ಕು ನಿಮ್ಮಂತಪ್ಪ ಮಹಾಪುರುಷರಿಂತಪ್ಪ ನಿರ್ಬುದ್ಧಿತನಮಂ ಮಾಡಲಾಗದೀ ಶ್ರೀಗೆಱಗಿ ಧರ್ಮಮಂ ಬಿಡುವುದಾವ ಬುದ್ಧಿ; ಕಂಚಂ ಬಿಟ್ಟೋಡಂ ಪಿಡಿವ, ಪಟ್ಟದಾನೆಯಂ ಕೊಟ್ಟು ಕೋಡಗಮಂ ಕೊಳ್ವ, ನೆಲೆವಾಟಂ ಬಿಟ್ಟು ತಿರಿದುಂಬ, ಮರುಳಂ ಪೋಲ್ಕುಂ; ಬೆಕ್ಕು ಪಾಲಂ ಕಾಣ್ಬುದಲ್ಲದೆ ಮೇಗೆ ಬಂದಡಸುವ ಬಡಿಗೆಯಂ ಕಾಣದಂತೆ ಮೂರ್ಖರಪ್ಪರುಮಿಲ್ಲಿಯ ಸುಖಮನೆ ಶಾಶ್ವತಮಾಗಿ ಕಾಣ್ಬರಲ್ಲದೆ ಮೇಗಣ ನರಕದೊಳಾದ ಮಹಾದುಃಖಮನಱಿಯರೆನಗಿಂತಪ್ಪ ಮಾಯಾವಚನಂಗಳಿಂ ಮಕ್ಕಳ ಕೈಯ ಮಾಣಿಕಮಂ ಗುಗ್ಗುರಿಯಂ ತೋಱಿ ನಂಬಿಸಿಕೊಳ್ವಂತೆ ಸುದರ್ಶನಮಂ ಬಿಡಿಸಿ ಕಿಡುವ ಕಜ್ಜಮಂ ಪೇೞ್ವ ಈ ಶ್ರೀಯುಮನಲ್ಪಸುಖಮುಮಂ ತೋಱಿ ಟಕ್ಕಿಕ್ಕಿ ಮಾತಾಡವೇಡ

ವಿಮಳಮಿದೆನಿಸುವ ಜೈನಾ
ಗಮಮಂ ನೀಮಱಿದುಮಱಿಯದೆಗ್ಗರ ತೆಱದಿಂ
ರಮಣೀಯಮೆಂದು ರಾಜ್ಯ
ಕ್ರಮಕ್ಕೆ ಬೆಚ್ಚಿಲ್ಲದೆಳಸಲಪ್ಪುದೆ ಮನದೊಳ್ ೩೦

ಎಂತಾನುಮೆನ್ನ ಭಾಗ್ಯದಿಂ ಸದ್ಧರ್ಮಸಮೇತನಪ್ಪ ನಿನ್ನಂ ಶರಣ್ಬುಗುವಂತೆ ಪುಟ್ಟಿದೆನ್ನಂ ರಕ್ಷಿಸದೆ ಕರ್ಮರಾಜಂಗೆ ಮಗುಳೆ ಪಿಡಿದೊಪ್ಪಿಸುವುದು ಪಾಟಿಯಲ್ಲದೆಂತುಂ ನಿಮಗೆನ್ನಮೇಲೆ ಮುಳಿಸುಳ್ಳೊಡೆ ನಿಮ್ಮ ಮೆಚ್ಚಿದ ದಂಡನೆಯುಂ ಮಾಡಿಮೇಗೆಯ್ದುಂ ಮಿಥ್ಯಾದೃಷ್ಟಿಗೆ ಕುಡುವೆವೆಂಬ ಬಗೆಯಂ ಮಾಣ್ಬುದೆಂದು ಕಣ್ಣನೀರಂ ನೆಗಪುವುದುಂ ಮಗಳ ಮನದ ಸ್ವಚ್ಛತೆಗಂ ಸಮ್ಯಕ್ತ್ವದೊಳಾದ ನಂಬುಗೆಗಂ ಗುಣಪಾಲಸೆಟ್ಟಿ ಮನದೊಳಚ್ಚಿಕೆಯ್ತು

ಎನ್ನ ಗುಣಕ್ಕಂ ಬಗೆವಂ
ದೆನ್ನ ವಧೂಟಿಯ ಗುಣಕ್ಕಮೀಕೆಯ ಗುಣಮು
ತ್ಕನ್ನತಮೆನಿಸಿದುದಱಿಂ
ದೆನ್ನಂತಾರ್ ಪುಣ್ಯವಂತರವನೀತಳದೊಳ್ ೩೧

ಎಂದು ತನ್ನ ಮನದ ಕಾರ್ಯಮನಿರ್ವರ್ಗಂ ತಿಳಿಯೆ ಪೇಳ್ದು

ತಡೆದಿಲ್ಲಿ ನಿಂದೆನಪ್ಪೊಡೆ
ಕುಡವೇಳ್ಕುಂ ಭೂಭುಜಂಗೆ ಮಗವಂ ಕೂಸಂ
ಕಡುಗೂರ್ತು ಕೊಟ್ಟೆನಪ್ಪೊಡೆ
ಕಿಡುಗುಂ ಮೇಲಪ್ಪ ನಮ್ಮ ಮೋಕ್ಷದ ಸೌಖ್ಯಂ ೩೨

ಎಂದಾಲೋಚಿಸಿ ಧನಶ್ರೀ ಗರ್ಭಿಣಿಯಪ್ಪ ಕಾರಣದಿಂ ತನ್ನ ಪ್ರಾಣಮಿತ್ರನಪ್ಪ ಶ್ರೀದತ್ತನೆಂಬ ಪರದನ ಮನೆಯೊಳ್ ಗುಪ್ತದಿಂದಿರಿಸಿ ನೂಱೆಂಟು ಕೋಟಿ ಪೊನ್ನುಮಂ ನಿರ್ವಾಹಮುಮಂ ಬಿಸುಟ್ಟು

ಮಗಳನೊಡಗೊಂಡು ಪುರದಿಂ
ಬಗೆಯದೆ ಪೆಱಪೆಱತನಳಿಪದೊಂದಕ್ಕಂ ಕೈ
ಮಿಗೆ ಜೈನಧರ್ಮವಾರಿಧಿ
ಮೃಗಾಂಕನನುಪಮಗುಣಾಂಬುನಿಧಿ ಪೊಱಮಟ್ಟಂ ೩೩

ಅಂತು ಪೊಱಮಟ್ಟು ಕತಿಪಯಪ್ರಯಾಣಂಗಳಿಂ ಕೌಶಾಂಬಿಯೆಂಬ ಪುರಮನೆಯ್ದಿ

ಸಿರಿಯಂ ಚಿಂತಿಸಿ ಕಂದಿ ಕುಂದಿರದೆ ನಿರ್ವಾಹಕ್ಕೆ ಕೇಡಾದುದೆಂ
ದಿರುಳೆಲ್ಲಂ ಮತಿಗೆಟ್ಟು ಬಾಯ್ವಿಡದೆ ದೇಶತ್ಯಾಗಮಾಯ್ತೆಂದು ನಿ
ಷ್ಠುರ ದುಃಖಕ್ಕೆಡೆಯಾಗದುತ್ತಮಗುಣಂ ಚಾರಿತ್ರ ಪಾರಾಯಣಂ
ಪಿರಿದುಂ ಸಂತಸದಿಂದಮಿರ್ದನಮಳ ಶ್ರೀಧರ್ಮರತ್ನಾಕರಂ ೩೪

ಅಂತಿರ್ಪುದುಮಿತ್ತಲರಸಂ ಗುಣಪಾಲಸೆಟ್ಟಿ ಪೆಂಡಿರ ಮಕ್ಕಳ ಕೈಯಂ ಪಿಡಿದು ಪಿರಿದಪ್ಪ ಧನಮುಮಂ ನಿರ್ವಾಹಮುಮನೀಡಾಡಿ ಪೋದನೆಂಬುದಂ ಕೇಳ್ದು ಬೆಱಗಾಗಿ ಪ್ರಧಾನರ ಮೊಗಮಂ ನೋಡಿ

ಸುತೆಯಂ ಕೊಟ್ಟೆನಗಖಿಳ
ಕ್ಷಿತಿಯುಮನಾಳ್ದಿರದೆ ಸುಖದಿನತಿಚಪಳಂ ದು
ರ್ಮತಿಯಾಗಿ ಬೆಚ್ಚಿ ಪೋಪೊಂ
ದತಿಶಯಮೇಕಿಂತು ಪುಣ್ಯಹೀನರುಮೊಳರೇ ೩೫

ಎಂದು ಹಾಸ್ಯಂಮಾಡಿ ನಗುವರಸಂಗೆ ಪೆರ್ಗಡೆಗಳಿಂತೆಂದರ್ : ಕೊಲೆಯೊಳ್ ಪೊರ್ದದಿರ್ದ ಸದ್ಧರ್ಮಮೆ ಮುಖ್ಯಮಪ್ಪುದಱಿಂ ಧರ್ಮದ ಮೋಹದಿಂ ಶ್ರೀಯುಮಂ ಸಂಪತ್ತುಮನುದಾಸೀನಂ ಮಾಡಿ ದೇವ ನೀಂ ಶ್ರಾವಕನಲ್ಲಮಪ್ಪುದಱಿಂ ಮಿಥ್ಯಾತ್ವಕ್ಕಂ ಮೇಲೆ ಬರ್ಪ ನರಕದುಃಖಕ್ಕಂ

ಭಯಸ್ಥನಾಗಿ ಕುಡಲೊಲ್ಲದೆ ಪೋದನೆಂಬುದಂ ವಿಶ್ವಂಧರಮಹಾರಾಜಂ ಚೋದ್ಯಂಬಟ್ಟು

ಸಿರಿಯಂ ಬಿಟ್ಟು ವಿಭೂತಿಯಂ ತೊಱೆದು ನಿರ್ವಾಹಕ್ಕೆ ತಚ್ಚಿತ್ತದೊಳ್
ಪಿರಿದುಂ ಮೋಹಿಸಲೊಲ್ಲದಂಜಿ ಮಗಳಂ ವೈಶ್ಯಾತ್ಮಜಂ ಸಂತಸಂ
ಬೆರಸುತ್ಸಾಹದಿನೀಯದೆನ್ನ ಸಿರಿಯಂ ಪೆಂಪಂ ಮಸಂಗೊಳ್ಳದಾ
ದರಮಂ ಧರ್ಮದೊಳುಂಟುಮಾಡಿ ಪೊಱಮಟ್ಟೀ ದೇಶದಿಂದೋಡಿದಂ ೩೬

ಅದಱಿಂದಾತಂ ನಂಬಿ
ರ್ದುದೆ ದೈವಂ ವೈಶ್ಯವಂಶತಿಳಕಂ ಪಿಡಿದಿ
ರ್ದುದೆ ಧರ್ಮಮೊಂದು ನಚ್ಚಿದ
ನುದಿತೋದಿತಕೀರ್ತಿ ಮಾಳವೋರ್ವೀನಾಥಂ ೩೭

ಎಂದಾ ಜಿನಧರ್ಮದೊಳ್ ಪ್ರೀತಿಯುಂ ಕುಧರ್ಮದೊಳ್ ಭೀತಿಯುಂ ಪುಟ್ಟಿ ಗುಣಪಾಲಸೆಟ್ಟಿಯ ಮೇಲೆ ಮೋಹಮುಂ ಸ್ನೇಹಮುಮಾಗೆ ಮನೆಗಂ ಭಂಡಾರಕ್ಕಂ ಕಾಪಂ ಪೇೞ್ದು ಜಿನಸಮಯವಾರ್ಧಿವರ್ಧನ ಚಂದ್ರನನೆಲ್ಲಿಯುಮಟ್ಟಿಯಱಿಸಿ ತನ್ನಿಮೆಂದು ದೆಸೆದೆಸೆಗೆ ಪರಿಚಾರಕರನಟ್ಟಿದನಿತ್ತ ಧನಶ್ರೀ

ಗುಣಪಾಲಸೆಟ್ಟಿಯಪ್ಪೊಡೆ
ಗುಣಾಢ್ಯನವಿನೀತನಲ್ಲನಾರ್ಗಂ ವೈಶ್ಯಾ
ಗ್ರಣಿ ಪುಣ್ಯನಿಳಯನಾಯದ
ಕಣಿ ಸತ್ಯನಿಧಾನನೆಲ್ಲಿಯುಂ ಕೆಟ್ಟಿಪನೇ ೩೮

ಎಂದು ಮನಮಂ ಸಂತೈಸಿಕೊಂಡು ಸುಖದಿಂ ಕೆಲವು ದಿವಸಮಿರ್ಪುದುಮೊಂದು ದಿನಸಂ ಶಿವಗುಪ್ತರೆಂಬಾಚಾರ್ಯರ್ ತ್ರಿಗುಪ್ತರೆಂಬ ತಮ್ಮ ಶಿಷ್ಯರ್ವೆರಸು ಚಂದ್ರಗತಿಯಿಂ ಚರಿಗೆಗೆವರ್ಪುದುಂ ಶ್ರೀದತ್ತಸೆಟ್ಟಿ ಕಂಡು, ಕರಮಾದರದಿಂದಾ ಮುನಿವರರಂ ಸದ್ಭಕ್ತಿಪೂರ್ವಕಂ ನಿಲಿಸಿ, ಒಳಗಣ್ಣದಿರ್ಗೊಂಡೊಯ್ಯನೆ

ಬಳಸಿದ ವಿಷ್ಟರದೊಳಿರಿಸಿ ಕಾಲಂ ಚಿತ್ತೋಜ್ಜ್ವಲನಾಗಿ ಕರ್ಚಿ, ಮುನೀಂದ್ರರಿರ್ವರುಂ ಕುಳ್ಳಿರೆ ಸಂಮುದದಿಂ ಮುನೀಂದ್ರವಂದ್ಯನ ಪದಯುಗಳಮನೊತ್ತುತಿರ್ದನಿರ್ಪನ್ನೆವರಂ, ಧನಶ್ರೀ ವಂದಿಸಿ ಪೋಪುದುಂ ತ್ರಿಗುಪ್ತಮುನೀಂದ್ರಂ ಧನಶ್ರೀಯುಂ ಕಂಡು ಮನದೊಳ್ ವಿಸ್ಮಯಂಬಟ್ಟು ಶಿವಗುಪ್ತಭಟ್ಟಾರಕರ್ಗೆ ಪೊಡೆಮಟ್ಟು ಕೈಗಳಂ ಮುಗಿದು ವಿನಯದಿಂತೆಂದಂ

ಈ ವನಜಾಸ್ಯೆಗುತ್ತಮಗುಣಾನ್ವಿತೆಗಗ್ಗಳ ಭದ್ರಲಕ್ಷಣಂ
ತೀವಿದುವೈದೆ ಭಾವಿಸುವೊಡೆಲ್ಲೆಡೆಯುಂ ನೆರೆದೊಪ್ಪೆ ಚೆಲ್ವಿನಿಂ
ಶ್ರೀವಧುವನ್ನಳನ್ನಳೆನಿಸೀ ವಧುವುಂ ಕಡುಕಂದಿ ಕುಂದಿ ಸ
ದ್ಭಾವಮನೊಕ್ಕು ಹೀನರವೊಲನ್ಯನಿವಾಸದೊಳಿರ್ಪುದಾರಿದೇಂ ೩೯

ಸಂಸಾರದೊಳ್ಬಿಟ್ಟು ಪೆಱತೊಂದು ಕಷ್ಟಮಿಲ್ಲೆಂಬುದುಂ ಶಿವಗುಪ್ತಭಟ್ಟಾರಕರಿಂತೆಂದರ್

ಅಂತೆನವೇಡ ಧಾರಿಣಿಯೊಳೀ ಲಲಿತಾಂಗಿಯೆ ಪುಣ್ಯವಂತೆ ಭೂ
ಕಾಂತನಡರ್ತು ತನ್ನ ಮಗಳಂ ಕುಡವೇಟ್ಟಿನಲೀಕೆಯಾಣ್ಮನೋ
ರಂತೆ ಜಿನೇಂದ್ರಧರ್ಮಯುತನಲ್ಲದವಂಗೆ ಮಮಾತ್ಮಜಾತೆಯುಂ
ಸಂತತಮಿಾಯೆನೆಂದು ಬಿಸುಟಗ್ಗದ ಧಾನ್ಯಧನಂಗೃಹಂಗಳಂ ೪೦

ಪೋಗುತ್ತುಮಿಾ ವನಿತೆ ಗರ್ಭಿಣಿಯಪ್ಪುದಱಿಂದೊಡಗೊಂಡು ಪೋಗಲೊಲ್ಲದೆ ಶ್ರೀದತ್ತಸೆಟ್ಟಿ ತನಗಿಷ್ಟನಪ್ಪುದಱಿಂದಿಲ್ಲಿ ಗುಪ್ತದೊಳಿರಿಸಿ ಪೋದನದಱಿಂದೀ ಧನಶ್ರೀ ಕಂದಿ ಕುಂದಿದಳೆಂಬುದುಂ, ಇಂತೀ ಧನಶ್ರೀಯ ಗರ್ಭದ ಕೂಸೀ ಮಂಡಳಕ್ಕೆಲ್ಲ ಮೆಱೆಯನಕ್ಕುಮೆಂದು ತಮ್ಮೊಳ್ ನುಡಿದು ಪೋಪುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣಮಿಲ್ಲದೆ ಮುಳಿದು

ಈ ಸಸಿವದನೆಯ ಗರ್ಭದ
ಕೂಸೀ ದೇಶಕ್ಕೆ ಮುಖ್ಯನಪ್ಪಂ ಗಡ ನಾ

ನಾ ಸಿಸುವನುಪಾಯದೊಳೆ ವಿ
ನಾಶಂ ಮಾಡಲ್ಕೆವೇಟ್ಕುಮೆಂದತಿಮುಳಿಸಿಂ ೪೧

ಮಸಗಿ ಕೃತಕದಿನಿರ್ವರ್ ತೊಟ್ಟಿರನೀ ಧನಶ್ರೀ ಪೆಱಲೊಡನೆಮಗೞಿಪಿಮೆಂದು ಬೇರೇಕಾಂತದೊಳ್ ಕಲಿಸಿ ಕೂರ್ಪರಂತೀ ಧನಶ್ರೀಗೆ ಸಂಘಾತಮಾಗಿರಿಮೆಂದಿರಿಸುವುದುಂ ಧನಶ್ರೀ ನವಮಾಸಂ ನೆಱೆದು ಗಂಡುಗೂಸಂ ಪೆಱುವುದುಂ ಮುನ್ನಮಿರಿಸಿದ ತೊಟ್ಟಿರಿರ್ವರುಂ ಪರಿತಂದು ಶ್ರೀದತ್ತಸೆಟ್ಟಿಗೞಿಪುವುದುಂ

ಮುನಿಸೊದವೆ ಕೊಲ್ವೆನೆಂಬೀ
ಮನದಿಂ ಪರಿತಂದು ನೋಡಿ ಕೂಸಂ ಕಂಡೊ
ಯ್ಯನೆ ಕೂರ್ಪರಂದದಿಂದಂ
ವನಿತೆಯನಟ್ಟಿತ್ತು ತಡವಿ ಕೃತಕದಿನಾಗಳ್ ೪೨

ಕುವಳಯನೇತ್ರೆಗೆ ಗರ್ಭ
ಸ್ರವಮಾದುದು ಕೆಟ್ಟೆನೆನಗೆ ಕೈಲೆಡೆಯೆಂದೀ
ಧವಳಾಕ್ಷಿಯನಣ್ಣ ವಣಿ
ಗ್ಭವನಿರಿಸಿದನಕಟ ಪೊಲ್ಲದಾಯ್ತೆಂದಾಗಳ್ ೪೩

ಧನಶ್ರೀಯುಂ ಪಾಸಿನ ಮೇಲೆ ಪಟ್ಟಿರಿಸಿ ಕೂಸಿನ ಪೊರೆಯೊಳಿರ್ದವರೆಲ್ಲರುಮಂ ಪೊಱಮಡಿಸಿ ಕಳೆದು ಕೂಸು ಸತ್ತುದೆಂದು ಪುಸಿದು ಪೊಱಗಣ್ಗೆ ಕೂಸನೊಯ್ದು ಮೆಲ್ಲನೇಕಾಂತದೊಳೊರ್ವ ಕ್ರೂರನಪ್ಪ ಪೊಲೆಯಂಗೆ ಸಾಲ್ವನಿತು ಪೊನ್ನಂ ಕೊಟ್ಟು ಮುನ್ನಮೆ ಸಮಕಟ್ಟಿ ಕೊಲ್ಲೆಂದಾತನ ಕಯ್ಯೊಳ್ ಕೊಟ್ಟು ಕಳೆದಿತ್ತಲ್

ಎನ್ನನೆ ನಂಬಿ ತನ್ನ ಸತಿಯುಂ ಗುಣಪಾಳನುದಾತ್ತವೈಶ್ಯವಂ
ಶೋನ್ನತನಟ್ಟಿಱಿಂದಿರಿಸಿ ಪೋದನವಂಗೆ ಮನೋನುರಾಗದಿಂ

ದೆನ್ನ ಸಖಿತ್ವಮುಂ ಮೆಱೆದು ಕೂಸುಮನೀಕೆಯುಮಂ ಸಮಂತು ಸಂ
ಪನ್ನತೆಯಿಂದಮೊಪ್ಪಿಸುವ ಭಾಗ್ಯಮನಾಂ ಪಡೆಯೆಂ ದುರಾತ್ಮನೆಂ ೪೪

ಎಂದು ಧನಶ್ರೀಯ ಮನದ ಸಂಕಲ್ಪಂ ಪೋಪಂತಾಗೆ ಮಾಯಾವಿ ಪ್ರಳಾ
ಪಂಗೆಯ್ಯೆ ಧನಶ್ರೀ ಅವನ ಮನದ ಕಪಟಮನಱಿಯದೆ ನಿಶ್ಚಯಮುತ್ತಮನೆಂದು
ನಂಬಿ ದುಃಖಮನಾಱಿಸಲೆಂದಿಂತೆಂದಳ್

ಕಱಿದವರ್ಗೇಕೆ ಪಂಬಲಿಪುದೇಕೆ ಪಲುಂಬುವುದೇಕೆ ಚಿತ್ತದೊಳ್
ಕೊಱೆವುದದೇಕೆ ಚಿಂತಿಸುವುದೇಕೆ ಬಟಿಲ್ವುದದೇಕೆ ದುಃಖದೊಳ್
ಮುಟುಗುವುದೇಕೆ ಬಾಯ್ವಿಡುವುದೇಕೆ ಕನಲ್ವುದದೇಕೆ ಶೋಕದೊಳ್
ಪಳಯಿಸುತಿರ್ಪುದೇಕೆ ಬಗೆಗೆಟ್ಟು ಬಟಿಲ್ವುದದೇಕೆ ನೋವುದೋ ೪೫

ಬೇಡೆಂದು ಮಾಣಿಸುವುದುಂ ಮಾಯಾವಿಪ್ರಳಾಪಮುಂ ಮಾಣ್ದನಿತ್ತಲ್
ಪೊಲೆಯಂ ಪಸುಗೂಸಂ ನಿರ್ಮನುಷ್ಯಮಪ್ಪಡವಿಗೊಯ್ದು ಗಂಟಲಂ ಮುಱಿದು
ಕೊಲ್ವೆನೆಂದು ಮಗವಂ ನೋಡುವುದುಂ

ಅರುಣತೆಯಿಂದ ಮೊಪ್ಪುವಧರಂ ಕನಕಚ್ಛವಿ ನೀಳ್ದ ಬಾಹು ಪಂ
ಕರುಹಮುಖಂ ನಿಮಿರ್ಕೆವಡೆದೊಪ್ಪುವ ನಾಭಿ ನೊಸಲ್ ಪೊದಳ್ದ ಭಾ
ಸುರತರ ಕೆಂಪಿನಿಂದೆಸೆವ ಪಾಣಿತಳಂ ನಸುಗೆಂಪನಾಳ್ವಸ
ತ್ತರಳವಿಲೋಚನೋದಯಮಗಲ್ದುರಮುನ್ನತಿವೆತ್ತ ಮಸ್ತಕಂ ೪೬

ಸೊಗಯಿಸಿ ತೋಱೆ ಕರಂ ಮಿಗೆ
ಮೊಗಮುಂ ನೋಡುತ್ತೆ ನಲಿವ ಶಿಶುವಂ ಪೊಲೆಯಂ
ಮಿಗೆ ನೋಡಿನೋಡಿ ತನ್ನೊಳ್
ಬಗೆದಂ ದಯೆಪುಟ್ಟೆ ಮೋಹಮೊದವಿರೆ ಮನದೊಳ್ ೪೭

ಕೊಲೆಯನುಡುಗಿ ಒಂದು ಪಳ್ಳದೊಳ್ ಮಳಲಂ ಬಗೆದು ಮಾವಿನೆಳದಳಿ

ರ್ಗಳಂ ಪಾಸಿ ಕೂಸನಲ್ಲಿ ಪಟ್ಟಿರಿಸಿ ಸುರರಾಜನಿಭನಪ್ಪೀತನೀ ತೀವ್ರಮಪ್ಪ ಬಿಸಿಲೊಳ್ ತಾನೆ ಹುಡುಹುಡನೆ ಮಗ್ಗಿ ಮಿಡುಮಿಡು ಮಿಡುಕಿ ಸಾಯದೆ ಮಾಣನಾನೇಕೆ ಪಾಪಮಂ ಮಾಡಿಕೊಳ್ವೆನೆಂದುಸಿರದೆ ಪೋದನನ್ನೆಗಮಿತ್ತಲಾತನ ಪುಣ್ಯಮೆ ಬರ್ಪಂತೆ ಖಲ್ವಬಿಲ್ವಸಂಯೋಗದಿಂ ಶ್ರೀದತ್ತಸೆಟ್ಟಿಯ ಮೈದುನನಪ್ಪಿಂದ್ರದತ್ತಸೆಟ್ಟಿ ಪರದುಪೋಗುತ್ತುಮಲ್ಲಿ ಬಿಟ್ಟಿರ್ಪುದುಂ, ಆತನ ಬೀಡಿನವರಿಂಧನಾರ್ಥಮತ್ತಿತ್ತ ತೊೞಲುತ್ತುಮೆಳದಳಿರ ಮೇಲೆ ಪಟ್ಟಿರ್ದು ನಲಿವ ಶಿಶುವಂ ಕಂಡು,

ಕರಮೊಳ್ಪಿತಾಯ್ತು ಸೆಟ್ಟಿಗೆ
ಪಿರಿದುತ್ಸವಮಾಗೆ ರಾಗದಿಂ ಶಿಶುವಂ ನಾಂ
ತ್ವರಿತದಿನೆಯ್ದೊಪ್ಪಿಸಿ ಕೊಡೆ
ಪಿರಿದಪ್ಪೊಂದರ್ಥಲಾಭಮುಂ ನಮಗಕ್ಕುಂ ೪೮

ಎಂದು ಕೂಸಂ ನಿಧಾನಮನೆತ್ತುವಂತೆತ್ತಿಕೊಂಡು ಬಂದಿಂದ್ರದತ್ತಸೆಟ್ಟಿಗೊಪ್ಪಿಸುವುದುಂ ತನಗೆ ಮಕ್ಕಳಿಲ್ಲದುದಱಿಂ ಬಡವಂ ಕಡಾರದ ಪೊನ್ನಂ ಕಂಡಂತೆ ಪೆರ್ಚಿ ತನ್ನ ಭಾರ್ಯೆ ಶ್ರೀದತ್ತನ ತಂಗೆಯಪ್ಪ ರಾಧೆಯಂ ಕರೆದು ನಿನಗೆ ಪುತ್ರಲಾಭಮಾಯ್ತೆಂದು ಬಾಲಾರ್ಕಸನ್ನಿಭ ಶಿಶುವಂ ಕೊಟ್ಟು ಕೂಸಂ ತಂದವರ್ಗೆ ಗುಪ್ತದಿಂ ಬೇೞ್ಪಸಿತು ಪೊನ್ನಂ ಕೊಟ್ಟು ಸೆಟ್ಟಿತಿ ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದೊಸಗೆಯುಮಂ ಜಿನಾಭಿಷೇಕಪೂಜೆಯುಮಂ ಮಾಡಿ ಸಂತೋಷದಿಂದಿರ್ಪುದುಂ

ಪಡೆದನೊಪ್ಪುವ ಪುತ್ರನಂ ಸುರರಾಜಸನ್ನಿಭನಂ ಮನಂ
ಬಿಡೆ ಮನೋಭವರೂಪನಂ ಪಡೆದಿಂದ್ರದತ್ತವಣಿಗ್ವರಂ
ತಡೆಯದೆಂಬುದನೆಯ್ದೆ ತೊಟ್ಟನೆ ಕೇಳ್ದು ವಿಸ್ಮಯಮಾದುದೆಂ
ದುಡುಗದಾ ವಚನಕ್ಕೆ ನಾಡೆಯುಮುಳ್ಕಿ ಬಳ್ಕಿ ನಿರಂತರಂ ೪೯

ಎನ್ನ ತಂಗೆಯಪ್ಪ ರಾಧೆಗೆ ಗರ್ಭಮಿಂದುವರಮಿಲ್ಲೆಂಬುದನಿಂಬಾಗಿ ಬಲ್ಲೆಂ

ಭೋಂಕನೆ ಮಗನಂ ಪಡೆದಳೆಂಬ ಮಾತಾದುದು ಧನಶ್ರೀಯ ಮಗನಕ್ಕುಮೋ ವಿಪರೀತಮಿದನಾರ್ಶ್ವೆವೆನೆಂದು ಬೆಗಡುಗೊಂಡು ತಂದೆಯ ಮನೆಗೆ ವಂದು ಗುಣಪಾಲಸೆಟ್ಟಿಯೊಳಚ್ಚೊತ್ತಿದಂತಪ್ಪ ಶಿಶುವಂ ಕಂಡಱಿದು ಬೆರ್ಚಿ ಕಲ್ಲಂ ತಾಗಿದ ಮಿಾಂಟಿಯಂತೆ ಮುಟ್ಟುಗೆಟ್ಟು ಪೆಂಡಿರ ಪೊಲ್ಲಮೆಯಂ ಕಂಡ ಗಂಡ ನಂತೆ ಮನಂಮುಱಿದು ಬೇಸಗೆಯೊಳುಪ್ಪಂ ತಿಂದನಂತೆ ಮಲ್ಮಲಂ ಮಱುಗಿ ಮತ್ತಂ ಕೊಲ್ವೆನೆಂಬ ಬಗೆಯಂ ತಂದುಪಾಯದಿಂ ಶ್ರೀದತ್ತಸೆಟ್ಟಿ ಪುಸಿಗೂ ರ್ಮೆಯಿಂದಿಂದ್ರಸೆಟ್ಟಿಯನಿಂತೆಂದಂ

ಅನುಜೆಗೆ ಪುತ್ರರಿಲ್ಲ ಸಿರಿಯುಂ ಧನಮುಂ ವ್ಯಥೆಯಾದುದೆಂದು ಮ
ನ್ಮನದೊಳಗಾಗಳುಂ ಮಱುಗುತಿರ್ದೆನಿಳಾವಳಯೈಕವಂದ್ಯನಂ
ತನಯನನೀಗಳರ್ತಿವೆರಸಾದರದಿಂ ನೆಱೆ ಕಂಡು ಸಂತಸಂ
ಮನದೊಳುದಾತ್ತಮಾದುದೆಲೆ ಪೋದುದು ಚಿಂತೆಯುಮೆನ್ನ ದುಃಖಮುಂ ೫೦

ಎಂದು ಚಾಟುಕಾರವಚನಂಗಳಿಂ ನಂಬೆ ನುಡಿದು ತಂಗೆಯ ಮೈದುನನ ಮೊಗಮಂ ನೋಡಿ ಮುನ್ನಪ್ಪೊಡಿನಿತು ಕಾಲಮಱಿಯದನಲ್ಲೆಂ ರಾಧೆಗೆ ಗರ್ಭಮಿಲ್ಲೆಂಬುದಂ ಬಲ್ಲೆನಿದೆನಗಾಶ್ಚರ್ಯಮಾದಪುದಿದನೆನಗಱಿವಂತಾಗೆ ಪೇಱಿಮೆನೆ ದಿಟಮಿಾತನೆನಗೆ ಕೂರ್ಪನೆಂದು ಕೂಸಿನ ವೃತ್ತಾಂತಮೆಲ್ಲಮಂ ಪೇೞೆ ರಾಧೆಯ ಮಾತಂ ಕೇಳ್ದು, ಬಡವರ ಮಕ್ಕಳಂತೆ ಹೀನೋತ್ಸಾಹಮಂ ಮಾಡದೆನ್ನ ತಂಗೆಯುಮನೆನ್ನಳಿಯನುಮನೆನ್ನೂರಿಂಗೊಡಗೊಂಡು ಬಂದು ಪಿರಿ ದಪ್ಪುತ್ಸಾಹಮಂ ಮಾಡವೇಳ್ಪುದೆಂದಿಂದ್ರದತ್ತಸೆಟ್ಟಿಯುಮನೊಡಂಬಡಿಸಿ ರಾಧೆಯುಮಂ ಕೂಸುಮನುಜ್ಜಯಿನಿಗೊಡಗೊಂಡು ಬಂದು ಕೆಲವುದಿವಸಂ ಬಱಿಕ್ಕೆ ನಿಷ್ಠುರನಪ್ಪೂರ್ವ ಮಾದೆಗಂಗೆ ಪಿರಿದಪ್ಪರ್ಥಮಂ ಕೊಟ್ಟೊಡಂಬಡಿಸಿ ಕೂಸಂ ನಡಪುವ ದಾದಿಯನೊಡಂಬಡಿಸಿ ಕೂಸು ಸತ್ತಿತೆಂದು ಮಾಡಿ ಪೊರಗಣ್ಗೊಯ್ದು ಮಾದೆಗನ ಕೈಯೊಳ್ ಕೊಲ್ಲೆಂದು ಕೊಟ್ಟಟ್ಟಿ ರಾಧೆಯುಮಂ ತನ್ನ ಪೆಂಡತಿಯಪ್ಪ ವಿಶಾಖೆಯುಮಂ ತನ್ನ ಮಗನಪ್ಪ ಮಹಾಬಳನುಮಂ ನಂಬಿಸಲ್ವೇಡಿ ಮಾಯಾಪ್ರಳಾಪಮಂ ಪಣ್ಣಿ

ಪಿರಿದಪ್ಪರ್ಥವನೀವೆನೆನ್ನ ಮಗಳಂ ಕೂರ್ತೀವೆನೞ್ಕತ್ತುರ್ ಮಾ
ಣ್ದಿರದುತ್ಸಾಹಮನೀ ಪುರಕ್ಕೆ ವಿಭವಂ ತಾನಾಗೆ ಮಾೞ್ಪೆಂ ನರೇ
ಶ್ವರನಂ ಮಾಣಿಸಿ ಭೂಷಣಾವಳಿಗಳಂ ಚೆಲ್ವಾಗಿ ಮುಂದಿರ್ದು ಚೆ
ಚ್ಚರದಿಂ ಮಾಡಿಸಿ ಕೂರ್ಮೆಯಿಂ ಕುಡುವೆನೆಂದಿರ್ದೆಂ ಮಹೋತ್ಸಾಹದಿಂ ೫೧

ಕಂದರ್ಪನಿಭಂ ತಂಗೆಗೆ
ನಂದನನುದಯಾರ್ಕತೇಜನಾದಂ ಲೇಸಾ
ಯ್ತೆಂದಿರ್ದೆನೆನ್ನ ತನು ದ
ಳ್ಕೆಂದುರಿದಪುದೀಗಳೆತ್ತ ಪೋಪೆನೊ ಕಱುವೇ ೫೨

ಎಂದು ತಂಗೆಯುನೇಱಲುಮಿೞಿಯಲುಂ ನೋಡಿ ಪ್ರಳಾಪಂಗೆಯ್ಯುತಿರ್ದನಿತ್ತಲ್ ಮಾದೆಗಂ ಕೂಸನಡವಿಗೊಯ್ದು ಗಂಟಲಂ ಮೆಟ್ಟಿ ಕೊಲ್ವೆನೆಂದು ಕೂಸಂ ಪೆಗಲಿಂ ನೆಲಕ್ಕಿೞಿಪುವುದುಮಿೞಿಯಲೊಲ್ಲದೆ ಮಾದೆಗನ ಪಱಿಗಡ್ಡಮನೆಡಗಯ್ಯೊಳ್ ಪಿಡಿದು ಬಲದ ಕಯ್ಯೊಳ್ ಮೊಗಮಂ ಪೊಯ್ಯುತ್ತುಂ ಕುಂಕುಮದುರುಳಿಯನನುಕರಿಸಿರ್ಪ ಮಡಂಗಳಿಂದೆರ್ದೆಯನೊದೆಯುತ್ತುಮಿರೆ ದುರಾತ್ಮಂ ಶಿಶುವಿನ ರೂಪುಮಂ ಗಾಡಿಯುಮುಂ ವಿಳಾಸಮುಮಂ ಮುದ್ದಾಟಮುಮಂ ನೋಡಿ ಕರುಣಮುಂ ಸ್ನೇಹಮುಂ ತಿಣ್ಣಮಾಗೆ ಕೊಲಲಾಱದೆ ತೊಱೆಯ ಪುಳಿನಸ್ಥಳದೊಳ್ ಮಳಲ ಪಾಸಂ ಮಾಡಿ ಮೆಲ್ಲನಲ್ಲಿ ಪಟ್ಟಿರಿಸಿ ನಿನ್ನ ಮೆಚ್ಚಿದಂತಾಗೆಂದು ಪೋದನನ್ನೆಗಂ

ತೊಱೆಯೊಳ್ ನೀರುಣಲೆಂದು ಬಂದು ತುಱುಗಳ್ ಪಟ್ಟಿರ್ದ ಪೂರ್ಣೇಂದುವಂ
ನೆಱೆ ಪೋಲ್ತುನ್ನತನಂ ಸುರೇಂದ್ರನಿಭನಂ ತದ್ಬಾಲನಂ ಕಂಡು ಮೂ
ಗಿಱಿಯುತ್ತುಂ ಕುಡಿವಾಲವೆತ್ತಿ ಕೆನೆಯುತ್ತಾನಂದದಿಂ ಸುತ್ತಿ ಮು
ತ್ತಿಱಿದತ್ತಿತ್ತಲವುಂಕಿ ಪೋಗದಿರೆ ಕಂಡೆಯ್ತಂದು ಗೋಪಾಲಕರ್ ೫೩

ಲೀಲೆಯೊಳೆ ಮಳಲ ಜಗಲಿಯ
ಮೇಲೆ ಸರೋಜಾತಸಖಗೆ ಮಿಗಿಲೆನಿಸುವ ಸ
ಲ್ಲೀಲೆಯ ತೇಜೋಧಿಕನಂ
ಬಾಲಕನಂ ನಲಿಯುತಿರ್ದನಂ ಕಂಡಾಗಳ್ ೫೪

ನಮ್ಮಾಳ್ದಂಗೆ ಕುಡುವೆನೆಂದು ಗೋಪಾಲರು ಶಿಶುವನೆತ್ತಿಕೊಂಡು ಬಂದು ಗೋವಿಂದನೆಂಬ ತುಱುಗಾಱಂಗೆ ಕುಡುವುದುಮಾತಂ ಕರವೊಸೆದು ಗೋಪಾಲರ್ಗೆ ಮೆಚ್ಚುಗೊಟ್ಟು ತನ್ನ ಪೆಂಡತಿಯಪ್ಪ ನಂದೆಯೆಂಬ ತುಱುಗಾರ್ತಿಯಂ ಕರೆದು ಪುತ್ರಲಾಭಮಾದುದೆಂದು ಮಗನಂ ಕೊಟ್ಟು ತುಱುಪಟ್ಟಿಯೊಳೊಸಗೆಯಂ ಮಾಡಿ ಕೂಸಿಂಗೆ ಧನಕೀರ್ತಿಯೆಂದು ಪೆಸರಿಟ್ಟು ಕೊಂಡಾಡಿ ನಡಪುತ್ತುಮಿರ್ಪುದುಂ ಶುಕ್ಲಪಕ್ಷದ ಚಂದ್ರನಂತೆ ಬಳೆದು

ಧನಕೀರ್ತಿಕುಮಾರಂ ಕಾ
ಮನಿಭಂ ತುಱುಪಟ್ಟಿಗರಸನಾಗಿರ್ಪಿನೆಗಂ
ಮನವೊಲ್ದೊಂದುದಿನಂ ವೈ
ಶ್ಯನುತಂ ಶ್ರೀದತ್ತಸೆಟ್ಟಿಕರಮಾದರದಿಂ ೫೫

ತನ್ನ ಮಗಳಪ್ಪ ಶ್ರೀಮತಿಯ ಮದುವೆಯಂ ಮಾಟ್ಪೆನೆಂದು ತುಪ್ಪಮಂ ಕೊಳಲೆಂದು ಪಲಂಬರ್ ಭೃತ್ಯರ್ವೆರಸು ತುಱುಪಟ್ಟಿಗೆವಂದು ಗೋಪಾಲಪರಿವೃಥನಾಗಿರ್ದ ಧನಕೀರ್ತಿಕುಮಾರನಂ ಕಂಡು ಗುಣಪಾಲಸೆಟ್ಟಿಯ ಮಗನಪ್ಪನೆಂದು ನಿಶ್ಚಯಿಸಿ ಮನದೊಳ್ ಬೆಗಡುಗೊಂಡು,

ಪಿಂಗದೆ ನಾನಾ ಮಾದೀ
ಗಂಗೆ ಮಹಾನಿಷ್ಠುರಂಗೆ ಪಲವಂ ಪೊನ್ನಂ
ಭಂಗಿಯೊಳೆ ಕೊಟ್ಟು ಮತ್ತೊಂ
ದಂ ಗಡ ಬಗೆದಳಿಪದೊಯ್ದು ಬೇಗಂ ಶಿಶುವಂ ೫೬

ಕೊಲ್ಲೆಂದಟ್ಟದೊಡಾತಂ
ಕೊಲ್ಲದೆ ಕಡುಕಷ್ಟನಾಗಿ ತುಱುಗಾಱಂಗಿ
ತ್ತಲ್ಲಿಯುಮರ್ಥವನೋವದೆ
ಮೆಲ್ಲನುಪಾರ್ಜಿಸಿದನಕ್ಕುಮತಿ ಲೋಭತೆಯಿಂ ೫೭

ಆದೊಡಮೇನಾಯ್ತು ಬೊಜಂಗನ ಕಷ್ಟತಿಕ್ಕೆಯಲ್ಲದೆ ಸೂಳೆ ಗಂಡರಿಲ್ಲದಿರಳೆಂಬಂತೆ ಮಾದೆಗನ ಕಷ್ಟತಿಕ್ಕೆಯಕ್ಕುಮಲ್ಲದಾನೆಂತುಮಿವನಂ ಕೊಲ್ಲದೆ ಮಾಣೆನೆಂದು ತನ್ನೊಳ್ ಗುಜುಗುಜಿಸಿಕೊಂಡು ತುಱುಗಾಱನಂ ವಸ್ತ್ರ ತಾಂಬೂಲ ಭೋಜನಾದಿಗಳಿಂ ತನಗೆ ವಶಗತಂ ಮಾಡಿ ಕೆಳೆಗೊಂಡು ಪತ್ತೆಂಟು ದಿವಸಮಲ್ಲಿರ್ದೊಂದು ದಿವಸಂ ಗೋವಿಂದನಂ ಬರಿಸಿ ತಾಂಬೂಲಮಂ ಕೊಟ್ಟು ಶ್ರೀದತ್ತನಿಂತೆಂದಂ

ಪಿರಿದಪ್ಪವಸರಮಾದುದು
ಭರವಶದಿಂದೆನ್ನ ಪುತ್ರನಲ್ಲಿಗೆ ಬೇಗಂ
ಬರೆದೋಲೆಯನೀಗಳೆ ಚೆ
ಚ್ಚರದಿಂದಂ ಪೋಗಿ ಕುಡುವನಂ ತತ್ಕ್ಷಣದಿಂ ೫೮

ನೀಂ ಪೇೞ್ವುದೆಂಬುದುಂ ಗೋವಿಂದಂ ತನ್ನ ಮಾನಿಸರ ಪೊಗಮುಂ ನೋಡಿ ಪೇೞಲೆಂದಿರ್ಪುದುಂ ಶ್ರೀದತ್ತಸಿಂತೆಂದಂ

ಮತ್ತಿನ ಬಂಟರೊಳಾಗದು
ಚಿತ್ತಜನಿಭನೆನಿಪ ನಿನ್ನ ಮಗನಂ ಸೌಂದ
ಯೋರ್ತ್ತಮನಂ ಧನಕೀರ್ತಿಯ
ನುತ್ತಮ ಗುಣಗಣನನಟ್ಟವೇೞ್ಪುದು ಬೇಗಂ ೫೯

ಎಂಬುದುಂ ಗೋವಿಂದಂ ಶ್ರೀದತ್ತಂ ಮುಂ ಕೂರ್ತುಕೊಟ್ಟ ದ್ರವ್ಯಾದಿಗಳಂ ನೆನೆದು ಮಱುಮಾತನೀಯದೆ ತನೂಜನಂ ಪೋಗವೇೞ್ಪುದುಂ ತತ್ಕ್ಷಣದಿಂ

ಧನಕೀರ್ತಿಗೆ ಕೂರ್ಪಂತೊ
ಯ್ಯನೆ ಮಾಯಾಪುಂಜನಿತ್ತು ತಾಂಬೂಲಮುಮಂ
ಧನಮುಮನಾತನ ಚಿತ್ತ
ಕ್ಕನುನಯಮಪ್ಪಂತು ಮಾಡಿ ಕೃತಕದಿನಾಗಳ್ ೬೦

ತನ್ನ ಪಂಕ್ತಿಯೊಳುಣಲಿಕ್ಕಿಸಿ ಚಿತ್ತೋತ್ಸಾಹಮಂ ಮಾಡಿ ತನ್ನ ಪಾಸಿನ ಕೆಲದೊಳ್ ಮತ್ತೊಂದು ಪಾಸನಿಕ್ಕಿ ನೀನಿಲ್ಲಿ ಪಟ್ಟಿರೆಂದೇಕಾಂತಕ್ಕೆ ಪೋಗಿ

ಎನಗೆ ಕೂರ್ಪೊಡೆ ಬೇಗದಿಂ ತಡವಿಲ್ಲದಿಂದೆ ಮಹಾಬಲಾ
ಮನೆಯ ಪಿತ್ತಿಲೊಳೀತನಂ ಪಿಡಿದೊಯ್ದು ಭೋಂಕೆನೆ ಕೊಂದು ನೆ
ಟ್ಟನೆ ಪೆಱರ್ಗನುರಾಗದಿಂದಮೆ ಪೇಟದೊರ್ಮೆಯೆ ಗುಪ್ತದಿಂ
ಮನದೆಗೊಂಡುಱೆ ಪೂೞ್ವುದೆಂದು ಕಷಾಯದಿಂ ಬರೆದೋಲೆಯಂ ೬೧

ಮುದ್ರಿಸಿ ಬೆಳಗಪ್ಪ ಜಾವದೊಳ್ ಧನಕೀರ್ತಿಯ ಕೈಯೊಳ್ ಕೊಟ್ಟು ಪೋಗೆಂದಟ್ಟುವುದುಂ ಆತಂ ಪೊಱಮಟ್ಟು ಪವನವೇಗದಿಂದುಜ್ಜಯಿನಿಗೆ ವಂದು ಪಥಶ್ರಾಂತನಾಗಿ ಬೞಲ್ದು ಸಿಂಪಾನದಿಯಂ ಪೊಕ್ಕು ಮೆಯ್ಯಂ ಕರ್ಚಿಕೊಂಡು ತೃಷೆ ಪೋಪಿನಂ ನೀರಂ ಕುಡಿದು ತನ್ನದೀತೀರದೊಳೊಪ್ಪುವ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದನನ್ನೆಗಮಿತ್ತಲ್, ಮೃಗಸೇನೆಯೆಂಬ ಸೂಳೆ ಪೊತ್ತು ವೋಗಿಂಗೆ ಕೆಳದಿಯರ್ವೆರಸು ಪೊಟಲಿಂ ಪೊಱಮಟ್ಟು ಸಿಂಪಾನದಿಯ ತಡಿ ವಿಡಿದು ಬರುತ್ತುಂ ತಚ್ಚೂತ ಮಹೀಜಾತದ ಕೆಳಗೆ ಪಟ್ಟಿರ್ದ ಜಿನಸಮಯ ವಾರ್ಧಿವರ್ಧನ ಚಂದ್ರನಂ ಕಂಡು ಕಳೆದ ಭವಮಂ ಕಣ್ಣಱಿದುದೆಂಬ ಮಾತಂ ದಿಟಂಮಾಡಿ

ತಂದೆಯನೆ ಕಂಡ ತೆಱದಿಂ
ದಿಂದೀವರನಯನೆ ಮನದೊಳಟ್ಟಿತರ್ತು ಮಹೀ
ವಂದಿತನಂ ಗುಣನಿಳಯನ
ನಂದಾಗಳ್ ನೋಡಿ ಪೋಗಲಾಱದೆ ಪದೆಪಿಂ ೬೨

ತಳಿರನಿೞಿಸುವ ಪಾದಮುಂ ಬಾೞೆಯ ಕಂಬದಂತೊಪ್ಪುವ ನೀಳ್ತೊಡೆಗಳಂ
ಪೊಳೆವ ನಯನಮುಂ ನಿಡಿದೋಳನುನ್ನತಿವೆತ್ತ ಲಲಾಟಮುಂ ಬಾಯ್ದೆರೆಯುಂ
ಕುಲಿಶಚಕ್ರಾದಿಲಕ್ಷಣಾಂಕಿತಮಪ್ಪ ಕೆಂದಳದೊಳೊಪ್ಪುವ ರೇಖೆಗಳಂ
ಜಲರುಹಾನನೆ ಮನಮೋತು ನೋಡುತುಂ ಬಂಬಳ ಬಾಡುತುಂ ಸ್ನೇಹ
ದಿಂದಂ ೬೩

ಅಂತಿರ್ದು ತೊಟ್ಟನೆ ಕೊಳೆ ಸೋಗಿಲೊಳಿರ್ದೋಲೆಯಂ ಕಂಡು ತಾಂ ಜಾಣೆಯುಂ ಸಕಲಶಾಸ್ತ್ರಪ್ರವೀಣೆಯುಮಪ್ಪುದಱಿಂ ಕಳೆದುಕೊಂಡು ಮುದ್ರೆಯ ನೊಡೆದು ವಾಚಿಸಿನೋಡಿ ಚಿಂತಾಕ್ರಾಂತೆಯಾಗಿ ತನ್ನೊಳಿಂತೆಂದಳ್

ಮನಸಿಜರೂಪನಂ ಸುರಸಮಾನನನುನ್ನತಸೂರ್ಯತೇಜನಂ
ಮುನಿನುತನಂ ಸಮಸ್ತಶುಭಲಕ್ಷಣಯುಕ್ತನನೆಂತು ಕೊಲ್ವೆನೆಂ
ಬಿನಿತನೊಡರ್ಚೆ ಕೊಲ್ವ ಬಗೆದಂದನೊ ತೊಟ್ಟನೆ ಪಾಪಕರ್ಮನೆಂ
ದನುಪಮಚಿತ್ತೆ ನೊಂದು ಸುರಿದಳ್ ಬಸಮಲ್ಲದ ಕಣ್ಣನೀರ್ಗಳಂ ೬೪

ಅಂತಾ ಮನದ ನೋವಿಂದಿರಲಾಱದೆ ಸೈರಣೆಗೆಟ್ಟು ಕಣ್ಣನೀರನಿಕ್ಕಿ ಕುಮಾರನ ಮೋಹದಿಂ ಶ್ರೀದತ್ತನಟ್ಟಿದೋಲೆಯಂ ಸೀಳ್ದು ಸಿಂಪಾನದಿಯೊಳಿಕ್ಕಿ ಕೆಳದಿಯನಟ್ಟಿ ಮನೆಯಿಂದೋಲೆಯುಮಂ ಕಂಠಮುಮಂ ತರಿಸಿ ಮಹಾಬಲನನಗೆ ಕೂರ್ಪನಪ್ಪೊಡೆ ಈ ಪೋಲೆಗಂಡಾಕ್ಷಣದೊಳೆ ಶೀಘ್ರಂ ತನ್ನ ತಂಗೆಯಪ್ಪ ಶ್ರೀಮತಿಯನೀತನೊಳ್ ತಡೆಯದಿಂದೆ ನೆರೆಪುವುದು, ನೆರಪದೊಡೆನ್ನಾಣೆ ಕಡೆಗಣಿಸವೇಡೆಂದು ಬರೆದು ಮುನ್ನಿನಂತೋಲೆಯಂ ಮುದ್ರಿಸಿ ಧನಕೀರ್ತಿಯ ಸೋಗಿಲೊಳಿಕ್ಕಿ ತನ್ನ ವಾಸಕ್ಕೆ ಪೋದಳನ್ನೆಗಮಿತ್ತಲ್ ಕುಮಾರನೆೞ್ಚತ್ತು

ಪೊೞಲೊಳಗೆ ಬಂದು ವೈಶ್ಯನ
ನಿಳಯಮನಾರಯ್ದು ಪೊಕ್ಕು ವೈಶ್ಯಾತ್ಮಜನಂ

ಬಲಯುತನಂ ಕಂಡು ಮಹಾ
ಬಲನಂ ಮಾತಾಡಿ ಮುನ್ನ ಮುಖವಾರ್ತೆಗಳಂ ೬೫

ಶ್ರೀದತ್ತನಟ್ಟಿದೋಲೆಯ
ನಾದರದಿಂದೀಯೆ ಕಳೆದುಕೊಂಡಂತದನ
ತ್ಯಾದರದಿಂ ಪೊಡೆನುಟ್ಟು
ಶ್ರೀದಯಿತಂ ಬಿಟ್ಟು ನೋಡಿ ಸಂತಸದಿಂದಂ ೬೬

ಕರವೊಳ್ಳಿಕೆಯ್ದನಯ್ಯಂ
ಸ್ಮರಸದೃಶನನಿನನನೆನ್ನ ತಂಗೆಗೆ ವರನಾ
ಗಿರೆ ಮಾಡಿ ಬಗೆವೊಡೀಕೆಗೆ
ವರನೀತನೆ ತಕ್ಕನುೞಿದವರ್ ತಗರಿಳೆಯೊಳ್ ೬೭

ಎಂದು ಪೇೞ್ದ ಮಹಾಬಲಂ ತಮ್ಮಯ್ಯಂಗತಿಭಕ್ತನಪ್ಪುದಱಿಂದಿದನೇೞಿ ಸಿರಲಾಗದೆಂದು ತಮ್ಮಬ್ಬೆಯಪ್ಪ ವಿಶಾಖೆಗಱಿಪಿ ಮೌಹೂರ್ತಿಕರಂ ಕರೆದು ಶ್ರೀಮತಿಯ ಮದುವೆಗೆ ದಿವಸಮಂ ಬೆಸಗೊಳ್ವುದುಂ ಅವರಿಂತೆಂದರ್

ಇಂದೀ ಮಗವಿನ ಮದುವೆಯ
ನೊಂದುಂ ಭಯಮಿಲ್ಲದುತ್ಸವಂ ಬೆರಸು ಧರಾ
ವಂದಿತ ಮಾಡಿದೆಯಪ್ಪೊಡೆ
ಮುಂದೀಯಾಣ್ಮಂ ಧರಾತಳಾಧಿಪನಕ್ಕುಂ ೬೮

ಎಂದ ನೈಮಿತ್ತಿಕರ ಮಾತಂ ಮಹಾಬಲಂ ಕೇಳ್ದು ಸಂತೋಷಂಬಟ್ಟು ಶ್ರೀಮತಿಗಂ ಧನಕೀರ್ತಿಗಂ ಪಾಣಿಗ್ರಹಣಂಮಾಡಿ ಸುಖಮಿರ್ಪುದುಂ ಶ್ರೀದತ್ತಸೆಟ್ಟಿ ಧನಕೀರ್ತಿಯನುಪಾಯದಿಂ ಮಗ್ಗಿಸಿದೆನೆಂದು ತನ್ನ ಬುದ್ಧಿಗಂ ಚಾತುರ್ಯಕ್ಕಂ ಮೆಚ್ಚಿ ತುಱುಪಟ್ಟಿಯೊಳೆರಡು ಮೂಱು ದಿವಸಂಬರಮಿರ್ದು ತುಱುಪಟ್ಟಿಯಂ ಪೊಱಮಟ್ಟುಜ್ಜಯಿನಿಗೆ ವಂದು ತನ್ನ ಮನೆಯಂ ಪೊಕ್ಕು

ತನ್ನ ಮಗಳ್ಗೆ ಮದುವೆಯಾದ ಧನಕೀರ್ತಿಯಂ ಕಂಡು ಬೆಱಗಾಗಿ

ಇಂತಲ್ಲದೆ ಕೊಲಬಾರದು
ಸಂತತಮೀ ಖಳನನೆಂದುಪಾಯದೊಳಾನೇ-
ಕಾಂತದೊಳೋಲೆಯನಟ್ಟಿದೊ
ಡಿಂತಾದುದು ಪುಣ್ಯಮುಳ್ಳವರ್ ಸತ್ತಪರೇ ೧೯

ಒಳಗಿಱಿಯಲೆಂದು ಪೊಕ್ಕು ತಾಂ ಮೂಗರಿಯಪಟ್ಟನೆಂಬಂತೆ ತನ್ನ ಬಗೆಯನೊರ್ವಂಗಪ್ಪೊಡಮುಱಿಪಲೊಲ್ಲದೆನ್ನ ಮುನಿಸಿಂತಲ್ಲದೆ ಪೋಗದೆಂದು ಶ್ರೀಮತಿ ರಂಡೆಯಾದೊಡಮಕ್ಕೆಂದು ಮತ್ತಂ ಧನಕೀರ್ತಿಯಂ ಕೊಲ್ವ ಕಜ್ಜಮನೆತ್ತಿಕೊಂಡು ಮತ್ತಂ

ಕ್ರೂರನಪ್ಪನನೊರ್ವನಂ ಕ್ಷಣದಿಂ ತಳಾಱನ ನಂಟನಂ
ಬೀರನಂ ಕರೆದೊಯ್ಯನಾತನ ಬೇಡಿದರ್ಥಮನಿತ್ತು ಸಂ
ಹಾರಿಸಿಂದುರಗಾಲಯಕ್ಕೆ ನಿವೇದ್ಯಮಂ ಶುಚಿಯಾಗಿ ವಿ
ಸ್ತಾರದಿಂದಿರುಳಣ್ಣ ತಂದವನಂ ವಿಚಾರಿಸದಾ ಕ್ಷಣಂ ೨೦

ಎಂದು ಸಮಕಟ್ಟಿ ನಾಗಾಲಯದೊಳಾತನನಿರಿಸಿ ಬಂದು ಮನೆಯವರನಱಿಯಲೀಯದೆ ಅಳಿಯನಪ್ಪ ಧನಕೀರ್ತಿಯಂ ಬೇರೆ ಕರೆದು ನಿನಗಂ ಶ್ರೀಮತಿಗಂ ವಿಘ್ನಮಿಲ್ಲದೆ ವಿವಾಹಮಾಗೆ ನಾಗೇಂದ್ರಂಗೆ ನಿನ್ನಿಂದಮೆ ಚರುವನಿಡಿಸುವೆನೆಂದು ಪರಸಿದೆನದಂ ಪುಸಿಮಾಡಲಾಗದು ಭಯಮಿಲ್ಲದೀ ನಾಗಾಲಯದ ಧರಣೇಂದ್ರಂಗೆ ತೋಱಿ ಪೊಡೆಮಟ್ಟು ಬಾಯೆಂದು ಬೇರೊಂದು ಮನೆಯೊಳಿರಿಸಿದ ಚರುಗಮಂ ಕುಡುವುದುಂ

ಉರಗಾಲಯಕ್ಕೆ ನೀನೀ
ಚರುವಂ ಕೊಂಡೊಯ್ದು ನಾಗರಾಜಂಗತ್ಯಾ

ದರದಿಂ ತೋಱಿ ಬಱಿಕ್ಕಾ
ದರದಿಂ ಪೊರಮಟ್ಟು ಬರ್ಪುದೆಂದಿರದೆನ್ನಂ ೭೧

ಎಂದು ಮಾವಂ ಬೆಸಸಿದೊಡೆ ಪೋದಪೆನೆಂಬುದುಂ ಮಹಾಬಲಂ ಮೈದುನನ ಕಯ್ಯ ಚರುವಂ ಕಳೆದುಕೊಂಡು ಧನಕೀರ್ತಿಯಂ ಮನೆಗೆ ಪೋಗೆಂದಟ್ಟಿ ನಾಗಾಲಯಕ್ಕೆ ಮಹಾಬಲನೊರ್ವನೆ ಬಂದು ಭಯಮಿಲ್ಲದೆ ಪುಗುವುದುಂ

ಅವರಿವರೆಂದು ಭಾವಿಸದೆ ನೋಡದೆ ಭೋಂಕನೆ ಬಾಗಿಲಲ್ಲಿ ನಿಂ
ದವನನಮರ್ದೊತ್ತಿ ಸಾರ್ಚಿ ತಲೆಯಂ ಪಿಡಿದೆತ್ತಿ ಧರಿತ್ರಿಗಿಕ್ಕಿ ಮ
ತ್ತವಯವದಿಂ ಕಱುತ್ತಿಱಿದು ಕೊಂದು ಮಹಾಬಲನಂ ತಳಾಱನಂ
ತವಿತಥಮಪ್ಪ ಪನ್ನಗನಿವಾಸದಿ ನೋಡಿದನಂಜಿ ನಿರ್ದಯಂ ೭೨

ಅಂತು ಮಹಾಬಳಂ ಪರಲೋಕಪ್ರಾಪ್ತನಪ್ಪುದುಮತ್ತಲ್ ಧನಕೀರ್ತಿಯಂ ಶ್ರೀದತ್ತಸೆಟ್ಟಿ ಮನೆಯೊಳ್ ಕಂಡು ವಿಸ್ಮಯಂಬಟ್ಟು ಸಾರೆವಂದು ಚರುವನೇಗೆಯ್ದೆಯೆಂದು ಬೆಸಗೊಳ್ವುದುಂ ಧನಕೀರ್ತಿಯಿಂತೆಂದಂ

ಎಮ್ಮ ಭಾವನುದಾರಗುಣಂ ನಾಗಾಲಯದಲ್ಲಿಗೆ ಭಕ್ತಿಯಿಂ
ನಿಮ್ಮ ಪೇೞ್ಕೆಯಿನುತ್ಸವದಿಂ ಪೋಪೆನ್ನನಿದೆಲ್ಲಿಗೆ ಪೋದಪೈ
ಕೆಮ್ಮನೆಂಬುದುಮಾಂ ಭಯದಿಂ ನೀವೆಂದುದನೆಂದೊಡೆ ಕೋಪದಿಂ
ನಿಮ್ಮನೋವದೆ ಬಯ್ದು ಮಗುಳ್ನೀನೆಂದು ಮಗುಳ್ಚಿ ನಿವೇದ್ಯಮಂ ೭೩

ಎನ್ನ ಕಯ್ಯ ಚರುವಂ ಕಳೆದುಕೊಂಡು ನಾಗಾಲಯಕ್ಕೆ ಪೋದನೆಂಬುದುಂ ಪಾೞ್ವಸಿಱಿಯೊಳ್ ಸಾಸವೆಯಂ ಕುಡಿದರಂತೆ ಮಱುಗಿ ಸುಂಟಿತಿಂದ ಬಾಯೊಳ್ ಬಿಸಿನೀರಂ ಕುಡಿದರಂತೆ ಮಿಡು ಮಿಡು ಮಿಡುಕಿ ನಾಗಭವನಕ್ಕೊರ್ವನೆ ಪರಿತಂದು ಕಡಿಖಂಡಮಾಗೆ ಪೊಯ್ಸಿಕೊಂಡು ಸತ್ತಿರ್ದ ಮಗನ ಪೆಣನಂ ಕಂಡು ಮಹಾದುಃಖಿತನಾಗಿ ಮನೆಗೆ ವಂದು ನಗರಜನಕ್ಕಂ ಕಳ್ಳರೆನ್ನ ಮಗನಂ ಕೊಂದರೆಂದು ಸಾವಂ ಪ್ರಕಟಂಮಾಡಿ ಪೆಣನಂ ಮನೆಗೆ ತಂದು

ಮಱುದಿವಸಂ ಸಂಸ್ಕರಿಸಿ ನೀರಿೞಿದು ಲೌಕಿಕಕ್ರಿಯೆಯೆಲ್ಲಮಂ ನೆಱೆಯೆ ತೀರ್ಚಿ

ಮಗನಂ ನೆನೆನೆನೆದಿರುಳುಂ
ಪಗಲುಂ ಪಂಬಲಿಸಿ ಮಱುಗಿ ಕಳ್ಳನ ತಾಯುಂ
ತಗಣಿತ ದುಃಖದಿನೊಳಗೊಳ
ಗೊಗೆದ ಮಹಾಶೋಕದಹನದಿಂ ಬೇಯುತ್ತುಂ ೭೪

ಈತನಂ ಕೊಲಲೆಂದತಿಧೂರ್ತರ್ಗಗ್ಗದ ನಿಷ್ಠುರರಪ್ಪವ
ರ್ಗೀತು ಮಾಣದೆ ಮೂರ್ಖನೆನಾನಂದರ್ಥಮನಿತ್ತೊಡವೆಲ್ಲರುಂ
ಪ್ರೀತಿಯಿಂ ಕೊಲಲೊಲ್ಲದೆ ಪೋದರ್ ನಾನೆ ದರಿದ್ರನೆನಾದೆನು
ರ್ವೀತಳಸ್ತುತನಪ್ಪ ಮಗಂಗೆ ಕೇಡಿನಿತಾದುದು ಪಾಪದಿಂ ೭೫

ಪಣ್ಣಿಂಗಿಟ್ಟೊಡೆ ಕಾಯ್ ಬಿರ್ದುದೆಂಬ ನಾಣ್ಣುಡಿ ನುಡಿವರ ಮಾತೆನಗಾದು ದೆಂದು ಮೂಗೞ್ಕಿಯುೞ್ತು ಧನಕೀರ್ತಿಯ ಮೇಲೆ ತೀವ್ರಮಪ್ಪ ಮುನಿಸಾಗಿ

ಎನ್ನ ಕಂದನುದಾರಗುಣಂ ಮತ್ತ್ರೀತನ ಕಾರಣದಿಂದೆ ಸ
ತ್ತೆನ್ನನಾಱಡಿಗೊಂಡನಿದಂ ನಾಂ ಚಿಂತಿಸಿ ಸಾಯದೆ ಬುದ್ಧಿಯಿಂ
ದೆನ್ನ ವೈರಿಯನೀತನನಾನಿಂದಿಲ್ಲಿಯೆ ಮೆಲ್ಲನೆ ಕೊಂದು ಕೇ
ಳೆನ್ನ ಚಿತ್ತದೊಳಾದೞಲಂ ನೋವಂ ಚಲದಿಂದಮೆ ತೀರ್ಚುವೆಂ ೭೬

ಎಂದು ಮನದೊಳಾಲೋಚಿಸಿ ವಿಶಾಖೆಯಂ ಕರೆದು ಏಕಾಂತದೊಳ್ ಧನಕೀರ್ತಿಯ ಪ್ರಸಂಚಮನೆಲ್ಲಮನಱಿಪಿ ನೀನೀತನಳಿಯನೆಂದು ಮೋಹಿಸದೆನಗೆ ಕೂರ್ಪೊಡೆನ್ನ ಮಾತನಂತಿಂತೆನ್ನದುದಾಸೀನಂ ಮಾಡದೆನ್ನ ಮನದೞಲುಂ ಮಹಾಬಲನ ಪಗೆಯುಂ ಪೋಪಂತು ವಿಷಪ್ರಯೋಗದಿಂದೊರ್ವರು ಮಱಿಯದಂತಿಂದು ನಾಳಿನೊಳಗೆ ತಡೆಯದೆ ಕೊಲಲ್ವೇೞ್ಕೆಂದು ಕಯ್ಯಂ ಮುಗಿದು ಪ್ರಾರ್ಥಿಸುವುದುಂ

ಸರಸಿಜಾಕ್ಷಿ ವಿಶಾಖೆ ಗಂಡನ ಮಾತನೇಳಿಸಲಾಗದೆಂ
ದುರಗರಾಜಸಮಾನಭೋಗಿಯನಿಂದು ಮಾಣದೆ ಕೊಲ್ವೆನೆಂ
ದಿರದೆ ದೊಡ್ಡಿದುವಪ್ಪ ಲಡ್ಡುಗೆಯಲ್ಲಿ ತೀವ್ರದ ನಂಜನೋ
ಸರಿಸದಿಕ್ಕಿ ಮಗಳ್ಗೆ ನಿನ್ನ ವರಂಗೆ ನೀನನುರಾಗದಿಂ ೭೭

ತಡೆಯದಿಕ್ಕುವುದೆಂದು ಪೇೞ್ದು ವಿಶಾಖೆ ನೆರೆಮನೆಗೆ ಪೋಗಿ ದೂತಿಗಂದಱಿಯುದವಳಂತಿರ್ಪುದುಂ ಶ್ರೀಮತಿ ಧನಕೀರ್ತಿಯ ಕಾಲಂ ಕರ್ಚಿ ವಿನಯದಿಂದೊಳಗಣ್ಗೆ ಕರೆದು ಪ್ರಿಯದಿಂದೇಱಲಿಕ್ಕಿ ತಳಿಗೆಯಲಿಕ್ಕುವುದುಂ ಆ ಪ್ರಸ್ತಾವದೊಳ್

ಹಿಂಸಾವಿರಹಿತನ್ಸೈ ನೀ
ನಿಂ ಸಲೆ ಬಾೞ್ ಪಾಪಕರ್ಮನೆಂ ಪೆಱರಱಿವಂ
ಹಿಂಸೆಯನೆ ಬಯಸಿ ಮಱುಗುವ
ನಾಂ ಸತ್ತಪೆನೆಂದು ಪೂಣ್ದು ಬರ್ಪನ ತೆಱದಿಂ ೭೮

ಶ್ರೀದತ್ತಸೆಟ್ಟಿಯುಂ ಪಸಿದು ಬರ್ಪುದುಂ ಇದಿರಾಗಿ ಪರಿತಂದಾ ಶ್ರೀಮತಿ ಕಾಲಂ ಕರ್ಚಿ ಬೇಗಮೊಳಗಣ್ಗೆ ಕರೆದು ವಿಸ್ತರಮಪ್ಪ ವಿಷ್ಟರಮನಿಕ್ಕಿ ಪಿರಿಯಡ್ಡಣಿಗೆಯುಮಂ ಪರಿಯಣಮುಮನಿಟ್ಟು

ದೊಡ್ಡಿದುವಾಗಿ ನುಣ್ಪೆಸೆದು ಸರ್ಕರೆಯೊಳ್ ಸಮನಪ್ಪ ಪೆಂಪಿನಾ
ಲಡ್ಡುಗೆಯಂ ಮನೋಮುದದಿನೆನ್ನವರಂಗಳಿಪಿಂನೆ ಮುನ್ನಮಾರಿ
ಬಡ್ಡಿಸಿದಂದು ನೋಡ ಪದೆದೀಗಳೆ ಡೊಂಬಿತಿ ಜೋಡೆ ಸೋಲದಿಂ
ಬಡ್ಡಿಸಿದಪ್ಪಳೆಂದು ನೆಱೆ ದೂರುವರೆನ್ನನವಜ್ಞೆಯಿಂ ಪೆಱರ್ ೭೯

ಎಂದು ಕಿಱಿಯುವಪ್ಪ ಲಡ್ಡುಗೆಗಳಂ ಧನಕೀರ್ತಿಗಿಕ್ಕಿ ವಿಷದೊಳ್ ಪುದಿದಿರ್ದ ದೊಡ್ಡಿದುವಪ್ಪ ಲಡ್ಡುಗೆಗಳಂ ತಂದೆಗೆ ಬಡಿಸುವುದುಮಿರ್ವರುಂ ರುಚಿಕರಮಾದುದೆಂದು ಬಾಯ್ಸವಿಗೆ ಸೋಲ್ತು ಮೆಲ್ವುದುಂ ಶ್ರೀದತ್ತಂ

ವಿಷಮಾವರಿಸಿ ನಿಲಲಾರದೆ ಕಣ್ತಿರಿದು ನೆಲಕ್ಕೆ ಬಿರ್ದು ನಿಶ್ಶಕ್ತನಾಗಿ ಮೆಯ್ಯಱಿಯದೆ ಬೆಮರ್ತು

ಪೆಱರೞಿವಂ ಬಯಸುವರೀ
ತೆಱದಿಂ ಮತಿಗೆಟ್ಟು ಸಾವರೆಂದೆಲ್ಲರ್ಗಂ
ನೆಱೆ ಸಾಱಿ ತೋಱಿ ಬೇಗದಿ
ನೞಿಪುವವೋಲ್ ಯಮಪುರಕ್ಕೆ ಸಂದ ಕುಟಿಲಂ ೮೦

ಇರೆ ಮದವಣಿಗಂ ಮಾವನ
ಮರಣಕ್ಕತಿದುಃಖಮಾಗೆ ಮನದೊಳ್ ಮಱುಗು
ತ್ತಿರೆ ಮನೆಯವರೆಲ್ಲಂ ಭೋ
ರ್ಗರೆದೞುತುಂ ನೊಂದು ಬೆಂದು ಪೞವಿಸುತಿರ್ದರ್ ೮೧

ಅಂತವರ ಹಾಹಾಕ್ರಂದನಮಂ ನೆರೆಮನೆಯೊಳಿರ್ದ ವಿಶಾಖ ಕೇಳ್ದು ಧನಕೀರ್ತಿ ಸತ್ತನೆಂದು ಗಂಡನ ಸಾವನಱಿಯದೆ ರಾಗಿಸಿ ಪೆಱರಂ ನಂಬಿಸಲ್ವೇಡಿ ಹಾಹಾಶೋಕಮಂ ಪಣ್ಣಿ ಕೇಳ್ದು ಕೆಟ್ಟೆನೞಿದೆನೆಂದು ಪುಯ್ಯಲಿಟ್ಟೞುತ್ತು ಮಱಿಯದಂತೆ ಬಂದೊಳಗೆ ಪೊಕ್ಕು ಸತ್ತಿರ್ದ ಗಂಡನುಮಂ ಕೆಲದೊಳ್ ಕುಳ್ಳಿರ್ದಳಿಯನುಮಂ ಕಂಡು

ಬೇಱಾಗಿ ತಳೋದರಿ ಮೆ
ಯ್ಯಱಿಯದೆ ನಿಲಲಾಱದೆೞ್ದು ಗೋೞಿಟ್ಟೞುತುಂ
ಮಱುಕದಿನಾಣ್ಮನ ಪೆಣನಂ
ಪೆಱೆಮುಖಿ ತಕ್ಕೈಸಿಕೊಂಡು ಕೆಟ್ಟೆನೆನುತ್ತುಂ ೮೨

ಆನೊಂದಂ ಬಗೆಯಲ್ ಬಿದಿ
ತಾನೊಂದಂ ಬಗೆದು ವಾರ್ಧಿಗರ್ದಿದುದೆನ್ನಂ

ನೀನಱಿವೆಯೊಂದು ಮಾಡಿದೊ
ಡಾನಱಿದೆಂ ಮಗಳೆ ನಿನ್ನ ಪುಣ್ಯಂ ಕಿಱಿದೇಂ ೮೩

ಮುನಿಪರರೆಂದ ದಿವ್ಯವಚನಂ ಪುಸಿಯಪ್ಪುದೆ ಕಂದ ಮಾಳವಾ
ವನಿಪತಿಯಾಗಿ ಜೈನಸಮಯಾಂಬುಧಿಗಗ್ಗದ ಚಂದ್ರನಾಗಿ ಮೇ
ದಿನಿಪತಿವಂದ್ಯನಾಗಿ ಪರಮಾಂಡಳಿಕರ್ ಬೆಸಕೆಯ್ಯೆ ರಾಜ್ಯಗೋ
ಮಿನಿಧರನಪ್ಪ ನಿನ್ನನಘ ಮಿಶ್ರಿತರಿನ್ನಱಿಯಲ್ಕೆ ಬರ್ಕುಮೇ ೮೪

ಎಂದಳಿಯನ ಮೊಗಮಂ ನೋಡಿ ಬಸಿಱಂ ಬಡಿದುಕೊಂಡೞ್ತು ಮಗಳ ಮೊಗಮಂ ನೋಡಿ ಪಳಯಿಸಿ ತಲೆಯಂ ಪೊಯ್ದು ಕೊಂಡೞ್ತು ನೆರೆದ ನಂಟರ ಬಳಸಿರ್ದ ಪೌರರ ಮೊಗಮಂ ನೋಡಿ

ಇರುಳೊಳ್ ಚಂದ್ರನ ರಶ್ಮಿಯಂ ಕಿಡಿಸಲೆಂದಿರ್ಪಾತನುಂ ಕೋಪದು
ಬ್ಬರದಿಂದಂ ಪಗಲೊಳ್ ದಿವಾಕರನ ತೀವ್ರೋಷ್ಣಾಂಶುವಂ ಮಾಣಿಪೆಂ
ಭರದಿಂದೆಂಬನುಮುರ್ವಿಯೊಳ್ ನಿಖಿಲ ಪುಣ್ಯಾಂಭೋಧಿಯಪ್ಪಾತನಂ
ಪುರುಡಿಂದಂ ಕೊಲಲೆಂದು ಕಾಯ್ವ ನರನುಂ ಗಾಂಪಂ ಪೆಱರ್ ಗಾಂಪರೇ ೮೫

ಎಂದು ಕಪಟವಿಲ್ಲದೆ ಮಾಯೆಯುಂ ಬಿಟ್ಟು ಶ್ರೀದತ್ತಂ ಮಾಡಿದ ಪೊಲ್ಲಮೆಯೆಲ್ಲಮನೊಂದುಗುಂದದೆಲ್ಲಮನೆಲ್ಲರ್ಗಮಱಿಪಿ ಗುಣಪಾಲಸೆಟ್ಟಿಯ ಮಗನೆಂದಱಿಯೆ ಪೇೞ್ದು ಧನಕೀರ್ತಿಕುಮಾರನಂ ಮಾಳವಾಧೀಶ್ವರನಾಗಿ ಜಿನಧರ್ಮದೋಜೆಯಿಂ ನಡೆದು ಪ್ರಾಣಿಗಳನೋವಿ ವಾತ್ಸಲ್ಯರತ್ನಾಕರನೆನಿಸಿ ಸುಜದಿಂ ರಾಜ್ಯಂಗೆಯ್ಯೆಂದು ಪರಸಿ ಮಗಳುಮಂ ದರ್ಶನಶುದ್ಧಿಯೊಳ್ ಶಚೀಮಹಾದೇವಿಯುಮಂ ಪತಿವ್ರತಾಗುಣದೊಳ್ ಪ್ರಭಾವತಿಯುಮಂ ಸೀತೆಯುಮಂ ದೃಢವ್ರತದೊಳ್ ಚೇಳಿನಿಯುಮಂ ಪೋಲ್ತು ಪಟ್ಟದರಸಿಯಾಗೆಂದು ಪರಸಿ ಪಲರುಂ ಬೇಡವೇಡೆನೆ ಮನದಟಲಿಂದಿರಲಾಱದೆ ವಿಷಪೂರಿತಮಪ್ಪ ಲಡ್ಡುಗೆಗಳಂ ತಿಂದು ವಿಶಾಖೆಯುಂ ಸಾವುದುಂ

ಪುರಜನಮುಂ ಬಾಂಧವರುಂ
ತರಳಾಕ್ಷಿಯ ವಚನದಿಂದಮಱಿದಾತನ ನಿ
ಷ್ಕರುಣತೆಗೆ ನಾಡೆಯುಂ ಕೊ
ಕ್ಕರಿಸಿ ಮನಂ ನೊಂದು ಮಱುಗಿ ಚೋದ್ಯಂಬಟ್ಟರ್ ೮೬

ತದ್ವೃತ್ತಾಂತಮೆಲ್ಲಮುಂ ವಿಶ್ವಂಧರಮಹಾರಾಜಂ ಕೇಳ್ದು, ಧನಕೀರ್ತಿ ಕುಮಾರ ನರಮನೆಗೆ ಮಹಾವಿಭೂತಿಯಿಂ ರಾಜಕುಮಾರ ಪರಿವೃತನಾಗಿ ಬಂದು ವಾತ್ಸಲ್ಯರತ್ನಾಕರನಂ ನೋಡಿ ಮೆಚ್ಚಿ, ಬಳಿಕ್ಕಮಾತನ ವೃತ್ತಾಂತ ಮೆಲ್ಲಮುಂ ಕೇಳ್ದು ತಲೆಯಂ ತೂಗಿ ಗುಣಪಾಲಸೆಟ್ಟಿಯಪ್ಪೊಡೆ ಪುಣ್ಯಮೂರ್ತಿ ಯುಂ ದೃಢವ್ರತನುಮಪ್ಪನಂತಪ್ಪ ಮಹಾಪುರುಷಂಗೆ ಪುಟ್ಟಿದನೆಂದೊಡೀತನುಂ ಕೇವಳನಲ್ಲನಾದೇಶಪುರುಷನಪ್ಪನೆಂದು ಧನಕೀರ್ತಿಯನರಮನೆಗೊಡಗೊಂಡು ಪೋಗಿ ವಿಶ್ವಾವತಿಕನ್ನೆಯುಮನರ್ಧರಾಜ್ಯಮುಮಂ ಕುಡಲೆಂದಿರ್ಪುದುಂ

ಗುಣಪಾಲಸೆಟ್ಟಿ ವೈಶ್ಯಾ
ಗ್ರಣಿ ದೇವಮನೋನುರಾಗದಿಂದಿರ್ದಂ ಧಾ
ರಿಣಿ ಪೂಜ್ಯನಪ್ಪನರರ
ಗ್ರಣಿ ಕೌಶಾಂಬಿಪುರಿಯೊಳ್ ಮಹೋನ್ನತಿಯಿಂದಂ ೮೭

ಎಂದೊರ್ವಂ ಬಿನ್ನವಿಪುದುಮಂದಾಗಳ್ ಕೇಳ್ದು ಭೂಭುಜಂ ಮೆಚ್ಚಿ ಬಂದ ದೂತಂಗಂಗಚಿತ್ತಮುಂ ಕೊಟ್ಟು ಮಱುದಿವಸಂ ಕೌಶಾಂಬಿಗೆ ಪೆರ್ಗಡೆ ಗಳನಟ್ಟಿ ಗುಣಪಾಲಸೆಟ್ಟಿಯಂ ಬರಿಸಿ ಪುರದೊಳಷ್ಟಶೋಭೆಯಂ ಮಾಡಿಸಿ ಸಕಳಸಾಮಂತ ಪರಿವೃತನಾಗಿ ಧನಕೀರ್ತಿಯುಂ ತಾನುಂ ಮಹಾವಿಭೂತಿ ಯಿಂದಿದಿರ್ಗೊಂಡು ಮನೆಯಂ ಪುಗಿಸಿ ಮುನ್ನಿನ ಪದವಿಯಂ ಕೊಟ್ಟು

ಎನಗೆ ಸಖನಾಗಿಯುಂ ನಂ
ಟನಾಗಿಯುಂ ನೀನೆ ನಿನ್ನ ನಂಬಿರ್ದ ಜಿನೇ

ಶನ ಧರ್ಮದಂದಮುಂ ಪೇ
ಟ್ದಿನುಪಮ ಜಿನಪಾದಸೇವೆಯಂ ಮಾಡೆನಗಂ ೮೮

ಎಂದು ತನ್ನ ಕೂರ್ಮೆಯುಂ ಸಭೆಗೆಲ್ಲಂ ತೋಱುವಂತೆ ನುಡಿದು

ನಿನ್ನ ತನೂಭವಂಗೆ ಧನಕೀರ್ತಿಗೆ ಮಾಳವದೇಶದರ್ಧಮುಂ
ಭಿನ್ನಸರೋಜವಕ್ತ್ರೆ ವೆರಸಿತ್ತಪೆನರ್ತಿಯೊಳಿಂತಿದಕ್ಕೆ ಮ
ತ್ತೆನ್ನದೆ ಸತ್ಯಶೌಚನಿಧಿ ಮಾನವವಂದಿತ ಮರ್ತ್ಯರತ್ನ ವೈ
ಶ್ಯೋನ್ನತ ನೀನೊಡಂಬಡುವುದೆಂದು ಮಹೀಶ್ವರವಂದಿತಕ್ರಮಂ ೮೯

ಕೈಮುಗಿದು ಬೇಡಿಕೊಂಡು ಗುಣಪಾಲಸೆಟ್ಟಿಯ ಮನದ ಸಂಶಯಂ ಪಿಂಗೆ ನುಡಿದೊಡಂಬಡಿಸಿ

ಧನಕೀರ್ತಿಕುಮಾರಂಗಂ
ತನೂಜೆಗಂ ಮನದೊಳೊಸೆದು ಪರಮೋತ್ಸವದಿಂ
ಜಿನಗಂಧೋದಕದಿಂದಂ
ಜನಾಧಿಪಂ ತಾನೆ ಬಂದು ಕೈನೀರೆಱೆದಂ ೯೦

ತದನಂತರಂ ರಾಜಶ್ರೀಯನನುಭವಿಸುತ್ತುಂ ಪತ್ತೆಂಟುದಿವಸಮನುಭವಿಸುತ್ತಿರ್ಪನ್ನೆಗಂ ಯಶೋಧರರೆಂಬರೊರ್ವರೇಕವಿಹಾರಿಗಳ್ ವಿಹಾರಿಸುತ್ತುಮುಜ್ಜಯಿನಿಗೆ ವಂದು ಪೊಱವೊೞಲೊಳಿರ್ಪುದುಂ ಗುಣಪಾಲಸೆಟ್ಟಿ ಮೊದಲಾದ ಶ್ರಾವಕರುಂ ಧನಕೀರ್ತಿ ಮೊದಲಾದ ಕುಮಾರಕರುಂ ವಿಶ್ವಾವತಿ ಮೊದಲಾದ ನಂದನೆಯರುಂ ಧನಶ್ರೀಯುಂ ಶ್ರೀಮತಿಯುಂ ಮೊದಲಾದ ಶ್ರಾವಕಿತಿಯರುಂ ಲಕ್ಷ್ಮೀಮತಿ ಮೊದಲಾದರಸಿಯರುಂ ಬೆರಸು ಅರಸುವ ಬಳ್ಳಿ ಕಾಲ್ದೊಳ್ ತೊಡರ್ದುದೆಂಬಂತೆ ಸುವ್ರತಾರೂಢರಾಗಲೆಂದಿರ್ದೆಮಗೆ ಮಹಾಪುರುಷರ್ ಭಾಗ್ಯದಿಂದಿದಿರ್ವಂದರೆಂದು ವಿಶ್ವಂಧರಮಹಾರಾಜಂ ಬಂದು ಬಲವಂದು

ಪಲವರ್ಚನೆಯಿಂದರ್ಚಿಸಿ ತ್ರಿಕರಣಶುದ್ಧಿಯಿಂ ಬಂದಿಸಿ ಪೊಡೆಮಟ್ಟು ಕುಳ್ಳಿರೆ ಗುಣಪಾಲಸೆಟ್ಟಿ ಸುಕವಿನಿಕರಪಿಕಮಾಕಂದಂಗಭಿಮುಖನಾಗಿ ಕರಕಮಲಂಗಳಂ ಮುಗಿದು ಧನಕೀರ್ತಿಗೆ ಶ್ರೀದತ್ತಸೆಟ್ಟಿ ಮಾಡಿದ್ಯೈದು ಕಂಟಕಂಗಳುಂ ತಪ್ಪಿ ರಾಜ್ಯಮಾದುದಾವ ಭವದ ಪುಣ್ಯದ ಫಲಮೆಂದು ಬೆಸಗೊಳ್ವುದುಂ, ಪರಮಾವಧಿಲೋಚನರಪ್ಪ ತಪೋನಿಧಿಗಳ್ ಧನಕೀರ್ತಿಧರಣೀಶ್ವರವಂದಿತ ಪಾದಯುಗನ ಮುನ್ನಿನ ಭವಮಂ ಪೇೞ್ದರ್.

ನೆಗೞ್ತೆವೆತ್ತ ಉಜ್ಜಯಿನೀ ಪುರಮದರ ಕೆಲದೊಳಿರ್ಪುದು ಸಿರಿಷ್ಟಮೆಂಬೂರ್, ಆ ಗ್ರಾಮದೊಳ್ ಮೃಗಸೇನನೆಂಬ ಮೀಂಗುಲಿಗನಿರ್ಪನಾತನ ಪೆಂಡತಿ ಘಂಟಿಯೆಂಬಳಾಯಿರ್ವರುಂ ಪಲಕಾಲಂ ಪಾಪಾನುರಾಗದಿಂದಿರ್ದೊಂದು ದಿವಸಂ ಬಲೆಯುಂ ಕೊಂಡು ಸಿಂಪಾನದಿಗೆ ಪೋಗುತ್ತುಮೆಡೆಯೊಳ್ ಯಶೋಧರರೆಂಬ ಋಷಿಯರ ಕೆಲದೊಳ್ ಧರ್ಮಮಂ ಕೇಳ್ವ ನೆರವಿಯಂ ಕಂಡು, ಬಲೆಯನಿೞಿಪಿ ದೂರದೊಳ್ ಕುಳ್ಳಿರ್ದು, ಈತಂ ಪ್ರತ್ಯಕ್ಷದೇವನಾಗಲೆವೇೞ್ಕುಮೆಂದು ತಾನುಂ ಕಯ್ಮುಗಿದು ಧರ್ಮಮಂ ಕೇಳುತ್ತುಮಿರೆ, ಸಕಲಶ್ರಾವಕರುಂ ತಂತಮ್ಮ ಬಯಸುವ ವ್ರತಂಗಳಂ ಕಯ್ಕೊಂಡು ದರ್ಶನದೊಳಂ ದೃಢರಾಗಿ ಮುನಿವರಂಗೆ ಪೊಡೆಮಟ್ಟು ಪೋಪುದುಂ ಮೃಗಸೇನನುಮೆರ್ದು ನಿಂದಿರ್ದು ಕಯ್ಯಂ ಮುಗಿದು, ದೇವ, ನಂಬಿದೆನೆನಗೊಂದು ಬ್ರತಮಂ ದಯೆಗೆಯ್ವುದೆನೆ ಮುನೀಶ್ವರರಿಂತೆಂದರ್: ಪಂಚಾಣುವ್ರತಂಗಳೊಳಮಾವುದಾದರುಮೊಂದು ವ್ರತಮಂ ಕೈಕೊಳ್ವುದೆನೆ ಅವಂ ಅಱಿಯೆನೆನೆ ಮತ್ತೆ ನೀಂ ಬಲೆಯುಂ ಬೀಸಿದಲ್ಲಿ ಮೊದಲ್ ಸಿಕ್ಕಿದೊಂದು ಮೀನಂ ಬಿಡುವುದೆನೆ ಅಂತೆಗೆಯ್ವೆನೆಂದು ಬಲೆಯುಂ ಕೊಂಡು ಸಿಂಪಾನದಿಯ ಪೆರ್ಮಡುವಿಂಗೆ ಪೋಗಿ ಜಾಲಮುಂ ಬೀಸುವುದುಂ ಪಿರಿದಪ್ಪ ಮೀನ್ ಬಂದೊಡೆ ಗುರುವಚನಮನುಲ್ಲಂಘಿಸಲಾಗದೆಂದು ಕುಱುಪಿಂಗೆ ನೇಣಂ ಕಟ್ಟಿ ಮಗುೞೆ ಮಡುವಿನೊಳ್ ಬಿಟ್ಟು ಸಿಂಪಾನದಿಯ ತಡಿವಿಡಿದರೆ ಗಾವುದಂತರಮಂ ಪೋಗಿ ಬಲೆಯುಂ ಬಿಡುವುದುಂ ಮುನ್ನಿನ ಮಹಾಮತ್ಸ್ಯಮೆ ಬಲೆಯೊಳ್ ಬರೆ ಮೇಣಿಂತು ಮೂಱು ಸೂೞ್ ವರ್ತಿಸೆ ವಿಸ್ಮಯಂಬಟ್ಟು ಮುನಿ ಕೊಟ್ಟ ವ್ರತಮಂ ನೆನೆದು ನಿಂದಿರ್ಪುದುಂ, ನೇಸಱ್ ಪಡುವುದುಂ ಬಱಿದೆ

ಪೋಗಲಾಗದೆಂದು ಪುಳ್ಳಿಗಳಂ ಕೊಂಡು ಮನೆಗೆವರ್ಪುದುಂ ತಳ್ವಾದನೆಂದು ಕನಲುತ್ತುಮಿರ್ದ ಘಂಟೆ ಮೀನಿಲ್ಲದೆ ಬಱಿದೆ ಪುಳ್ಳಿಯಂ ಕೊಂಡು ಬಂದ ಮೃಗಸೇನನಂ ಕಂಡು ಕಿನಿಸಿ ಪೊಱಗಣ್ಗೆ ನೂಂಕುವುದುಂ ತನ್ನ ತಳ್ವಾದ ಕಾರಣಮೆಲ್ಲಮಂ ಪೇೞೆ ಕಣ್ಗಳಿಂ ಕಿಡಿಯುಂ ಕೆಂಡಮುಂ ಪಾಯೆ ನುರ್ಗಾಗೆ ಬಡಿದು ನಿನಗೆ ವ್ರತಮನಿತ್ತ ಋಷಿಯರ ಮನೆಗೆ ಪೋಗೆಂದು ಪೊಱಮಡಿಸಿ ಪಡಿಯಂ ಕೀಱುವುದುಂ ಮೃಗಸೇನಂ ದುಃಖಿತನಾಗಿ ಶ್ರಾವಕಕ್ರಮಮಂ ಕೊಳ್ವೆನೆಂದು ಚಿತ್ತದೊಳ್ ನೆನೆಯುತ್ತುಂ ನಿದ್ರೆಗೆಯ್ವುದುಂ ನಡುವಿರುಳಪ್ಪಾಗಳ್ ಕಪ್ಪೆಯನಟ್ಟುತ್ತುಂ ಬಂದ ಪಾವು ಕಪ್ಪೆ ತಪ್ಪಿ ಮೃಗಸೇನನುಂಗುಟಮಂ ಪಿಡಿವುದುಂ ವಿಷಮೇಱೆ ಕಂಠಗತಪ್ರಾಣನಾಗಿ ಸುವ್ರತದ ಫಲದಿಂ ನಿನಗೆ ಧನಕೀರ್ತಿಯಾಗಿ ಪುಟ್ಟಿದಂ

ಭರವಸದಿಂದಾ ಮೀನಂ
ಗುರುವಚನಮನೊಳ್ಪಿತಾಗಿ ಮನದೊಳ್ ನೆನೆದಾ
ದರದಿಂದಮಯ್ದು ಸೂಟ್ವರ
ಭರದಿಂದಂ ಬಿಟ್ಟನಪ್ಪ ಕಾರಣದಿಂದಂ ೯೧

ಶ್ರೀದತ್ತಂ ಮಾಡಿದ್ದೈದು ಕೋಲೆಯಂ ಪರಿಹರಿಸಿ ವಿಶ್ವಂಧರ ಮಹಾರಾಜನ ರಾಜ್ಯದರ್ಥಕ್ಕೆ ಮುಖ್ಯನಾದನ್. ಮೃಗಸೇನನ ಸುವ್ರತಮಂ ತಾನುಂ ಕೇಳ್ದಾನುಮೆಯ್ದೆ ತಾಳ್ದಿದೆನೆನುತುಂ ಗಂಡನೊಡನೆ ಸತ್ತು ತದ್ವ್ರತಮಂ ಕೈಕೊಂಡೆನೆಂದ ಫಲದಿಂ ಘಂಟೆಯುಂ ಶ್ರೀದತ್ತಸೆಟ್ಟಿಗೆ ಶ್ರೀಮತಿಯೆಂಬ ಮಗಳಾಗಿ ಮತ್ತಂ ಧನಕೀರ್ತಿಗೆ ವಲ್ಲಭೆಯಾದಳಾ ಮೀನುಮಾ ಪುರದೊಳ್ ಮೃಗಸೇನೆಯೆಂಬ ಸೂಳೆಯಾದಳ್.

ಅಂತಹಿಂಸಾವ್ರತದ ಪ್ರತ್ಯಕ್ಷಫಲಮಂ ಕಂಡು ವಿಶ್ವಂಧರ ಮಹಾರಾಜನುಂ ಗುಣಪಾಲಸೆಟ್ಟಿಯುಂ ಲಕ್ಷ್ಮೀಮತಿಮಹಾದೇವಿಯುಂ ಧನಕೀರ್ತಿಯುಂ ಜಿನ ದೀಕ್ಷೆಯಂ ಕೈಕೊಂಡರ್. ಧನಕೀರ್ತಿಕುಮಾರಂ ಮೊದಲಾಗೆ ಸಮಸ್ತ

ರಾಜಕುಮಾರರುಂ ಶ್ರೀಮತಿ ಮೊದಲಾಗೆ ಪಲಂಬರರಸಿಯರುಂ ಸಕಲ ಪರಿಜನಮುಂ ನಿರ್ವಾಣಲಕ್ಷ್ಮಿಯ ತೊಡವಿನೊಳ್ ಕೀಲಿಸಿರ್ದ ಪಂಚರತ್ನ ಮೆನಿಪ ಪಂಚಾಣುವ್ರತಂಗಳಂ ಕೈಕೊಂಡು ದರ್ಶನದೊಳ್ ದೃಢರಾಗಿ ಮುನಿ ರಾಜಹಂಸನಂ ಬಂದಿಸಿ ಪೊೞಲ್ಗೆವಂದು ಸಂತೋಷಂಬೆರಸಿರ್ದರ್.

ಕೊಲೆಯಂ ಬಿಟ್ಟ ಮಹಾತ್ಮಂ
ಸುಲಲಿತ ಕೈವಲ್ಯ ಕಾಮಿನೀಶ್ವರನಕ್ಕುಂ
ಪಲವುಂ ಮಾತಿನೊಳೇನೊ
ಳ್ಗಲಿಯಾಗಿ ಸಮಸ್ತ ಧಾತ್ರಿಯಂ ತಾನಾಳ್ಗುಂ ೯೨

## ೩. ಬೇಯರೆ ಪರಸ್ತ್ರೀಗಾಸೆಗೆಯ್ದಿರ್ಪವರ್

ಶ್ರೀಮತ್ಸುರೇಂದ್ರ ವಂದ್ಯಂ
ಸಾಮಾನ್ಯಮೆ ಕಳ್ಳದ ವ್ರತಂ ಚಿಂತಿತ ಚಿಂ
ತಾಮಣಿಯೆಂದೊಸೆದಂ ಧರ
ಣೀ ಮಹಿತಂ ಸುಕವಿನಿಕರಪಿಕಮಾಕಂದಂ ೧

ಮಹೀಕಾಂತಂ ನಾಲ್ಕನೆಯ ವ್ರತಮುಂ ತಡೆಯದೆ ಕೇಳ್ವೆನೆಂದು ಕರಮಾದರದಿಂ ಗೌತಮಸ್ವಾಮಿಗಳ್ಗೆ ಪೊಡೆವಟ್ಟು ಕೈಗಳಂ ಮುಗಿದು ಕರ್ಮರಾಜನೊಡ್ಡಂ ಕಿಡಿಸುವ ನಿಬ್ರಹ್ಮದ ಕಥೆಯನೆನಗೆ ನಿಮ್ಮಡಿ ಬೆಸಸಿಮೆಂಬುದುಂ ಗಣಧರಮುನಿಮುಖ್ಯರಿಂತೆಂದು ಪೇೞ್ದರ್: ಹಣತೆಯೊಳ್ ಕೂಡಿ ಬತ್ತಿಯಿಂದೆಣ್ಣೆಯಿಂದಂ ಬೆಂಕಿಯಿಂದಂ ಬೆಳಗಿಂದಂ ಸೊಡರೆಂತೊಪ್ಪುಗುಂ, ಬಲ್ಲವರೊಡಗೂಡಿ ಬಣ್ಣದಿಂದೊರೆಯಿಂ ತೂಕದಿಂ ಮರ್ಚ್ಚಿಯಿಂದಂ ಪೊನ್ನೆಂತೊಪ್ಪುಗುಮಂತೆ ಸಮ್ಯಕ್ತ್ವದೊಳ್ ಕೂಡಿ ಕೊಲ್ಲದ ಪುಸಿಯದ ಕಳ್ಳದ ಪಾದರಮಿಲ್ಲದ ವ್ರತಂಗಳಿಂದಂ ಶ್ರಾವಕನುಮೊಪ್ಪುವುದು

ಪರವನಿತೆಗೆಱಗದವನಂ
ಧರೆ ನಂಬುವುದವನಿಪಾಳರುಂ ಕೈಕೊಳ್ವರ್
ಕರಮಾದರದಿಂದೆನೆ ಪಾ
ದರಮುಂ ಮಾಣೆಂಬ ಸುವ್ರತಂ ಕೇವಳಮೋ ೨

ಈ ಜಂಬೂದ್ವೀಪದ ಭರತಕ್ಷೇತ್ರದ ವತ್ಸಕಾವತೀ ವಿಷಯದ ಕೌಶಾಂಬಿಯೆಂಬ ಪೊೞಲನಾಳ್ವ ದಂತಬಳನೆಂಬ ಮಹಾಮಾಂಡಳಿಕನಾತನ ಪಟ್ಟದರಸಿ ಧಾರಿಣೀಮಹಾದೇವಿಯೆಂಬಳವರ್ಗೆ ಪ್ರಿಯನಂದನಂ ಪ್ರಮಾಥಿಯೆಂಬಗ್ರನಂದನನಂತವರ್ ಸುಖದಿಂ ರಾಜ್ಯಂಗೆಯ್ಯುತ್ತುಮಿರ್ಪುದುಂ

ವನಜಂಗಳ್ ದಳವೇಱಿ ಚೂತಲತೆಗಳ್ ನೀರೇಱಿ ಶೀತಾಂಶು ತೊಟ್ಟನೆ
ಪೂರ್ವಾದ್ರಿಯನೇಱಿ ಮನ್ಮಥಗಜಂ ಸೊಕ್ಕೇಱಿ ಪೊನ್ನುಯ್ಯಲಂ
ವನಜಾತಾಕ್ಷಿಯರೇಱಿ ಕಾಮನ ಶರಂ ಕೂರ್ಪೇಱಿ ಪುಂಡ್ರೇಕ್ಷು ಚಾ
ಪನ ಚಾಪಂ ಗೊಲೆಗೇಱಿ ಬಂದುದು ವಸಂತಂ ಸಂತತೋತ್ಸಾಹದಿಂ ೩

ಅಂತು ಬಂದ ವಸಂತಮಾಸದೊಳ್ ವನಪಾಲಕಂ ಬಂದು ದಂತಿಬಲ ಮಹಾರಾಜಂಗೆ ಬಿನ್ನಪಂಗೆಯ್ವುದುಮರಸನ್ ಸಂತುಷ್ಟಹೃದಯನಾಗಿ ವನಪಾಲಕಂಗಂಗಚಿತ್ತಮನಿತ್ತು ವನಮಂ ಲೇಸುಮಾಡೆಂದು ಪೋಗಲ್ವೇೞ್ದು ಮಱುದಿವಸಂ ವನಕ್ರೀಡೆಗೆ ಮಹೋತ್ಸಾಹದಿಂ ಪೊಱಮಟ್ಟು ಬಂದು ವನಮಂ ಪೊಕ್ಕು ವಸಂತರಾಜನ ಕಟಕದಂತಿರ್ದ ವನದ ಚೆಲ್ವುಮಂ ನೋಡಿ ಧಾರಿಣೀ ಮಹಾದೇವಿಗಿಂತೆಂದಂ

ಗಾಳಿಯ ತೀಟದಿಂದುಲಿವ ಕೆಂದಳಿರ್ಗಳ್ಪಱಿಯುಂ ಪೊದಳ್ದ ಭೃಂ
ಗಾಳಿಯ ನಿಸ್ವನಂ ನಿಮಿರ್ದ ಮಂಗಳಗೀತಮನಂತೆ ಚೂತಭೂ
ಜಾಳಿಗಳೊಳ್ಪ ಮಂಟಪದ ಭಂಗಿಯನಾವಗಮೋನೊ ಪೋಲೆ ಸ
ಲ್ಲೀಲೆಯಿನೀವನಂ ನೆಱಿಯೆ ಪೋಲ್ತುದು ನೋಡ ವಿವಾಹಗೇಹಮಂ ೪

ಎಂದು ನಗುತ್ತುಂ ಕಿಱಿದಂತರಂಬರಂ ನಡೆದು ಮನೋಜರಾಜನ ಮನೆಯಂತಿರ್ದ ಸಹಕಾರಮಹೀರುಹಂಗಳುಮಂ ಸುಜನರ ಮನದಂತೆ ನೇರಿತ್ತಾಗಿ ನಲಂಬೆತ್ತಿರ್ದೆಳಲತೆಗಳುಮಂ ಜಿನಧರ್ಮದಂತೆ ನಿರ್ಮಳಮಾಗಿ ಸೊಗಯಿಸುವ ತಿಳಿಗೊಳಂಗಳುಮಂ, ಸಹಜಕವಿಯ ವಚನದ ರಚನೆಯಂತಿನಿದಪ್ಪ ವೃಂದವಾಱಿಗಳುಮಂ, ಮನೋವಲ್ಲಭೆಗೆ ತೋಱುತ್ತುಂ ಪ್ರಮಾಥಿಕುಮಾರಂ ಮೊದಲಾದ ಕುಮಾರರುಮನೊಡಗೊಂಡು ಪಿರಿದು ಬೇಗಂ ವನಕ್ರೀಡೆಯನಾಡಿ ಬೞಲ್ದು ಬಂದೊಂದು ಮಾವಿನ ಲತಾಮಂಟಪದೊಳಗೆ ತಳಿರ ಪಾಸಿನ ಮೇಲೆ ಪಟ್ಟಿರ್ಪುದುಂ, ಪ್ರಮಾಥಿಕುಮಾರನುಂ ಸೌಂದರದೇವಿಯುಮಾನಂದದಿಂದೊಂದು ಕಂಕೆಲ್ಲಿಮಹೀಜಾತದ ಕೆಳಗೆಯಿರ್ದು ಮೊರೆವಳಿಗಳ ಮೃದುನಿನಾದಕ್ಕಂ ಪಾಡುವ ಗಾಂಧರ್ವರ ಗೇಯದ ನುಣ್ಪುವೆತ್ತ ಕೋಮಲನಿನಾದ

ಕ್ಕಂ ಜನದ ಕಳಕಳಕ್ಕಂ ಕಿವಿಸೋಲ್ತು ಪುರುಡಿಂ ಸವತಿವೆಂಡತಿ ಮುನಿದ ಗಲ್ವಂತೆ ನಿದ್ರಾಂಗನೆ ಸೌಂದರಮಹಾದೇವಿಯನೊಲ್ವುದುಂ. ಅಂತು ನಿದ್ರಾಂ ಗನಾಲಿಂಗಿತೆಯಾಗಿರ್ದ ನಲ್ಲಳಂ ತೆಗೆದು ತಱ್ಕೈಸಿ ಮೆಲ್ಲನೆ ಪ್ರಸೂನಶಯ್ಯೆ ಯೊಳ್ ಪಟ್ಟಿರಿಸಿ ದಿಶಾವಲೋಕನಂಗೆಯ್ಯುತ್ತಿರ್ಪಿನಮೊರ್ವ ಮಹಾ ಸಾಮಂತನ ಮಗಂ ವಸಂತನೆಂಬಂ ತನ್ನ ಪ್ರಾಣವಲ್ಲಭೆಯಪ್ಪ ವಸಂತತಿಲಕೆ ಯೆಂಬ ರಾಜಪುತ್ರಿಗೆ ತನ್ನ ಬಿಲ್ಲ ಬಲ್ಮೆಯಂ ತೋಱಲೆಂದು ಪುಂಖಾನುಪುಂಖ ಮೆಂಬ ಸೀಮಾವಿನ ದೋರೆಗಾಯ್ಗಳಂ ಗೊಲೆವೆರಸು ನೆಲಕ್ಕೆ ಬೀೞಲೀಯದೆ ಸಾಯಕಮೆ ಕೈಯೆನೆ ಪಟ್ಟಿರ್ದ ಮಾರ್ಗದೊಳೆ ಲೀಲೆಯಿಂದೆಚ್ಚು ಮನೋ ಹರಿಗೆ ಕುಡುತಿರ್ಪುದುಂ ಅದಂ ಪ್ರಮಾಥಿಕುಮಾರಂ ಕಂಡು

ಕಡುಜಾಣಂ ಬಿಲ್ಲೊಳೀತಂ ಸ್ಮರನಿಭನದಟಂ ನಲ್ಲಳೆಂದಂದು ನೇ
ರ್ಪಡೆ ನಾನಾಭಂಗಿಯಿಂ ತೋಱಿದಪನಿವನ ಕೌಶಲ್ಯಮಂ ಬೇಗದಿಂ ಕಂ
ಡೊಡೆ ನೀನುಂ ತೋಱವೇೞ್ಕೆನ್ನದೆ ಬಱಿದಿರಳೀ ಕಾಂತೆಯುಂ
ಚಾಪಮಂ ತಾಂ
ಪಿಡಿಯಲ್ ಜಾಣಿಲ್ಲ ಕೇಳಿಲ್ಲೆನಗೆನೆ ಪೆಱತೇಂ ಬಲ್ಲೆನತ್ಯಂತ ದೂರಂ ೫

ಇವಳಱಿಯದ ಕಳೆಗಳ್ ಭೂ
ಭುವನದೊಳಿಲ್ಲೀಕೆ ನಿದ್ರೆಯಿಂದೆರ್ದು ಮಹೀ
ಧವ ನಿನ್ನ ಬಿಲ್ಲ ಬಲ್ಮೆಯ
ನಿವನಂತಿರೆ ತೋಱವೇೞ್ಕುಮೆನ್ನದ ಮುನ್ನಂ ೬

ಪೋಪೆನೆಂದೆರ್ದು ಮೆಲ್ಲನೆ ಪೊಱಮಟ್ಟು ತನ್ನ ಪೋಗನೊರ್ವರ್ಗಪ್ಪೊಡಂ ಪೇೞದೆ ಧನುರ್ವಿದ್ಯೆಯಂ ಕಲ್ವೆನೆಂಬುದ್ಯೋಗಮನೆತ್ತಿಕೊಂಡು ಕತಿಪಯ ಪ್ರಯಾಣಂಗಳಿಂ ಪಾಟಲೀಪುತ್ರಮೆಂಬ ನಗರಕ್ಕೆ ಬಂದು ದ್ರೋಣಾಚಾ ರ್ಯರಂ ಕಂಡು

ಬೆಲೆಯಿಲ್ಲೆನಿಸುವ ರತ್ನಾ
ವಳಿಯಿಂ ಬಿಲ್ಲೋಜನಂಘ್ರಿಯುಗಮಂ ಧಾತ್ರೀ
ತಳನಾಥಸುತಂ ಪೂಜಿಸಿ
ಪೊಡೆಮಟ್ಟು ಬಱಿಕ್ಕೆ ವಿನಯದಿಂದಿರೆ ಭೂಪಂ ೭

ದ್ರೋಣಾಚಾರ್ಯರ್ ಮನದೊಳ್
ಜಾಣನಿವಂ ಚಾರುರೂಪನತ್ಯಧಿಕಗುಣಂ
ಕ್ಷೋಣೀಶನಾಗವೇೞ್ಕುಂ
ಕ್ಷೋಣಿಯೊಳುಱಿದವರ್ಗೆ ವಿನಯಗುಣಮಿನಿತೊಳವೇ ೮

ಎಂದು ಪ್ರಮಾಥಿಕುಮಾರನ ಮೊಗಮಂ ನೋಡಿ ನೀಮೆಲ್ಲಿಂ ಬಂದಿರೆಲ್ಲಿ ರ್ಪಿನಿಮ್ಮ ಪೆಸರೇನೆಂಬುದಿಲ್ಲಿಗೇಂ ಕಾರಣಂ ಬಂದಿರೆಂದು ಬೆಸಗೊಳ್ವುದುಂ ಪ್ರಮಾಥಿಕುಮಾರನಿಂತೆಂದಂ

ದೂರದೇಶದೊಳಿರ್ದು ಬಂದೆನಿಳಾಮರಾತ್ಮಜನೆಂ ಸವಿ
ಸ್ತಾರದಿಂ ಜಿನಭಕ್ತನೆಂಬುದು ಪೇೞಲೆನ್ನ ಪೆಸರ್ ಗುಣಾ
ಧಾರ ಪೆಂಪಿನ ಚಾಪವಿದ್ಯೆಯನರ್ತಿಯಿಂ ಕಲಲೆಂದು ಪಂ
ಕೇರುಹೋದರವಂಶಭಾಸ್ಕರ ಬಂದೆನೆಂದೊಡೆ ಕುಂಭಜಂ ೯

ಪ್ರಮಾಥಿಕುಮಾರನ ನುಡಿವ ಭಾವಕ್ಕಂ ವಿನಯಕ್ಕಂ ಮನದೆಗೊಂಡು ಚಾಪ ವಿದ್ಯೆಯೊಳೀತನಂ ಜಾಣನಂ ಮಾಡುವೆನೆಂದು ಚಿತ್ತದೊಳ್ ಪೂಣ್ದು ಪ್ರಮಾಥಿ ಕುಮಾರನ ಕಯ್ಯಂ ಪಿಡಿದೊಡಗೊಂಡು ಪೋಗಿ ಪಂಕ್ತಿಯೊಳುಣಲಿಕ್ಕಿಸಿ ವಸ್ತ್ರತಾಂಬೂಲಾದಿಗಳಿಂ ಸಂತೋಷಂಬಡಿಸಿ ಪಥಶ್ರಮಮಂ ಕಳೆದು ಮಱು ದಿವಸಮಿಂತೆಂದಂ; ಚಾಪವಿದ್ಯೆಯೊಳ್ ನಿನ್ನಂ ಸವ್ಯಸಾಚಿಗಂ ಭೀಮಂಗ ಮಧಿಕನೆಂಬಂತು ಮಾಡುವೆನಂಜದೆ ಬಿಲ್ಲಂ ಕಲ್ಲೆಂಬುದುಂ ದ್ರೋಣಾಚಾರ್ಯ ರೊಳಾದ ಕಾರುಣ್ಯಕ್ಕೆ ಮನದೊಳ್ ಮೆಚ್ಚಿ ಪ್ರಮಾಥಿಕುಮಾರಂ ತನ್ನೊ ಳಿಂತೆಂದಂ

ಓಲಗಿಪಂಗೆ ಭೂಭುಜರ ಕೂರ್ಮೆಯುತ್ತಮಮಪ್ಪ ಧರ್ಮಮಂ
ಕೇಳಲು ಬಂದವಂಗೆ ಮುನಿನಾಥರ ಕೂರ್ಮೆಯುಮೆಯ್ದೆ ಶಸ್ತ್ರಶಾ
ಸ್ತ್ರಾಳಿಯುಮಂ ಕರಂ ಕಲಿಪವಂಗಿರದೋಜರೊಳಾದ ಕೂರ್ಮೆಯುಂ
ಲೀಲೆಯಿನಾದೊಡಾತನೆ ಮಹೋದಯನಾತನೆ ಧನ್ಯನಲ್ಲನೇ ೧೦

ಎಂದು ನಲಿದು ಬಿಲ್ಲ ಬಲ್ಮೆ ತನಗಾಗಳಾದಂತೆ ಮುಯ್ಮೃದಮಾಗಿ ಶುಭ ದಿನದೊಳ್ ಚಾಪವಿದ್ಯೆಯಂ ಮೊದಲ್ಗೊಂಡು

ಒಂದೆಡೆಯೊಳುಂಡೆನಪ್ಪೊಡೆ
ಸಂದೀ ಬಿಲ್ವಿದ್ಯೆಯಾಗಲಱಿಯದು ತಿರಿದುಂ
ಡಂದಲ್ಲದೆ ಮೆಯ್ಮಣಿಯದು
ಸಂದೆಯಮಿನ್ನೇಕೆ ಬಿಲ್ಲನಾಂ ಕಲ್ವಿನೆಗಂ ೧೧

ತಿರಿದುಂಬೆನೆಂದು ಪೂಣ್ದು ವಿದ್ಯೆ ಕಾರಣಮಾಗೆ ಮೆಯ್ಸುಖಮಂ ಬಿಟ್ಟು ದ್ರೋಣಾಚಾರ್ಯರ ಮಾತಂ ಮೀಱಿ ಭಿಕ್ಷಾಹಾರಮನುಂಡು ಪಲವು ದಿವಸ ಮುಪಾಧ್ಯಾಯರ್ ಪೇೞ್ದೋಜೆಯೊಳ್ ನೆಗೞ್ದು ಚಾಪವಿದ್ಯೆಯೊಳತಿ ಪ್ರೀತನಾಗಿ

ಜಿನಭಕ್ತನ ದೊರೆಯಾರ್ ಮೇ
ದಿನಿಯೊಳ್ ದೊರೆಯಪ್ಪೊಡರ್ಜುನಂ ಕರ್ಣಂ ರಾ
ಮನಮೋಘನಕ್ಕುಮಲ್ಲದೆ
ಜನಪಸುತರ್ ಚಾಪವಿದ್ಯೆಯೊಳ್ ಪೋಲ್ತಪರೇ ೧೨

ಎಂದು ಪುರಜನಮುಂ ಜಗಜ್ಜನಮುಮೊಂದೆ ಕೊರಲೊಳ್ ಪೊಗೞೆ ಪ್ರಸಿದ್ಧಿಗೆ ಸಂದು ಚಟ್ಟುತ್ತರಮಾಯ್ತೆಂಬ ನಾಣ್ಣುಡಿಯಂ ನನ್ನಿಮಾಡಿ ದ್ರೋಣಾಚಾರ್ಯರ್ಗಂ ಮಿಗಿಲೆನಿಸಿ ಸುಖದಿಂದಿರ್ಪುದುಮೊಂದುದಿವಸಂ ಜಿನಭಕ್ತಕಂ ಮೊದಲಾದ ಶಿಷ್ಯನಿಕಾಯಂ ಬೆರಸು ಪೊೞಲಿಂ ಪೊಱಮಟ್ಟು ಪೋಗುತ್ತುಮಿರ್ಪುದುಮಾ ಪುರಮನಾಳ್ವ ಸಿಂಹಸೇನ ಮಹಾರಾಜನ ಮಗಳಪ್ಪ

ಚಂದ್ರಲೇಖೆಯೆಂಬ ಕುಮಾರಿ ಕತಿಪಯ ಪರಿಜನಂ ಬೆರಸು ಪುರದ ಪೊಱಗಣ
ಸಹಸ್ರಕೂಟ ಚೈತ್ಯಾಲಯಮುಮಂ ಬಂದಿಸಿ ಮಗುೞ್ದು ಬರುತ್ತುಮಿರ್ಪುದುಂ

ಮದದಿಂ ಕಣ್ಗೆಟ್ಟು ಭೋರೆಂದಧಿಕಬಲದಿನೇವಯ್ಸಿ ಕಾಪಿರ್ದರಂ ಕ
ಟ್ಟಿದ ಶುಂಭತ್ಕಂಬಮುಂ ಕಿತ್ತಡಸಿ ಬಡಿಯುತುಂ ಸೀಳುತುಂ ಸೊರ್ಕಿನಿಂ ತೂ
ಳ್ದದಯುಂ ಮೆಯ್ವೆರ್ಚಿ ಮುಂ ಬಂಧಿಸಿದ ನಿಗಳಮುಂ ಚಕ್ಕುನೆಕ್ಕೆಂಬಿನಂ ಕೋ
ಪದಿನಾಗಳ್ ನುಗ್ಗುನುಗ್ಗಪ್ಪಿನೆಗ ಮುಱಿದು ಕಾಡಾನೆವೋಲ್
ತೀವ್ರದಿಂದಂ ೧೩

ದೂರದಿಂ ಮಾರಿಯ ಮೂರಿಯಂತೆ ಬರ್ಪ ಸೊರ್ಕಿದಾನೆಯುಂ ಕಂಡು
ವೀರರೊಳಸಾರೆ ಗಱಿಪರೊಳಸುರ್ಕೆ ಪೊಂಕಮುಳ್ಳವರ್ ಪೊಂಕಂಗೆಟ್ಟೋಡೆ,
ಬಿರುದರರಿದೆಂದು ಪೆಱಪಿಂಗೆ, ಬಂಟರ್ ಕೊಂಡಾಡುವರ್ಗೆಂಟರೊಳಿರೆ,
ಬೆಸದವರ್ ಬೆಸದವರಂತೆ ಸಿವಿಗೆಯನಿರಿಸಿ ಪೋಗೆ ಚಂದ್ರಲೇಖೆಯೊರ್ವಳೆ
ತಳರದೆ ನಿಂದ ಪರಿಚ್ಛೇದಮುಮಂ ಕಂಡು ಮೆಚ್ಚಿ ಸಮಯವಾತ್ಸಲ್ಯಮುಮಂ
ಮೆಱೆವೆನೆಂದು ಕೋಪಾಟೋಪದಿಂ ಕುಮಾರಿಗಾಗಿ ಪರಿತರ್ಪ ಗಂಧಸಿಂಧುರ
ಕ್ಕಡ್ಡಂ ಬಂದು ನಿಂದು

ತುಂಗಮೆನಿಸಿರ್ದ ಪಂಚಪ
ದಂಗಳನೋದುತ್ತುಮಧಿಕಗುಣಿ ಕರಿಪತಿಯುಂ
ಭಂಗಂ ಮಾಡಿ ಗಜೇಂದ್ರದ
ಬೆಂಗೇಱಿದನಯ್ಯ ಭಾಪು ಜೀಯೆನೆ ಪಲರುಂ ೧೪

ಆಗಳ್ ಚಂದ್ರಲೇಖೆ ಜಿನಭಕ್ತನಂ ನೋಡಿ ಮಹಾತ್ಮನೆಂದಱಿದು ಮನ
ದೊಳೆ ಪೊಗೞ್ದು ಇನ್ನೆನಗೀ ಭವದೊಳೀತನೆ ಗಂಡನುೞಿದ ರಾಜಕುಮಾರರ್
ಮೊಱೆಯಲ್ಲರೆಂದು ಪೂಣ್ದು ರಾಜಮಂದಿರಕ್ಕೆ ಪೋದಳಿತ್ತಳ್ ಪ್ರಮಾಥಿ
ಕುಮಾರನಾನೆಯಂ ಪೂರ್ವಸ್ಥಾನಕ್ಕೊಯ್ದು ಕಟ್ಟಿ ಮಗುೞ್ದು ಬಂದು
ದ್ರೋಣಾಚಾರ್ಯರೊಳ್ ಕೂಡಿರ್ದನಿರ್ಪುದುಂ

ಪುರಮುಂ ಭೂಮಿಾಶನುಂ ದ್ರೋಣನುಮತಿಶಯದಿಂದೀತನಂ ಮೆಚ್ಚಿ ಚಾಮಿಾ
ಕರಶೈಲೇಂದ್ರಕ್ಷಮಂ ವಾಸವವಿಭವನನಂಗಾಭನುದ್ಯದ್ಗುಣಂ ಖೇ
ಚರಶೌರ್ಯಂ ಚಾಪವಿದ್ಯಾಪರಿಣತನದಟಂ ವೀರನುರ್ವೀಪ್ರಸ್ತುತಂ ಭಾ
ಸ್ಕರತೇಜಂ ಸೌಮ್ಯನೆಂದೆಂದಣಮುಱಿಯದಲೋರಂತೆ ಕೊಂಡಾಡುತಿರ್ಪರ್

ಎಂದು ಛಾತ್ರರೆಲ್ಲರುಂ ನೆರೆದು ಗುಜುಗುಜುಗೊಂಡು ಪಲ್ಮೊಱೆಯುತ್ತು ಮಿರ್ಪುದುಮವರ ದುರ್ಜನತ್ವಮಂ ದ್ರೋಣಾಚಾರ್ಯರ್ ಮಾರ್ಕೊಂಡು ತಮ್ಮೊಳಿಂತೆಂದರ್

ಕವಿನಾಥರ್ ಕವಿಪುಂಗವರ್ಗೆ ಬಿರುದರ್ ಬೀರರ್ಗೆ ಭೂಪಾಲಕರ್
ಭುವನೇಶರ್ಗೆ ವಿಟರ್ ವಿಟರ್ಗೆ ಚತುರರ್ ಚಾತುರ್ಯರಪ್ಪರ್ಗೆ ವೈ
ಶ್ಯವರರ್ ವೈಶ್ಯವರರ್ಗೆ ಬಂಟರದಟಂ ಬಂಟರ್ಗೆ ಪುಣ್ಯಾಂಗನಾ
ನಿವಹಂ ಪುಣ್ಯವಧೂಜನಕ್ಕೆ ಸಹಜಂ ಕಾಯ್ವರ್ ಮಹೀಚಕ್ರದೊಳ್ ೧೬

ಜಿನಭಕ್ತಂ ಚಾಪವಿದ್ಯಾಪರಿಣತನಧಿಕಂ ವೀರನತ್ಯಂತಧೀರಂ
ಮನುಮಾರ್ಗಂ ಜೀಯ ಭಾಪೆಂದಿವರ ಮನದ ಮಾತ್ಸರ್ಯಮುಂ ದರ್ಪಮುಂ ಭೋಂ
ಕನೆ ಪೋಪಂತಾಗೆ ನಾನಾಸ್ತ್ರವನದಿನಿಳೆ ಕೈವಾರದಿಂ ಕೂರ್ಮೆಯಿಂ ನೆ
ಟ್ಟನೆ ಬಣ್ಣಿಪ್ಪಂತು ಮಾಳ್ಪೆಂ ಸೆಡೆದು ತಡೆವುದೇಕೆಂದುಪಾಧ್ಯಾಯನಾಗಳ್

ಜಿನಭಕ್ತನುಮಂ ಸಮಸ್ತಶಿಷ್ಯರುಮಂ ಕರೆದು ನಿಮ್ಮ ನಿಮ್ಮ ಧನುರ್ವಿದ್ಯೆಯೊಳಾದ ಕೌಶಲ್ಯಮನೆನಗೆ ತೋಱಲ್ವೇಳ್ಪುದೆಂದು ಪೇಳ್ವುದುಮಂತೆಗೆಯ್ವೆವೆಂದು ಚಾಪೋಪಾಧ್ಯಾಯರ್ಗೆ ಪೊಡೆಮಟ್ಟು ಮಱುದಿವಸಮೊರ್ವರೊರ್ವರ್ಗೆ ಮಿಗಿಲಾಗಿ ನೆಱೆಯೆ ಶೃಂಗಾರಂಗೆಯ್ದು ದ್ರೋಣಾಚಾರ್ಯರಲ್ಲಿಗೆ ಬರ್ಪುದುಂ ಶಿಷ್ಯನಿಕಾಯಂಬೆರಸು ಪುರದ ಬಹಿರುದ್ಯಾನವನಕ್ಕೆ ಬಂದು

ಇನಿಬರುಮೋರಂತಿರೆ ತೆಂ
ಗಿನ ಕಾಯ್ಗಳನಿಳೆಗೆ ಬೀೞಲೀಯದೆ ಧರೆ ಜೀ
ಯೆನೆ ಬಾಣನಿಕರದಿಂ ಮೆ
ಲ್ಲನೆ ತರವೇೞ್ಕೆಂದು ಬೆಸಸೆ ಗುರುವಿನ ಮಾತಂ ೧೮

ಮಿಾಱದೆ ಕುಮಾರರನಿಬರು
ಮಾಱಿಂದಿಕ್ಕೆಂದು ಸೆಡೆದು ನಿಲ್ಲದೆ ಬಾಣಂ
ತೋಱುವೆವಧಿಕರ ಪಟ್ಟಂ
ಪಾಱಿಸುವೆವಮೋಘಮೆಂದು ನಲಿನಲಿದಾಗಳ್ ೧೯

ಪಲವು ಸೂೞೆಚ್ಚು ದುಃಖಂಬಟ್ಟುಮೆಂತುಂ ನೆಲಕ್ಕೆ ಶರನಿಚಯದಿಂ ದ್ರೋಣರಲ್ಲಿಗೆ ತರಲಾಱದೆ ಬಟ್ಟೆವೋಪ ಕುತ್ತಂಗುಳಿಯಂತೆ ಸೇದೆಗೆಟ್ಟು, ಜವ್ವನೆಗಾಳ್ದನಾದ ಮುದುಪನಂತೆ ಪಲ್ಗಡಿಗಿಱಿದು, ನಾಂದೆರೆಯ ಪೆಟ್ಟೆಯಂತೆ ಕರಗಿ, ಪಲರ್ಗೆ ಲಜ್ಜಿಸಿ ದ್ರೋಣಾಚಾರ್ಯರ ಮೊಗಮಂ ನೋಡಲಱಿಯದೆ ತೋರ ತೆನೆಯಂತೆ ತಲೆಯಂ ಬಾಗಿರ್ಪುದುಂ, ದ್ರೋಣಾಚಾರ್ಯಂ ತನ್ನೊಳಿಂತೆಂದಂ

ಕುನರರ್ ಸತ್ಪುರುಷರ್ಗೆ ಕುತ್ಸಿತಗುಣರ್ ಮಾನ್ಯರ್ಗೆ ದುಷ್ಪಾಪಿಗಳ್
ಜಿನಧರ್ಮೋದಯರಪ್ಪವರ್ಗೆ ಬಡವರ್ ಧನ್ಯರ್ಗೆ ಹೀನರ್ ಜಗ
ಜ್ಜನವಂದ್ಯರ್ಗೆ ಕುರೂಪಿಗಳ್ ಬಿಡದೆ ಸೌರೂಪ್ಯರ್ಗೆ ದುರ್ಭಾವದಿಂ
ಮುನಿದು ಕಾಯ್ದುಮುೞಲ್ದುಮೇವರವರಿಂ ತಾನಪ್ಪುದೇಂ ಪೋಪುದೇ ೨೦

ಎಂದು ಮನದೊಳ್ ನಕ್ಕು ಜಿನಭಕ್ತನಂ ಕರೆದು ನೀಂ ನಾಳಿಕೇರಫಲಂಗಳ ನಿಲ್ಲಿಗೆ ನೆಲನಂ ಮುಟ್ಟಲೀಯದಂತರಿಕ್ಷದೊಳ್ ತಡೆಯದೆ ತರ್ಪುದೆಂಬುದು ಮಂತೆಗೆಯ್ವೆನೆಂದು ಪೊಡೆಮಟ್ಟು, ಪರಮಜಿನ ಚರಣಯುಗಮಂ ಸ್ಮರಿಯಿಸಿ, ಬಿಲ್ಲಂ ತಳೆದುಕೊಂಡು ಜೇವೊಡೆಗೆಯ್ದು ಶರಸಂಧಾನಮೆಂಬಲಗಿಂ ತೆಂಗಿನ ಕಾಯ್ಗಳಂ ಕೊಯ್ದು ನೆರೆದ ನೆರವಿ ಮಝು ಭಾಪೆಂದು ಝೇಂಕರಿಸೆ

ದ್ರೋಣಾಚಾರ್ಯರಲ್ಲಿಗೆ ನೆಲನಂ ಮುಟ್ಟಲೀಯದೆ ಬಾಣನಿಚಯದಿಂ ತರ್ಪುದುಂ ನಾಡುಂ ಬೀಡುಂ ಜಿನಭಕ್ತನಂ ಬಿಲ್ಲ ಬಲ್ಮೆಗೆ ಸಂತೋಷಂಬಟ್ಟು ಪೊಗೞುತ್ತುಮಿರ್ದರಿರ್ಪುದುಂ ದ್ರೋಣಾಚಾರ್ಯರ್ ಛಾತ್ರನಿಕುರಂಬಂ ಬೆರಸು ಮನೆಗೆವಂದು ಸುಖದಿಂದಿರ್ಪುದುಂ ಛಾತ್ರರೆಲ್ಲಂ ಮತ್ತೆ ಪುರುಡಿಸಿ

ಇವನೊಳ್ ಮುಂ ಕೆಳೆಗೊಂಡು ಕೂಡಿ ಬಱಿಕಂ ಕೂರ್ತಂತೆಗೆಯ್ದಾತನಂ
ಜವನಂತಪ್ಪ ಮದಾಂಧಸಿಂಧುರದ ಮುಂದಣ್ಗೆಯ್ದು ನೀನೀ ಗಜೇಂ
ದ್ರಮನೋರಂತಿರೆ ವೀರದಿಂದಡಸಿ ಪೊಯ್ಯೆಂದಾರ್ದು ಪಿಂಗಿರ್ದು ನೋ
ಡುವಮಿಾ ದೂರ್ತನನಾ ಗಜಂ ತುಳಿವುದಕ್ಕೆ ಪಚ್ಚದೆ ಮಂತಣಂ ೨೧

ಎಂದು ತಮ್ಮನಿಬರುಂ ಸಮಕಟ್ಟಿ ಪುಸಿಗೂರ್ಮೆಯಿಂ ಜಿನಭಕ್ತನಂ ನಂಬಿಸಿ ಕೆಲವಾನುಂ ದಿವಸಂ ಪೋಗಲಿತ್ತೊಂದು ದಿವಸಂ ಪೋಱವೊಟಲೊಳಾಡುತ್ತುಮಿರ್ಪುದುಂ ಅವರ ಬಗೆಗೊಡಂಬಟ್ಟಂತೆ ಮದದಿಂ ಕಣ್ಗಾಣದವರ ಬಯಸುವ ಮದಗಜಮೆ ಮೆಯ್ಯಱಿಯದೆ ಕಂಬಮಂ ಮುಱಿದುಕೊಂಡು ಗಾಳಿಯಂತೆ ವೇಗಿಯುಂ ಸಿಡಿಲಂತೆ ನಿಶ್ಶಂಕನುಂ, ತಣಿಯುಂಡ ಪಾರ್ವನಂತಾಕಾಶದೃಷ್ಟಿಯುಂ ಕಿರಾತನಂತೆ ಕ್ರೂರನುಮಾಗಿರ್ಪ ಸೊಕ್ಕಿದಾನೆಯಂ ಕಂಡು ತನ್ನ ಕೆಲದೊಳಿರ್ದ ತಿರಿದುಂಬ ದುಲ್ಲಟೆಯಂ ಕೊಂಡು ಗಜಮನಜಮನಿಡುವಂತೆ ಭಯಮಿಲ್ಲದಿಡುವುದುಂ ಕರಿ ನರಿಯಂತೆ ಕೇಱಿಟ್ಟಾಱಟಭಯದಿಂದಿರಾಗಿ ಬರಲಣ್ಮದೆ ಮಗುೞ್ದು ತನ್ನ ನೆಲೆಗೆ ಪೋಯಿತ್ತಲ್ ಜಿನಭಕ್ತಂ ಹರಿಕಾಂತನಂತೆ ಮುಯ್ಪಂ ನೋಡದೆ ಕುಪ್ಪಕುಱಿಯಾಡುವ ಮಕ್ಕಳಂತೆ ತನ್ನಂ ಪೊಗೞ್ದುಕೊಳ್ಳದೆ ನವಿಲಂತೆ ತನ್ನಾಟಕ್ಕೆ ತಾನೆ ನಲಿಯದೆ ಸಮುದ್ರದಂತೆ ಗಂಭೀರನಾಗಿರ್ಪುದುಂ ದ್ರೋಣನ ಚಟ್ಟರೆಲ್ಲರುಂ ಜಿನಭಕ್ತನ ಪುಣ್ಯದ ಮಹಿಮೆಗಂ ಮನದ ಧೈರ್ಯಕ್ಕಂ ಚೋದ್ಯಂಬಟ್ಟು ಮನದ ಕೋಪಮಂ ಪತ್ತುವಿಟ್ಟು ಸಮ್ಯಕ್ತ್ವಚೂಡಾಮಣಿಗೆ ಮನದೊಳ್ ಪೊಡೆಮಟ್ಟು ದ್ರೋಣಾಚಾರ್ಯರ್ಗೆ ತಮ್ಮ ದುರ್ಭಾವಮುಮಂ ವಾತ್ಸಲ್ಯ ರತ್ನಾಕರನ ಭಾಗ್ಯದ ಪೆಂಪುಮಂ ಪೇೞ್ವುದುಂ ದ್ರೋಣನಿಂತೆಂದಂ :

ಪರಮಾಯುಂ ಶ್ರೀಯ ಪೆಂಪುಂ ವನಿತೆಯರೊಲವುಂ ಕೀರ್ತಿಯುಂ
ಧೈರ್ಯಮುಂ ಸುಂ
ದರರೂಪುಂ ವೀರಮುಂ ಭೋಗಮುಮೆಸೆವ ಮಹಾವೀರ್ಯಮುಂ
ಚಾಗಮುಂ ವಿ
ಸ್ತರದಿಂ ಸದ್ಬುದ್ಧಿಯುಂ ತೇಜಮುಮುಳವು ಮಹೈಶ್ವರ್ಯಮುಂ ದಿವ್ಯಸೌಖ್ಯೋ
ತ್ಕರಮುಂ ಸದ್ದಾನದಿಂದಂ ನರರ್ಗೆ ಸಮನಿಕುಂ ಸಂತತೋತ್ಸಾಹದಿಂದಂ ೨೨

ಹೀನಾಯುಂ ಕಷ್ಟರೂಪುಂ ಬಡತನದೊದವುಂ ಕುತ್ತಮುಂ ಪೀಡೆಯುಂ ವಿ
ಜ್ಞಾನಂಗೆಟ್ಟಿರ್ಪುದುಂ ಕೊಟ್ಟಿಡೆಯದೆ ಮಱುಗುತ್ತಿರ್ಪುದುಂ ಲೋಗರಿಂದೊಂ
ದಾನಂದಂಗೆಟ್ಟು ಚಿಂತಿಪ್ಪುದುಮನವರತಂ ಪೆಂಡರಿಂ ಮಕ್ಕಳಿಂ ಸ
ನ್ಮಾನಂಗೆಟ್ಟಿರ್ಪುದುಂ ಕೂಡುಗುಮೊದವಿದ ಪೂರ್ವಾರ್ಜಿತಾಘೌಘದಿಂದಂ ೨೩

ನೆವನೆವದಿಂದೆ ಧಾರಿಣಿ ಸುವಸ್ತು ಲತಾಲಲಿತಾಂಗಿಯರ್ ಮಹೋ
ತ್ಸವಮತಿರಾಗಮುಣ್ಮು ಮಹಿಮಾಸ್ಪದಮುನ್ನತಿ ಪೆಂಪು ಸೌಖ್ಯಮಿ
ಕ್ಕವಿರಳ ಬುದ್ಧಿ ವೀರ್ಯಮಭಿವೃದ್ಧಿ ಮತಂಗಜಯಂ ಹಯಾಳಿ ಸಂ
ಭವಿಸುಗು ಮುನ್ನುಪಾರ್ಜಿಸಿದ ಪುಣ್ಯದಿನಣ್ಣ ಮಹೀತಳಾಗ್ರದೊಳ್ ೨೪

ಕರ್ಮಮುಳ್ಳಂಗೆ ನೇಣಂ ಪಿಡಿದೊಡಂ ಪಾವಾಗಿ ತಿಂಗುಂ ಪೊನ್ನಂ ಪಿಡಿ
ದೊಡಂ ಮಣ್ಣಾಗಿರ್ಕುಂ ಆಯುಮುಳ್ಳೊಡಂ ರುಜಾಧಿಕನಾಗಿ ನವೆಗುಂ
ಪಲವುಂ ಶಸ್ತ್ರಶಾಸ್ತ್ರವಿದ್ಯೆಗಳಂ ಕಲ್ತೊಡಂ ಫಲಮಿಾಯಲರಿಯವೆಂದು
ಮಿಥ್ಯೆಯಂ ಪತ್ತುವಿಟ್ಟುಳ್ಳುದನುಳ್ಳಂತೆ ನುಡಿವುದು

ಧರ್ಮಮೆ ತಂದೆ ಧರ್ಮಮೆ ಮನೋಹರಿ ಧರ್ಮಮೆ ಬಂಧುವರ್ಗಮೊ
ಳ್ಧರ್ಮಮೆ ಸೋದರಂ ನೆಗಟ್ದ ಧರ್ಮಮೆ ಸತ್ಸಖಿ ದಿವ್ಯಮಪ್ಪ ಸ
ದ್ಧರ್ಮಮೆ ಸಜ್ಜನುತ್ತಮದ ಧರ್ಮಮೆ ಭಾವಿಪೊಡಜ್ಜನೆಲ್ಲಿಯುಂ
ಧರ್ಮಮೆ ಮುಖ್ಯಮೆಂದು ಪರಿಭಾವಿಸುತಿರ್ಕೆ ಸುಖಾರ್ಥಿಯಪ್ಪವಂ ೨೫

ಎಂದಾ ದ್ರೋಣಾಚಾರ್ಯರ್ ಛಾತ್ರರ್ಗೆ ಧರ್ಮದ ಮಹಾಗುಣಮುಮಂ ಪಾಪದ ಮಹಾಕಷ್ಟಮುಮಂ ಲೇಸಾಗೆ ತತ್ಸ್ವರೂಪದಿಂದಿಷ್ಟಂ ಧರ್ಮೇಣ ಯೋಜಯೇತ್ ಎಂಬ ನೀತಿಶಾಸ್ತ್ರದೋಜೆಯಂ ತೋಱಿ ಪೇೞ್ವುದುಮವರ್ ತಂತಮ್ಮ ಮನದ ಕೋಪಮನುಡುಗಿ ಜಿನಭಕ್ತನಂ ಕ್ಷಮೆಗೊಂಡು ಪರಮ ಮಿತ್ರರಾಗಿ ದ್ರೋಣಾಚಾರ್ಯರ್ಗೆ ಪರಮಭಕ್ತರಾಗಿ ವಿದ್ಯಾಭ್ಯಾಸಂ ಗೆಯ್ಯುತ್ತುಂ ಸುಖಸಂಕಥಾವಿನೋದದಿಂದಿರ್ಪುದುಮೊಂದುದಿವಸಂ

ಆವನಾದೊಡಮಕ್ಕೆ ಚಂದ್ರಕವೇಧಮಂ ಮನದರ್ತಿಯಿಂ
ದೋವದೆಚ್ಚು ಜಗಕ್ಕೆ ಚಾಪದ ಬಲ್ಮೆಯಂ ಮೆಱೆವಂಗೆ ಲ
ಕ್ಷ್ಮೀವಿಳಾಸೆಯನುನ್ನತಿಕ್ಕೆಯ ಚಂದ್ರಲೇಖೆಯನರ್ತಿಯಿಂ
ದೀವೆನೆಂದು ಮಹೀಶ್ವರಂ ತೊಡಳಿಲ್ಲದಾ ಪುರಮಧ್ಯದೊಳ್ ೨೬

ಗೋಸಣೆಗೊಳ್ವುದುಂ ಪ್ರಮಾಥಿಕುಮಾರಂ ಭಿಕ್ಷಾನ್ನಮಂ ನದೀತೀರ ದೊಳುಣಲೆಂದು ಪೋಗುತ್ತುಮಿರ್ದು ಗೋಸಣೆಯಂ ಕೇಳ್ದು ತಡವಿಲ್ಲದೆ ಪರಿತಂದು ಗೋಸಣೆಯಂ ಪಿಡಿವುದುಮವರ್ ಜಿನಭಕ್ತಂಬೆರಸು ಸಿಂಹಸೇನ ಮಹಾರಾಜನಲ್ಲಿಗೆವಂದು ಗೋಸಣೆಯನೀತಂ ಪಿಡಿದನೆಂದು ತೋಱಿ ಬಿನ್ನ ಪಂಗೆಯ್ವುದುಂ ಅರಸಂ ಪ್ರಮಾಥಿಕುಮಾರನಂ ಕಂಡು

ಇವನೀ ಚಂದ್ರಕವೇಧಮ
ನವಯವದಿಂದೆಸೆಗುಮಲ್ಲಿ ತೊಡಳಿಲ್ಲ ಮಹೀ
ಧವತನಯನಕ್ಕುಮಲ್ಲದೊ
ಡಿವಗಿಂತೀ ರೂಪುಶೌರ್ಯಮಿಂತೊಪ್ಪುಗುಮೇ ೨೭

ಎಂದು ಸಿಂಹಸೇನಮಹಾರಾಜಂ ವಾತ್ಸಲ್ಯರತ್ನಾಕರನ ಮೂರ್ತಿಯಂ ನೋಡಿ ನಚ್ಚಿಮೆಚ್ಚಿ ಮನದೊಳ್ ಪೊಗೞ್ದು ಕಯ್ಯಂ ಪಿಡಿದೊಡಗೊಂಡು ಪೋಗಿ ಮಜ್ಜನಭೋಜನ ತಾಂಬೂಲವಸ್ತ್ರಾಭರಣಾದಿಗಳಂ ಸಂತೋಷಂ ಬಡಿಸಿ ಮಱುದಿವಸಂ ದ್ರೋಣಾಚಾರ್ಯರ್ಮೊದಲಾಗೆ ಚಾಪವಿದ್ಯಾಪರಿಣ

ತರುಮಂ ವಿದ್ವಜ್ಜನಮುಮಂ ಬರಿಸಿ ಚಂದ್ರಕವೇಧ್ಯಮನೀತನೆಚ್ಚಪಂ ಪರೀಕ್ಷಿಸಿಮೆಂಬುದುಮವರಂತೆ ಗೆಯ್ವೆವೆಂದು ನೋಡುತ್ತಿರ್ಪುದುಂ

ಸೆರಗಂ ಪಾರದೆ ಬೆಚ್ಚದಳ್ಕದೆ ಭಯಂಗೊಂಡೋಡದಲ್ಲಾಡದೊ
ರ್ವರನಾಶ್ರಯ್ಸದೆ ದೃಷ್ಟಿಮುಷ್ಟಿ ಶರಸಂಧಾನಂಗಳಿಂ ಭೂಪನ
ಚ್ಚರಿವಟ್ಟದ್ಭುತಮೆಂದು ತೂಗೆ ತಲೆಯಂ ದ್ರೋಣಂ ಮನಂಗೊಂಡು ಸು
ಸ್ವರದಿಂ ಬಣ್ಣಿಸೆ ನೋಟಕರ್ ಪೊಗೞೆ ಭಾಪ್ಪೆಯೆಂದು ಸಂತೋಷದಿಂ ೨೮

ಚಂದ್ರವೇಧಮನಿಸುವುದುಂ ಸಿಂಹಸೇನಮಹಾರಾಜಂ ಮಹಾವಿಭೂತಿಯಿಂ ದರ್ಧರಾಜ್ಯಮುಮಂ ಪ್ರತಿಜ್ಞೆಯಿರ್ದ ಚಂದ್ರಲೇಖೆಯುಮಂ ಕುಡುವುದುಂ ಕೈಕೊಂಡು ಪ್ರಮಾಥಿಕುಮಾರಂ ಪೂರ್ವೋಪಾರ್ಜಿತ ಪುಣ್ಯದ ಫಲದಿಂ ಚಂದ್ರಲೇಖೆಯೊಳ್ ಕೂಡಿ ಮಾಳವಾರ್ಧಾಧೀಶ್ವರನಾಗಿ ಸುಖದಿಂ ರಾಜ್ಯಂಗೆಯ್ಯುತ್ತುಮಿರ್ಪುದುಂ

ಅರಸಂಗೊರ್ವಂ ಬಂದ
ಚ್ಚರಿ ದೇವ ಮಹಾಪ್ರತಾಪದಿಂ ಕೌಶಾಂಬೀ
ಪುರಮಂ ಪರಮಂಡಳಿಕರ್
ನೆರೆದು ಭರಂಗೆಯ್ದು ಮುತ್ತಿ ಕಾದಿಪರಿನ್ನುಂ ೨೯

ದಂತಬಲನೃಪತಿ ಕೋಂಟೆಯ
ನೆಂತುಂ ಕೊಳಲೀಯದೊಳಗೆ ಪೆರ್ಬಲದಿಂದಂ
ಭ್ರಾಂತಿಂ ಕಾದುತುಮಿರ್ದಪ
ನಿಂತಲಸದೆ ಪತ್ತಿ ಕಾದುವನ್ನರನಱಿಯೆಂ ೩೦

ಎಂಬ ಮಾತನರಸನ ಕೆಲದೊಳಿರ್ದ ಪ್ರಮಾಥಿಕುಮಾರಂ ಕೇಳ್ದು ಸಿಂಹದಂತೆ ಗರ್ಜಿಸಿ ಮುನಿದು ಸಿಂಹಸೇನಮಹಾರಾಜಂಗಱಿಪಿದೊಡೆ ಪೋಗಲೀಯನೆಂದು ತತ್ಪುರೋದ್ಯಾನನಿವಾಸಿಯಪ್ಪ ಧರ್ಮೋಜ್ಜ್ವಳನೆಂಬ ಯಕ್ಷಂ

ಕೊಟ್ಟದೃಶ್ಯಾಂಜನಪ್ರಯೋಗದಿಂ ನಡುವಿರುಳಪ್ಪಾಗಳ್ ತಾನುಂ ನಲ್ಲಳುಂ ಸ್ಯಂದನಾರೂಢರಾಗಿ ಪುರದಿಂ ಪೊಱಮಟ್ಟು, ಭೀಮವನವೆಂಬ ಪೇರಡವಿಯೊಳಗೆ ಪೊಕ್ಕು ತನಗಿದಿರಾಗಿ ಗಜಱಿ ಗರ್ಜಿಸಿ ಪಾಯ್ತಂದ ಸಿಂಹಮುಂ ಚಕ್ರಾಘಾತದಿಂ ಶಾರ್ದೂಲನಂ ಶರವೇಧದಿಂ ಮದಾಂಧಸಿಂಧುರಮುಂ ಶರಸಂಧಾನದಿಂ ದೃಷ್ಟಿವಿಷಮಪ್ಪ ನಾಗರಂ ಧ್ವನಿಯೆಂಬ ಶರದಿಂದೋಡಿಸಿ ವಲ್ಲಭೆಗೆ ತನ್ನ ಬಿಲ್ಲ ಬಲ್ಮೆಯುಂ ತೋಱುತ್ತುಂ ಮೆಲ್ಲಮೆಲ್ಲನೆ ಬರುತ್ತಿರ್ಪುದುಂ

ಆ ನಟ್ಟಡವಿಯೊಳೊರ್ವಂ
ಹೀನಗುಣಂ ಪಾಪಯುಕ್ತನವಿಚಾರಿ ಸದಾ
ಸ್ತೇನವಿನೋದಂ ಚೋರಜ
ನಾನಂದಂ ಭೂಮಿಪಾಲನಪಗತಶೌಚಂ ೩೧

ಸುವೇಗನೆಂಬಂ ದಾಯಾದರ್ ಬಲ್ಲಿದರಾಗಿ ರಾಜ್ಯಮಂ ಕೊಂಡೊಡೆ ತದ್ವನಮಂ ಪೊಕ್ಕು ಕಳ್ಳರೆಲ್ಲರುಮಂ ಕೂಡಿಕೊಂಡು

ದ್ರೋಣಾಚಾರ್ಯರ ರೂಪಂ
ಮೇಣದೆ ಮಾಡಿಟ್ಟು ಪಲವು ಪುಷ್ಪಾವಳಿಯಿಂ
ಮಾಣದೆ ಪೂಜಿಸಿ ನೆನೆದ
ಕ್ಷೋಣನ ಪದಪಂಕಜಂಗಳಂ ಚೋರೇಶಂ ೩೨

ನಿಚ್ಚಲುಂ ಬಿಲ್ಲಂ ಶ್ರಮಂಗೆಯ್ಯುತ್ತಿರ್ಪುದುಂ

ಕರಮಲ್ಲದೆ ಕೋದಂಡದೊ
ಳೆರಡಿಲ್ಲದೆ ಫಲ್ಗುಣಂಗಮೀತನೆ ಜಗದೊಳ್
ಪರಿಣತನೆನಿಸಿದನದಱಿಂ
ಗುರುಪದಭಕ್ತಂಗೆ ಸಾಧ್ಯಮಲ್ಲದುದುಂಟೇ ೩೩

ಅಂತು, ಬಿಲ್ಲೊಳತಿಜಾಣನುಂ ಪ್ರವೀಣನುಮೆನಿಸಿದ ಸುವೇಗಂ ಪ್ರಮಾಥಿ ಮಹಾರಾಜನ ಕೆಲದೊಳಿರ್ದ ಚಂದ್ರಲೇಖೆಯಂ ಕಂಡು ಕಣ್ಬೇಟಂಗೊಂಡು, ಜ್ವರಮಾದರಂತೆ ದಾಹದಿಂ ಮೆತ್ತಿ, ಕಾಯ್ದ ಕಬ್ಬುನದಂತೆ ಮೆಯ್‌ಕಾಯ್ದು, ಗಾಳಿ ಮುಟ್ಟಿದರಲೆಯಂತೆ ನಡುಗಿ, ಗ್ರಹಂಪಿಡಿದ ಮನುಷ್ಯನಂತೆ ಪರವಶ ನಾಗಿ, ಬೇಸಗೆಯೊಳ್ ಪಯಣಂಬೋಪನಂತೆ ಬೆಮರ್ತು, ಬಿಸಿಲೊಳಿರ್ದ ಶಿಶುವಿನಂತೆ ಕೊಱಗಿ, ಬೇತಾಳನಂ ಕಂಡ ಪಂದೆಯಂತೆ ಮೂರ್ಛೆವೋಗಿ, ಶೀತಳಮಪ್ಪೆಡೆಯೊಳ್ ಪಡಲುಂ ಗಾಳಿಗೆ ಮೆಯ್ಯನೊಡ್ಡಲುಂ ಚಂದನ ಕರ್ಪುರಂಗಳಂ ಮೇಲೊಟ್ಟಿಕೊಳಲುಂ ತಣ್ಣನಿರ್ಪ ನೀರಂ ಪೊಕ್ಕಿರಲುಂ ಮೇಲೆಱಚಿಕೊಳಲುಂ ಮನಮಾಗಿ ವಿರಹಾನಳದಿಂದಿರಲಾಱದೆ

ಮನಸಿಜನಾರಡಿಕಾಱಂ
ಮುನಿಸಿಂದೀ ಕಾಂತೆಯೆಂಬ ಕೂರಲಗಿಂ ಗಿ
ಱನೆ ತೂಳ್ದು ಬೇಗಮಿಱಿದಪ
ನೆನಗಿಂ ಸಾವಲ್ಲದಱಿವ ತೆಱನಂ ಕಾಣೆಂ ೩೪

ಬಿರುದನೆನೆಂಬ ಮಾತು ಪೆಱಪಿಂಗಿದುದೊಳ್ಪಟನೆಂಬ ಮಾತು ನಿ
ಬ್ಬರಮುಡುಗಿತ್ತು ವೀರನೆನಿಪಗ್ಗದ ಮಾತದು ದೂರಮಾಯ್ತು ನಿ
ಷ್ಠುರನಿವನೆಂಬ ಮಾತು ತೊಱೆವಾದುದು ಪೆಂಪಿನ ಮಾತು ಕೆಟ್ಟುದೀ
ತರುಣಿಯ ಕಾಣ್ಕೆಯೊಳ್ ಭಯಮು ಮೋಹಮುಮಾದಪುದೆತ್ತವೋಪೆನೋ

ಸುರರಾಜಂ ಬಂದು ಮಾರ್ಕೊಂಡೊಡಮಹಿಪತಿ ಬಂದಡ್ಡ
ಮಾಗಿರ್ದೊಡಂ ಭಾ
ಸ್ಕರನಣ್ಮಿಂ ಪೊಂಗಿ ಬಂದಾಂತೊಡಮವನಿಯೊಳುಳ್ಳ ಕ್ಷಿತೀನಾಥರೆಲ್ಲಂ
ಭರದಿಂ ಕೈಕೊಂಡು ವೀರಂಬೆರಸು ಪೊಣರ್ದೊಡಂ ಮಾಣೆನೀ ಕಾಂತೆಯಂ ವಿ
ಸ್ತರದಿಂ ಕೈಕೊಂಡು ಕೊಂದೀತನನವಯವದಿಂ ಭೋಗಿಪೆಂ ರಾಗದಿಂದಂ ೩೬

ಎಂದು ಮನದೊಳ್ ಪ್ರಮಾಥಿಕುಮಾರನಂ ಕೊಲ್ವ ಕಜ್ಜಮನೆತ್ತಿಕೊಂಡು

ಪ್ರತಾಪಪರನಪ್ಪುದಱಿಂ ಪ್ರಮಾಥಿಕುಮಾರನೊರ್ವನೆಂದೇಳಿಸಿ ತಾನೆತ್ತ
ಲೊಲ್ಲದೆ ತನ್ನ ನಾಯಕನೊರ್ವನಂ ಕರೆದು ಬಟ್ಟೆವೋಪ ಬಡವನಂ ಕೊಂದು
ಕೋಮಲಲತಾಲಲಿತಗಾತ್ರೆಯುಂ ವನಜನೇತ್ರೆಯುಮಪ್ಪಾತನ ಪೆಂಡತಿಯು
ಮನಿಲ್ಲಿಗೆ ತದ್ರಥಂಬೆರಸು ತರ್ಪುದೆಂದು ಬೆಸನಂ ಪೇೞ್ವುದುಮವನಂತೆಗೆಯ್ವೆ
ನೆಂದು ಬೆಸನಂ ಕೈಕೊಂಡು ಪೊಡೆಮಟ್ಟು ತನ್ನ ನೆಲೆಗೆವಂದು ತನ್ನ ಬಲ
ಮೆಲ್ಲಮಂ ಕೂಡಿಕೊಂಡು ಪ್ರಮಾಥಿಕುಮಾರನನೈದಿತಾಗಿ

ನಿನಗೇಕೀ ತರಳಾಯತಾಕ್ಷಿ ನಿನಗೇಕೀ ಸೌಂದರಾಕಾರೆ ಕಾ
ಮಿನಿಯಂ ಕಾಯದೆ ಬಿಟ್ಟುಪೋಗು ಪದಪಿಂದೀ ಕಾಂತೆಯಂ ಬಿಟ್ಟು ಭೋಂ
ಕನೆ ನೀಂ ಪೋಗದೆ ನಿಂದೆಯಪ್ಪೊಡಱಿವಕ್ಕೆಂದಾರ್ದು ಬಿಲ್ಲಾಳ್ಕ್ರಹಾ
ಮುನಿಸಿಂದಂ ಶರವೃಷ್ಟಿಯಂ ಸುರಿವುದುಂ ವಾತ್ಸಲ್ಯರತ್ನಾಕರಂ ೩೭

ಜಿನಪಾದಾಂಬುಜಯುಗ್ಮಮಂ ನೆನೆದು ಬಿಲ್ಲಂ ಕೊಂಡು ಕೈಗಾಯದೊ
ರ್ವನೆ ಬಂದೊಡ್ಡಿದ ವೈರಿಯಾಳನದಟಂ ಬಾಣಾಳಿಯಿಂದಿಕ್ಕಿ ಮೆ
ಲ್ಲನೆ ವೀರಂ ನಗುತುಂ ಮನೋರಮೆಗೆ ತೋಱುತ್ತಿರ್ಪಿನಂ ಭೃತ್ಯನೊ
ರ್ವನಮೋಘಾಸ್ತ್ರನ ಬಾಣದಿಂ ಬರ್ದುಕಿ ಭೀತಾತ್ಮಂ ಮಹಾಭೀತಿಯಿಂ ೩೮

ಬಂದು ಸುವೇಗಂಗೆ ನಾಯಕರ ಭೃತ್ಯರ ಸಾವುಮಂ ಪ್ರಮಾಥಿಕುಮಾರನ
ವೀರಮುಮಂ ಬಿನ್ನಪಂಗೆಯ್ವುದುಂ ಮುನಿದು ಕೋಪಾವೇಶದಿಂ ನಾಯಕ
ರೆಲ್ಲರಂ ಕರೆದು ಬೆಟ್ಟಮಂ ಗುಂಗುರು ಕಾಡಿತ್ತೆಂಬ ಮಾತಿನಂತೆ ಬಟ್ಟೆವೋಪ
ತಿರಿಕನೊರ್ವನೆನ್ನ ನಾಯಕನಂ ಕೊಂದು ಬಲ್ಲಮೆಲ್ಲಮನಿಕ್ಕಿ ವೀರಕ್ಕೆ
ತೊನೆದುದ್ಧತಂ ಮೆಟ್ಟಿ ಗಂಡಿಂಗಾನೆ ಪಿರಿಯನೆಂದಿರ್ದಪಂ ಗಡಮವನನೀಗಳೆ
ನೀವಿನಿಬರುಂ ಪೋಗಿ ಕಾದಿ ದರ್ಪಮಂ ಕಿಡಿಸಿ ಕೊಲಲ್ವೇಡ ಪಿಡಿದು ಕೋಡಗ
ಗಟ್ಟುಗಟ್ಟಿಕೊಂಡೆನ್ನಲ್ಲಿಗೆ ತನ್ನಿಮಾತನನೆನ್ನ ಕಣ್ತಣಿವಿನಮಾನೆ ನಾನಾ
ವಿಧದಿಂ ಕೊಂದು ದೆಸೆವಲಿಗೆಯ್ದು ಬಱಿಕಮಾತನ ಪೆಂಡತಿಯನರಸಿ
ಮಾಡಿಕೊಳ್ವೆನೆಂದು ಬೆಸಸುವುದುಂ ಪುಳಿಂದಸಾಧನಮುಂತೆತ್ತಿ ಬಂದು
ಪ್ರಮಾಥಿಕುಮಾರನ ರಥಮಂ ಮೂವಳಸಾಗೆ ಮುತ್ತಿಕೊಂಡು ಪೋಗ

ದಡ್ಡಂಬಿನ ಪಾಱುಂಬಳೆಯ ಕಕ್ಕಡೆಯ ಬಲ್ಸರಿಯುಂ ಸುರಿಯೆ ಅದು ಪೆರ್ವಲ ಮಾನೊರ್ವನೆ ಕದನಂ ಪಿರಿದಕ್ಕುಮೆಂದು ಮನದೊಳ್ ಬೆಚ್ಚಲ್ಲದೆ ಕೋಪಮಿಲ್ಲದೊಯ್ಯನೆ ಲೀಲೆಯಿಂದನಿತುಮಂ ಬಿಲ್ಬಲ್ಮೆಯಿಂ ಖಂಡಿಸುವುದುಂ, ಚಂದ್ರಲೇಖೆ ನಕ್ಕು ದೇವ ನಿನಗಿವರ್ ದೊರೆಯಲ್ಲ, ಇವರ ನಿನ್ನ ಪ್ರತಾಪಮನಾರಯ್ವೆಂದು ತೋಳನ ಕುಱಿಯ ಗರುಡನ ಪಾವಿನ ಬಲಾಬಲಂಗಳಂ ಪೋಲ್ಕುಮಿವರ್ ತಮ್ಮ ಬಂದೆಗ್ಗಿನೊಳ್ ಸಿಗ್ಗಾಗಿ ತಮ್ಮಾಳ್ದನ ಮೊಗಮಂ ಮುಗುಳ್ದು ಪೋಗಿ ನೋಡಲ್ ನಾಣ್ಚಿ ದೇವರ ಬಾಣಾವಳಿಯೊಳ್ ಬಿರ್ದಕ್ಕಾಱಲ್ ಬಗೆದಪರ್. ಗೆಲ್ಲದ ಕಾಳೆಗದಿಂದೋಟಮೆ ಲೇಸೆಂಬುದದು ಕಾರಣದಿಂದಿನಿಬರುಮಂ ಬಱಿದೆ ಕೊಂದು ಪಾಪಮಂ ಮಾಡಿಕೊಳ್ಳದೆ ನಿದ್ರಾಬಾಣದಿಂದಿನಿಬರ್ಗಂ ನಿದ್ರೆಯುಂ ಮಾಡಿ ಸುಖದಿಂ ಪೋಪಮೆಂಬುದಂ ಪ್ರಮಾಥಿಕುಮಾರಂ ನಲ್ಲಳ ಮಾತಿಂಗಂ ಮನದ ಕಾರುಣ್ಯಬುದ್ಧಿಗಂ ಮೆಚ್ಚಿ ಶಕ್ತಿಯನುಳ್ಳ ಬಾಣಮೊಂದನೆ ತೆಗೆದಾರ್ದು ನಿಂದಿಸುವುದಂ ರಿಪುಸೇನೆ ಬೞಲ್ದು ನಿದ್ರೆಯಿಂ ಬಡಿಕೊಂಡ ನೆಲ್ಲಿಯಂತೆ ನೆಲಕ್ಕೆ ಬೀೞ್ವುದುಂ ಅವರಪಜಯಮುಮಂ ಸುವೇಗಂ ಕೇಳ್ದುಕ್ಕುಡಿಸೆ, ನೆಲನಂ ಪೊಯ್ದು ಮೆಯ್ಯಱಿಯದೆ ತನ್ನ ಮುಂದಣ ನರಕಗಮನಮಂ ತೋರ್ಪಂತೆ ಕಂಪಿಸುವ ಮೆಯ್ಯುಂ ಕೆಚ್ಚನಾದ ಕಣ್ಣುಂ ಬೆಚ್ಚನಾದ ತನುವುಂ ಉರಿಪೆರ್ದೆಯುಂ ಬೆರಸಗುರ್ವಾಗೆ ಮುಸಗಿದ ಸಿಂಹದಂತಿರ್ದ ಸುವೇಗಂಗೆ ಪ್ರಧಾನರುಂ ಬುದ್ಧಿವಂತರುಂ ಚಾತುರ್ಯಮುಪ್ಪವರುಂ ದೀರ್ಘಶರೀರಿಗಳುಂ ಕಾರ್ಯವೇದಿಗಳಪ್ಪವರುಮಿಂತೆಂದು ಪೇೞ್ದರ್

ಪರವೆಣ್ಣೊಳಿದಳೆಂದು ಕೂರ್ತು ಸೆಱೆಯಿಟ್ಟಾರೆಂದೊಡಂ ಮಾಣದೊ
ರ್ವರುಮಂ ಕಾಣಿಕೆಗೊಳ್ಳದುಕ್ಕಿ ಬಲಮಂ ನಚ್ಚಿರ್ದ ಲಂಕೇಶನಾ
ದೊರೆಯುಂ ನಾಯುವೊಲಣ್ಮುಗೆಟ್ಟು ಮಡಿದಂ ತಾನೆಂದೊಡಾಡಾಗಿ ಸಾ
ಯರೆ ದೂರಿಂಗೆಡೆಯಾಗಿ ಬೇಯರೆ ಪರಸ್ತ್ರೀಗಾಸೆಗೆಯ್ದಿರ್ಪವರ್ ೩೯

ಪರವಧುಗಾಸೆಗೆಯ್ವ ನರನುಂ ಕುಲವೆಂಡಿರನೊಲ್ಲದಿರ್ಪ ನಿ
ಷ್ಠುರನುಮುದಾರನಲ್ಲದರಸುಂ ನೆರೆಯುಂ ಪಗೆಗೊಳ್ವ ಗಾಂಪನುಂ

ಗುರುವನವಜ್ಞೆಗೆಯ್ವ ಶಿಶುವುಂ ಪದಪಿಲ್ಲದ ದಾನಿಯುಂ ಜಿನೇ
ಶ್ವರಪದಸೇವೆಯಿಲ್ಲದವನುಂ ನೆಱಿ ರಂಜಿಸಲಾಱರುರ್ವಿಯೊಳ್ ೪೦

ಪರವಧುಗೋತು ಕೂಡಲೆಡೆಯಿಲ್ಲದೆ ನೋಡಿ ಕನಲ್ದು ಜೋಲ್ದು ಕೊ
ಕ್ಕರಿಸಿ ಪೆಱರ್ಗೆ ಬೆಚ್ಚಿ ಮನೆಗೋಗಿ ಮಹಾಮುಱಕಕ್ಕೆ ಭೂಮಿಯೊಳ್
ಪೊರಳುತುಮಿರ್ದು ನೀರಡಿಸಿ ಬಾಯ್ ಪೊಗೆವೋಗೆ ನಿರರ್ಥಕತ್ವದಿಂ
ದುರಿಯುತುಮಿರ್ಪ ತನ್ನೆರ್ದೆಯ ದಾಹಮೆ ಪೇೞದೆ ಪೊಲ್ಲದೆಂಬುದಂ ೪೧

ಮಾವಿನ ಪಣ್ಣನೊಲ್ಲದೆ ಬೇವಿನ ಪಣ್ಣಂ ತಿಂಬಂತೆ, ಕೞಿವಾವಂ ಪೊರೆಯದೆ ಗೊಡ್ಡಂ ಪೊರೆವಂತೆ, ತೋಂಟಕ್ಕೆ ನೀರನೆತ್ತದೆ ಬೀದಿಗೆ ನೀರನೆತ್ತುವಂತೆ, ತೆಂಗಿನ ಮರನಂ ಕಡಿದು ಸಾವೆಗೆ ಬೇಲಿಯನಿಕ್ಕುವಂತೆ, ಸವ್ಯಕ್ತ್ವಮುಮಂ ಸುಖಮುಮಂ ಪುತ್ರಲಾಭಮುಮನೀವ ಕುಲಾಂಗನೆಯನೊಲ್ಲದೆ ಪರ ಪೀಡೆಯುಮುಂ ಮನೋದುಃಖಮುಮಂ ಬಹುಕ್ಲೇಶಮುಮಂ ಕೀರ್ತಿ ಯೞಿವುಮಂ ಧರ್ಮಕ್ಷಯಮುಮಂ ನರಕದ ಮಹಾದುಃಖಮುಮಂ ಮಾಳ್ಪ ಪರಾಂಗನೆಗಳಿಪುವುದು ಕಜ್ಜಮಲ್ಲ; ನೆಗೞುಳ್ಳ ಮಡುವಿನೊಳಿರ್ದ ನಿಕ್ಷೇಪ ದಂತೆ, ಸಿಂಹದ ದಾರಿಯೊಳಿರ್ದ ಗೞರಿಗೆಯಂತೆ, ಡಾಕಿನಿಯರ ಕೈಯ ಪೋಳಿಗೆಯಂತೆ, ರಕ್ಕಸಿಯರಮನೆಯ ಬೆಲ್ಲದಂತೆ, ಸಿಡಿಲೊಳಗಿರ್ದ ಸಕ್ಕರೆ ಯಂತೆ ಪರವನಿತೆಯರಿರ್ಕುಂ. ಪಾದರಂ ಮೆಯ್ಯಿಕ್ಕಿದೊಡಂ, ಕದ್ದು ಪರ ದಾಡುವ ಸುಂಕಿಗನ ಕಯ್ಯೊಳ್, ತುಡುಗುಣಿನಾಯ್ ಮನೆಯವರ ಕಯ್ಯೊಳ್, ಪಾವಡಿಗಂ ಪಾವಿನ ಕಯ್ಯೊಳ್, ಪುಲಿವೇಂಟೆಗಾಱಂ ಪುಲಿಯ ಕಯ್ಯೊಳ್, ತುಡುಗಾಡುವ ಬಸವನಾರಂಬಿಗನ ಕಯ್ಯೊಳ್ ಸಿಕ್ಕುವಂತೆ ನಾರಕರ ಬಾರಿ ಯೊಳ್ ಬಿರ್ದು ಬಾರದ ಭವಂ ಬರ್ಕುಮೆಂದು ಧರ್ಮಸ್ವರೂಪಮಂ ನುಡಿ ವುದುಂ

ಅವರ ವಚನಂಗಳಂ ಕೇ
ಳ್ದವಧಾರಿಸಿ ಪೊಲ್ಲದೆಂಬ ಬಗೆಯಿಲ್ಲದ ಲೋ
ಕವಿರುದ್ಧಮಪ್ಪ ಕಜ್ಜಮ
ನವಯವದಿಂದೆತ್ತಿಕೊಂಡು ಮಾಣದೆ ಚಲದಿಂ ೪೨

ಮುನ್ನಿನ ನಾಯಕರ್ ಮಡಿದರೆಂಬುದನೊಯ್ಯನೆ ಕೇಳ್ದು ಭೀತಿಯಿಂ
ದನ್ನಡುಗುತ್ತುಮುಳ್ಳಳುಕಿ ಕಾದುವ ಬುದ್ಧಿಯನೊಲ್ಲದಂತುಮಿಂ
ತುನ್ನೆಱೆ ಲೋಗರಂಗನೆಗೆ ಸೋಲದಿರೆಂದೆನಗೆಯ್ದೆ ಧರ್ಮಮಂ
ಸನ್ನುತಮಾಗಿ ಪೇೞ್ವಿರಱಿವೆಂ ಗಳ ನಿಮ್ಮ ಪರಾಕ್ರಮಂಗಳಂ ೪೩

ನಾಯ ಬಾಲಮಂ ಪಿಡಿದು ತೊಱೆಯಂ ಪಾಯ್ವಂತೆ ನಿಮ್ಮ ಬಲಮಂ ಪಿಡಿದು ಕಾದಿ ವಿಳಾಸವತಿಯನೆನಗೆ ಮಾಡಲಿರ್ದ ಗಾವಿಲನಲ್ಲೆನೆನ್ನ ಭುಜಬಲಮೆ ಸಾಲ್ಗುಂ ಪಂದೆತನದಿಂದೆನ್ನೊಡನೆ ಕಾಳಗಕ್ಕೆ ಬರಲೊಲ್ಲಿರಪ್ಪೊಡಿಲ್ಲಿಯೆ ಮಾಣ್ದು ಸಿರದಿರ್ಪುದಲ್ಲದೆ ನಿಮ್ಮ ಕಾಟ್ ಧರ್ಮಶ್ರವಣಮಂ ಪೇೞಿವೇಡೆಂಬುದುಂ ಪ್ರಧಾನರ್ ಸುವೇಗನ ಮನದ ತೀವ್ರತೆಯಂ ಕಂಡು ತಮ್ಮೊಳಿಂತೆಂದರ್

ದಿನಪತಿಗುಷ್ಣಮಂಬುರುಹವೈರಿಗೆ ಶೀತಳಮಬ್ಧಿಗುಪ್ಪುನೀರ್
ವನಿತೆಗೆ ಮಾಯವೃತ್ತಿ ಫಣಿಗುಗ್ರವಿಷಂ ಸಹಜಂಗಳಿಂತು ಮೇ
ದಿನಿಯೊಳಗಂತೆ ದುರ್ಮತಿಯುಮುದ್ಧತಿಯುಂ ಪುರುಳ್ಗೆಟ್ಟ ವಾಕ್ಯಮುಂ
ಮುನಿಸುಮುಪಾಯ ಚಿಂತೆಗಳುಮಿಂ ಸಹಜಂ ಕುನಯರ್ಗೆ ಲೋಕದೊಳ್ ೪೪

"ದುರಾಗ್ರಹಸ್ಯ ಹಿತೋಪದೇಶೋ ಬಧಿರಸ್ಯಾಗ್ರತೋ ಗಾನಮಿವ" ಎಂಬ ನೀತಿಯುಂಟೀತಂಗಾವೇನೆಂದೊಡಂ ನಮ್ಮ ಮಾತು ಕೇೞಿಕ್ಕುಮಲ್ಲದೀತಂ ಕೇಳ್ವನಲ್ಲ ನಾಮಿನ್ನುಸಿರದಿರ್ಪಮೆಂದು ಪ್ರಧಾನರುಸಿರದಿರ್ಪುದುಂ ಸುವೇಗಂ ವೇಗಿಯಾಗಿ ಯುದ್ಧಕ್ಕೆ ನಡೆದು

ಪೋಗದಿರೆಂದು ತಾಗಿ ರಥಮಂ ಸೆಡೆದುಳ್ಕದೆ ಪತ್ತಿ ಮುತ್ತಿ ಚೆ
ಲ್ವಾಗಿರೆ ತನ್ನ ಚಾಪದ ಪರಿಶ್ರಮಮಂ ನೆಱೆ ತೋರ್ಪೆನೆಂದು ಧ
ನ್ವಾಗಮವೇದಿಯಂ ಜಿನಪದಾಂಬುಜ ಭೃಂಗನನಾಗಳತ್ಯಗು
ರ್ವಾಗೆ ಕುಕಿಲ್ದು ಕಾರ ಸರಿವೋಲ್ ಸುರಿದಂ ಶರಸಂಕುಲಂಗಳಂ ೪೫

ವಸುಧೀಶಂ ಕಂಡು ಬಾಣಾವಳಿಯೊಳನಿತುಮಂ ತತ್‌ಕ್ಷಣಂ
ಕೋಪದಿಂ ಖಂ
ಡಿಸೆ ಭೂಭಾಗಕ್ಕೆ ಬಿರ್ದಿರ್ದಲಗುಗಳುಚಯಂ ಕೋಲ್ಗಳಂಭೋಧಿಯಂ ರಂ
ಜಿಸೆ ನೀಲಾದ್ರೀಂದ್ರಮಂ ದುರ್ಗಮನನುನಯದಿಂ ಪೋಲೆ ತತ್ಸ್ಯಂದನಂ ಭಾ
ವಿಸಿ ನೋಟ್ಪಂದೊಪ್ಪಿ ಲಂಕಾಪುರದ ಮಹಿಮೆಯಂ ಸೂಱೆಗೊಂಡಂತಿರಕ್ಕುಂ

ಅಂತು ಪೋಗದೆಯಿಸೆ ಉಕ್ಕುಕ್ಕಂ ತಾಗುವಂತೆ ತಾಗಿ ಸೆರಗುಗೆಯ್ಯದೆ ಕಾದುತ್ತಿರ್ಪುದುಂ ಪ್ರಮಾಥಿಕುಮಾರನ ಕಯ್ಯಂಬುಗಳೆರಡುಱಿಯೆ ಮತ್ತೆಲ್ಲಂ ತವುವುದುಂ ಚಂದ್ರಲೇಖೆ ಕಂಡು ಬೆಱಗಾಗಿ ಪಲ್ಲಿಲ್ಲದ ಪುಲಿಯಂ ನಖಮಿಲ್ಲದ ಸಿಂಹಮುಮೆನಿತು ಬಲ್ಲಿತಾದೊಡಮೇಗೆಯ್ವುದು ಈತನಪ್ಪೊಡೆ ಬಲ್ಲಿದಂ ಬಲ್ಲಿದನಾಗಿಯುಂ ಕೈದುವಿಲ್ಲದೇಗೆಯ್ಗುಂ ಸಾವು ನಿಶ್ಚಯಮಾಯ್ತೆಂದು ಚಿಂತಾಕ್ರಾಂತೆಯಾಗಿ

ಪತಿಯಂ ಬಿಟ್ಟು ಪರತ್ರೆಗೆಟ್ಟು ಕುಲಮಂ ಕಿತ್ತಿಕ್ಕಿ ನಾಯಾಗಿ ದು
ರ್ಮತಿಯಿಂ ದುರ್ಜನದೊಳ್ ದುರಾಚರಿತರೊಳ್ ನಿರ್ಧರ್ಮರೊಳ್ ಕೂಡಿ ಸ
ನ್ಮತವಂ ಬಿಟ್ಟು ಪತಿವ್ರತಾಗುಣಮನೊಕ್ಕಾನಂದದಿಂದಿರ್ಪ ಸಂ
ಸ್ಕೃತಿ ಸೌಖ್ಯೋನ್ನತಿಯಿಂ ಮಹಾಮಹಿಮೆಯಿಂ ಸಾವೇಂ ಕರಂ ಪೊಲ್ಲದೋ

ಲಲಿತ ಪತಿವ್ರತಾಗುಣಮನುರ್ವಿಸೆ ಶಾಂತನೊಳಾದ ಭಕ್ತಿಯಂ
ನಿಲಿಸಿ ಪೊದಟ್ಟ ದುಃಖಮುಮನಾರ್ಪುಮುಮಂ ಕಡುನೋವುಮಂ ಮಹೀ
ವಳಯದೊಳಾಂತು ಬೆಬ್ಬಳಿಸದಂಜದೆ ನೋಡ ಸುಖಕ್ಕೆ ಕೀರ್ತಿಗ
ಗ್ಗಳಿಕೆಗೆ ಮುಖ್ಯರಾದರದಱಿಂ ಗುಣಮುಳ್ಳರೆ ಪೂಜ್ಯರಲ್ಲರೇ ೪೮

ಎಂದು ಮುನ್ನಿನ ಮಹಾಗುಣವಂತರಪ್ಪರ ಕಥಾಂತರಂಗಳಂ ಭಾವಿಸಿ ಪ್ರಮಾಥಿಕುಮಾರನಿಂ ಮುನ್ನೆನ್ನ ಪತಿವ್ರತಾಗುಣಕ್ಕಂ ದರ್ಶನಕ್ಕಂ ಹಾನಿಯಾಗಲೀಯದೆ ಸಾವೆನೆಂದು ಶರೀರಮಂ ತೊಱೆದು ಧರ್ಮಧ್ಯಾನದಿಂ ಪಂಚಪರಮೇಷ್ಠಿಗಳ ಶ್ರೀಪಾದಂಗಳಂ ಹೃತ್ಕಮಲದೊಳ್ ತಾಳ್ದಿ ಪಂಚನಮಸ್ಕಾರಂ

ಗಳನೋದುತ್ತುಂ ಬರ್ಪಂಬಿಗಿದಿರಾಗಿ ರಥದಿಂ ಪೊಱಮಟ್ಟು ನಿಂದಿರ್ಪುದುಂ ಸುವೇಗಂ ಚಂದ್ರಲೇಖೆಯ ಸರ್ವಾಂಗಮುಂ ಕಂಡು

ಕೀಲಿಸಿದಂತಿರೆ ನಯನಂ
ಬಾಲೆಯ ಲಲಿತಾಂಗದಲ್ಲಿ ನಟ್ಟಿರೆ ಮತಿಗೆ
ಟ್ಟಾಲಾಪಮಿಲ್ಲದಱಿಯದೆ
ಕಾಳಗದೊಳ್ ಕೂವ ಕಂಭದಂತಿರೆ ನಿಂದಂ ೪೯

ಅಂತಿರ್ಪುದುಂ ಪ್ರಮಾಥಿಕುಮಾರನೆಡೆವೆತ್ತು ಕೂರಂಬೊಂದಂ ತೊಟ್ಟು ತೀವಿ ತೆಗೆದಿಸುವುದುಂ

ತಲೆ ಪಱಿದು ಜೋಲ್ದು ತೊಪ್ಪನೆ
ನೆಲದೊಳ್ ತನು ಬೀೞೆ ಸತ್ತು ಪರವನಿತೆಗೆ ಸೋ
ಲ್ತಳಿಪಿದ ಪಾಪದ ಫಲದಿಂ
ಮಲಿನಮನಂ ಜವನ ದಾಡೆಗಂದೊಳಗಾದಂ ೫೦

ಕಾಳೆಗಮಪ್ಪುದನಱಿದುಂ
ಬಾಲೆಗೆ ಸೋಲ್ತತ್ತಲಿತ್ತ ಮಿಡುಕದೆ ನಿಂದೊ
ಳ್ಪಾಳಟಿದನೆಂದೊಡನ್ಯರ
ಬಾಲೆಗೆ ಸೋಲ್ತಂಗೆ ಬುದ್ಧಿ ದೊರೆಕೊಂಡಪುದೇ ೫೧

ಅಂತು ಪ್ರಮಾಥಿಕುಮಾರನ ಬಾಣದಿಂ ಮಿಡುಮಿಡ ಮಿಡುಕಿ ಸುವೇಗಂ ನರಕದೊಳ್ ಪುಟ್ಟಿದಂ. ಸಮ್ಯಕ್ತ್ವಚೂಡಾಮಣಿ ರಿಪುವಂ ಗೆಲ್ದು ಮುನ್ನಿನವರ ನಿದ್ರೆಯೆಲ್ಲಮನುಪಸಂಹರಿಸಿ ನಿಮ್ಮ ನಿಮ್ಮ ಮನೆಗೆ ಪೋಗಿಮೆಂದು ಕಳುಪಿ ಮನಃಪ್ರಿಯೆವೆರಸು ಕೌಶಾಂಬಿಗೆ ವರ್ಪುದುಂ, ದಂತಿಬಲಮಹಾರಾಜಂ ಪ್ರಮಾಥಿಕುಮಾರನಪ್ಪುದಂ ದೂರದಿಂದಱಿದು ಪುರಮುಂ ಶೃಂಗಾರಂಗೆಯ್ದಿದಿರ್ಗೊಳಲ್ ಗುಡಿತೋರಣಂಗಳಂ ಕಟ್ಟಿಸಿ ಸಮಸ್ತಬಲಂಬೆರಸು

ರಾಗದಿಂದಿದಿರ್ವರ್ಪುದುಂ ಕುಮಾರನಯ್ಯಂಗೆ ಬಂದು ಚಂದ್ರಲೇಖೆವೆರಸು ಪೊಡೆಮಡುವುದುಂ ಪರಸಿ ತಕ್ಕೈಸಿಕೊಂಡು ಮಹಾವಿಭೂತಿಯಿಂದರಮನೆ ಗೊಡಗೊಂಡು ಬಂದು ಸಂತೋಷದಿಂ ಜಿನಾಭಿಷೇಕ ಪೂಜೆಗಳಂ ಮಾಡಿ ಕೆಲವು ದಿವಸಕ್ಕೆ ಒಸಗೆಮರುಳ್ಗೊಂಡು

ತನಯಂಗೆ ರಾಜ್ಯಭರಮಂ
ಮನುಜೇಂದ್ರಂ ಕೊಟ್ಟುಮಿಾ ಪರಿಗ್ರಹದಿಂ ಬೇ
ಳೆನಿಸದೆ ಜಿನೇಂದ್ರಪದ ಸೇ
ವನೆಯೊಳ್ ಸಚ್ಚಿತ್ತನಾಗಿ ನಿಲ್ವುದುಮಾಗಳ್ ೫೨

ಧರಣೀಶರ್ ಬೆಸಕೆಯ್ಯೆ ಕೂರ್ತು ಸತತಂ ಕೈವಾರದಿಂದೆಯ್ದೆ ಭೃ
ತ್ಯರುದಾರರ್ ಪದಪಿಂದೆ ಪೊರ್ದೆ ಪರ ಭೂಪಾಲರ್ ಮಹಾಭೀತಿಯಿಂ
ನರಿಯಂತಂಜಿ ಕುನುಂಗಿ ತಮ್ಮ ಧನಮಂ ತಂದೀಯೆ ಭವ್ಯಾಳಿ ಪೆ
ರ್ಚಿರೆ ಸದ್ಧರ್ಮದಗುರ್ವು ಪರ್ವೆ ಧರೆಯಂ ಭೂಭಾರಮಂ ತಾಳ್ದಿದಂ ೫೩

ಅಂತು ರಾಜ್ಯಶ್ರೀಯುಂ ತಾಳ್ದಿ ಸೌಂದರಮಹಾದೇವಿಯುಂ ಚಂದ್ರಲೇಖೆಯುಂ ಮೊದಲಾದನೇಕರಸಿಯರೊಳ್ ಕೂಡಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ದನ್.

## ೪. ಕಳವಿಂ ಪೊಲ್ಲಮೆ ಪೆಱತೊಳವೆ

ಗುಣಜಲನಿಧಿ ನಯದಿಂ ಮುಂ
ದಣ ಕಳದಾ ದಿವ್ಯಮಪ್ಪ ಸುವ್ರತಮಂ ಧಾ
ರಿಣಿ ಮೆಚ್ಚೆ ತಾಳ್ದಿ ಲೋಕಾ
ಗ್ರಣಿಯಾದರ ಕಥೆಯನೆನಗೆ ಬೆಸಸಲ್ವೇಳ್ಕುಂ ೧

ಎಂದ ಮಗಧಾಧಿಪತಿಗೆ ಗೌತಮಸ್ವಾಮಿಗಳ್ ಅಸ್ತೇಯವ್ರತದ ಕಥೆಯನಿಂತೆಂದು ಪೇಳ್ದರ್ : ಮಱಿಯೊಳ್ ಕೂಡಿ ಕೆಱಿಯಿಂ ಕೆಯ್ಯಿಂ ತೋಟದಿಂ ಪೊಲನೊಪ್ಪುವಂತೆ, ತಂಬುಲದೊಳ್ ಕೂಡಿ ನಾಲಿಗೆಯಿಂ ಪಲ್ಲಿಂದಧರದಿಂ ಬಾಯೊಪ್ಪುವಂತೆ, ಕಾಡಿಗೆಯೊಳ್ ಕೂಡಿ ಬಿಳಿಯಾಲಿಯಿಂ ಕಱಿಯಾಲಿಯಿಂದೆವೆಯಿಂ ಕಣ್ಣೊಪ್ಪುವಂತೆ ಕೂರ್ಮೆಯೊಳ್ ಕೂಡಿ ಪುರುಡಿಂ ಮುದ್ದಿಂ ಪೆರ್ಮೆಯಿಂ ಪೆಂಡಿರೊಪ್ಪುವಂತೆ, ಸಮ್ಯಕ್ತ್ವದೊಳ್ ಕೂಡಿ ಕೊಲೆಯಿಂ ಪುಸಿಯಿಂ ಕಳವಿಂದಗಲ್ದು ಸುವ್ರತಗಳಿಂ ಭವ್ಯರುಮೊಪ್ಪುವೆರಸಿರ್ಪುದು.

ಮನಮಂ ಪೇಳ್ವುದು ಬಯಕೆಯ
ಧನಮುಮನಱಿಪುವುದು ನೀನೆ ಶರಣೆಂಬುದು ಮೇ
ದಿನಿಚಕ್ರಂ ಕಡುಗೂರ್ಮೆಯೊ
ಳೆನೆ ನೆಗಳ್ದೀ ಸುವ್ರತಾಧಿಪಂಗೆಣೆಯೊಳರೇ ೨

ಅವಂತೀವಿಷಯದೊಳ್ ಧರಾಂಗನೆಯ ತೊಟ್ಟ ಮಣಿಭೂಷಣದಂತೆ ನಾನಾ ಶೋಭೆಗಳಿಂದುಜ್ಜಯಿನಿಯೆಂಬ ಪೊಟಲೊಪ್ಪುಗುಮಾ ಪೊಟಲನಾಳ್ವಂ ಧರ್ಮಧರ ಮಹಾರಾಜನೆಂಬನಾತನ ರಾಜಶ್ರೇಷ್ಠಿ

ಅನುಪಮಗುಣನಿಳಯಂ
ಜಿನಪಾದಪಯೋಜಷಟ್ಪದಂ ಜನನುತನಿಂ

ದ್ರನಿಭನಮಳಾಂಗನಿರ್ಪಂ
ಜಿನದತ್ತಂ ಜೈನಸಮಯವಾರಿಧಿ ಚಂದ್ರಂ ೩

ಆತನ ಪೆಂಡತಿ ಧರಣೀ
ಖ್ಯಾತೆ ಸದಾಶುದ್ಧಚರಿತೆ ಭವ್ಯಜನೈಕ
ಪ್ರೀತೆ ಸಮಸ್ತಗುಣಾಂಬುಧಿ
ಮಾತೇನೊ ಜಿನೇಂದ್ರದಾಸಿಯೆಂಬಳ್ ಪೆಸರಿಂ ೪

ನೆಗಟ್ದ ಜಿನದತ್ತಂಗಂ
ಮೃಗನಯನೆ ಜಿನೇಂದ್ರದಾಸಿಗಂ ಮದನನಿಭಂ
ಜಗತೀಪೂಜ್ಯಂ ವಿಕ್ರಮ
ಮೃಗಾರಿ ಜಿನದಾಸನೆಂಬನಗ್ರತನೂಜಂ ೫

ಅಂತವರ್ ಸುಖದಿಂ ಪಲಕಾಲಮಿರ್ಪನ್ನಗಂ ಜಿನಪಾಲಿತರೆಂಬ ತಪೋಧನರೊರ್ವರೇಕವಿಹಾರಿಗಳ್ ವಸುಧಾವಳಯಮಂ ತೊಳಲುತ್ತುಂ ಬಂದುಜ್ಜಯಿನಿಗೆ ಬಂದು ನೇಸಱ್ ಪಟ್ಟ ಬೞಿಕ್ಕಂ ತೊೞಲ್ವುದು ಸಂಯಮಧರರಪ್ಪ ಋಷಿಯರ್ಗೆ ಮಾರ್ಗಮಲ್ಲೆಂದು ಗಂಧವತಿಯೆಂಬ ತೊಱೆಯ ತಡಿಯೊಳ್ ರೌದ್ರಮಪ್ಪ ಶ್ಮಶಾನಭೂಮಿಯ ನಡುವೆ

ಪೊಲ್ಲೆನಿಸದ ಜೀವಾವಳಿಗ
ಳಿಲ್ಲದ ರಮಣೀಯಮಪ್ಪ ಪಾಸಱೆಯಂ ತ
ಳ್ವಿಲ್ಲದೆ ಬೆಳಗಿನೊಳಾರ
ಯ್ದುಳ್ಳಳ್ಕದ ಗಂಡನಘಕಮಂದದಿನೇಶಂ ೬

ಸನ್ನುತರವಿಯುದಯಂಗೆ
ಯ್ವನ್ನವರಂ ಮಿಸುಕೆನೆಂದು ಮಂದರಧೈರ್ಯಂ

ತನ್ನಣ್ಮಿಂದಂ ಮಿಡುಕದೆ
ಸನ್ನುತಮತಿಯೊಂದೆ ಮಗ್ಗುಲೊಳ್ ಪಟ್ಟಿರ್ದಂ ೭

ಇತ್ತಲುಜ್ಜಯಿನಿಯಿಂದೊರ್ವ ವಿಡಂಬನೆಂಬ ಸಾಧಕಂ ನಿಧಿನಿಕ್ಷೇಪಂಗಳಂ ಸಾಧಿಸಲೆಂದು ಯಥೋಚಿತಮಪ್ಪ ಬಲಿವೆರಸು ಪಲ್ಲಂ ಸುಲಿದು ಮಿಂದು ಶುಚಿ ಭೂರ್ತನಾಗಿ ಧೌತಾಂಬರಮನುಟ್ಟು ವೀರದಿನುಪವಾಸಂ ಕೈಕೊಂಡು ತನ್ನ ನಿವಾಸಮುಂ ಪೊಱಮಟ್ಟು ನಟ್ಟಿರುಳ್ ತನ್ನ ಕಟ್ಟಾಳ್ತನದಿಂ

ಪಲವುಂ ಪೂಣ್ಕೆಗಳಿಂದಂ
ಚಲದಿಂದಸಹಾಯವಿಕ್ರಮಂ ತನ್ನಳವಂ
ಕಲಿತನಮುಂ ನಂಬಿ ಬಲಂ
ತಳರದೆ ಸಾಧಿಸುವೆನೆಂಬ ಬಳಕೆಯಿನಾತಂ ೮

ಕರಡಿಯ ತೊವಲಂ ಕಾಡಿಗೆಯೊಳರ್ದಿ ವಿಧಾತ್ರಂ ಲೋಕಮಂ ಬಾಸಣಿಸಿದನೆಂಬಂತಪ್ಪ ಕತ್ತಲೆಯೊಳ್ ಕೂಡಿದ ರಾತ್ರಿಯೊಳ್ ಗಂಧವತಿಯ ತಡಿವಿಡಿದು ಬಂದು ಪಿತೃವನಮಂ ಪೊಕ್ಕು ತನ್ನ ಕೈಯ ಸೊಡರಿಂ

ತಲೆ ಪಱಿದಿರ್ದ ಪೆರ್ದಸಿಯ ಮೇಲೆ ಮಹಾದ್ಭುತದಿಂದಮಿದ್ದು ಕ
ಣ್ಗಳನರೆ ಮುಚ್ಚಿಕೊಂಡು ಕೆಡೆದಿರ್ದ ಕರುಳ್ ಪಱಿದಿರ್ದ ಭೂ
ತಳಮನೆ ಕಚ್ಚಿ ಮೈಮಱೆಯುತಿರ್ದ ಭಯಂಕರಮಾಗಿ ಪಟ್ಟು ಕ
ಣ್ಣೊಳೆ ತೆಗೆದಿರ್ದ ವೇದನೆಗೆ ಸೈರಣೆಗೆಟ್ಟೆಱುತಿರ್ದ ಭೀತರಂ ೯

ನೋಡುತ್ತುಂ ಬಂದೇಕಪಾರ್ಶ್ವದೊಳ್ ಪಟ್ಟಿರ್ದ ಜಿನಪಾಲಿತಮುನಿಯುಮಂ ಕಂಡು ಪೆಣನೆಂದು ಬಗೆದು ಬೇಗದಿನಲ್ಲಿಗೆ ಮತ್ತೆರಡು ಪೆಣಂಗಳಂ ತಂದು ಮೂಱುದಲೆಯನೊಲೆಗಲ್ಗೂಡಿ ಕೆಳಗೆ ಕಿರ್ಚಂ ಪೊತ್ತಿಸಿ ಚರುವನಡುತ್ತಿರ್ಪುದುಂ

ಭೋರೆನೆ ಕಿಚ್ಚಿನ ನಾಲಗೆ
ನೇರಿದವಾಗಳುರೆ ನೋವಿನೊಳ್ ಸೈರಣೆಗೆ
ಟ್ಟೋರಂತೆ ಮಱುಗಿ ಕುದಿಯದೆ
ಧೀರಂ ಜಿನಪಾದಪದ್ಮಮಂ ನೆನೆಯುತ್ತುಂ ೧೦

ನಯಮಿದನಪ್ಪುದಱಿಂ ದು
ರ್ನಯಮಂ ಬಿಸುಟೇಕಚಿತ್ತದಿಂ ನಂಬಿರ್ದಂ
ಭಯಮಿಲ್ಲದೆ ಜಿನಪತಿಯಂ
ನಯಸೇನಂ ಸುಕವಿನಿಕರಪಿಕಮಾಕಂದಂ ೧೧

ಇಲ್ಲಿಯೆ ಜೈನವ್ರತಮಂ
ಬಲ್ಲಿತು ಪಿಡಿದಂಗೆ ಬಾಧೆಯಾಗದು ಬಟ್ಟಂ
ಗೆಲ್ಲಿಲ್ಲದ ಪೀಡೆಗಳುಂ
ನಿಲ್ಲದೆ ಬಂದಡಸುಗೆಲ್ಲರುಂ ಬಲ್ಲರಿದಂ ೧೨

ಮನದೊಳ್ ಜಱಿಯದೆ ಬೆರ್ಚದೆ
ಮುನಿಯದೆ ಸೆಡೆಯದೆ ನಿಳಿಂಪನಗನಿಭಧೈರ್ಯಂ
ತನುವಿನ ಮೇಲಣ ಮೋಹಂ
ತನಗಿಲ್ಲದೆ ತಳರದಿರ್ದನುನ್ನತಚಿತ್ತಂ ೧೩

ಅಂತಳ್ಕದೆ ಜಿನಾಗಮಮಂ ಭಾವಿಸುತ್ತುಮಿರ್ಪುದುಂ ಪೆಗಲೆಲ್ಲಂ ಬೆಂದು ತೋಳ ಮೊದಲಂ ಕಿರ್ಚಳುರ್ವಾಗಳ್ ನರವುಗಳ್ ತೆಗೆದು ತೋಳ್ ತನಗೆ ತಾನೆ ನೆಗೆವುದುಂ, ವಿಡಂಬಂ ಸೊಡರಂ ಕಂಡ ಕೋಡಗದಂತೆ ಬೆಬ್ಬಳಿಸಿ ಕಾಡೆರ್ದುದೆಂದು ಬೆರ್ಚಿ ಬೆಗಡುಗೊಂಡು ತಾಂ ಮಂತ್ರವ್ಯಾಕರಣಮನಱಿಯ ನಪ್ಪುದಱಿಂ ಮಂತ್ರದೊಳಾದ ಹೀನಾಧಿಕಮನಱಿಯದೆ ಮತಿಗೆಟ್ಟು ಕೆಟ್ಟೆ ನೆಂದು ಬಾಯ್ಬಿಟ್ಟು ತಡವರಿಸಿ ಪೆಱಗಣ್ಗೆ ಬಿರ್ದಟ್ಟುದುಮಂ ಸುರಗಿಯುಮ ನೀಡಾಡಿ ಮೆಯ್ಯಱಿಯದೆ ಕೊಳ್ಪಟ್ಟರಂತೆ ಬತ್ತಲೆ ಕರುಳ್ ಪಱಿವಿನಮೋಡು

ವುದುಂ ಜಿನಪಾಲಿತ ಮುನಿನಾಥಂ ಪಾಪಭೀರುವಪ್ಪುದಱಿಂದಾತನ ಪಾದ ಘಟ್ಟನೆಯಿಂ ತ್ರಸಸ್ಥಾವರ ಜೀವಂಗಳ್ಗೆ ಬಾಧೆಯಾಗದೆ ಮಾಣದಕ್ಕಟಾ ಪೊಲ್ಲದಾಯ್ತೆಂದು ಕಾರುಣ್ಯಹೃದಯನಾಗಿರ್ಪುದುಂ, ವನದೇವತೆಯರುಂ ನಗರ ದೇವತೆಯರುಂ ನೆರೆದು, ವಿಡಂಬನ ಡೊಂಬಾಟಕ್ಕಂ ಸಮ್ಯಕ್ತ್ವಚೂಡಾ ಮಣಿಯ ಧೈರ್ಯಕ್ಕಂ ಮನದೊಳಾದ ಜೀವದಯೆಗಂ ವಿಸ್ಮಯಂಬಟ್ಟು ಜಯ ಜಯನಿನಾದಮುಂ ದೇವದುಂದುಭಿಯುಮೊಡನೊಡನೆ ಸಮುದ್ರದಂತೆ ಘೂರ್ಣಿಸೆ ಮೆಯ್ಯಱಿಯದೆ ರಾಗದಿಂ ಬಂದು ನಮೇರು ಮಂದಾರ ಪಾರಿ ಜಾತಕಲ್ಪವೃಕ್ಷದರಲ್ಗಳಂ ಮುನಿಪುಂಗವನ ಮೇಲೆ ಸುರಿದು ಕರಕಮಲಂ ಗಳಂ ಮುಗಿದು

ತನುವಂ ಧನಮುಂ ಕೊಱೆದಿರ
ಲನುಪಮರೆನಿಸಿರ್ದ ಜೈನಯೋಗಿಗಮಭಿಮಾ
ನನಿಧಾನರಪ್ಪುಪಾಸಕ
ಜನಕ್ಕಮಳವಡುಗುಮೞಿದವರ್ಗದು ಮೊಗ್ಗೇ ೧೪

ಎಂದು ಪೊಗೞ್ದು ದೇವನಿಕಾಯದ ಕಳಕಳಮುಂ ಪೊಯ್ವ ಪಂಚಮಹಾಶಬ್ದ ಪ್ರಘೋಷಮುಂ ಪುರದವರೆಲ್ಲಂ ಕೇಳ್ದು ವಿಸ್ಮಯಂಬಡುತಿರ್ದರನ್ನೆಗಮಾದಿತ್ಯಂ ಪೂರ್ವಾಚಲಶಿಖರಶೇಖರನಪ್ಪುದುಂ ಪೊಣ್ಕೆ ತೀರ್ದು ಜಿನಪಾಲಿತಮುನಿ ವೃಂದಾರಕಂ ಯೋಗಮುಂ ನಿರ್ವರ್ತಿಸಿ ತಡೆಯದಲ್ಲಿಂದೆರ್ದು ಬರ್ಪುದುಂ ತನ್ಮುನಿನಾಥನಂ ಜಿನದತ್ತಂ ಕಂಡು ಮನದಾದರದಿಂ ವಂದಿಸಿ ತಮ್ಮ ಮನೆಗೆ ಒಡಗೊಂಡು ಬಂದು ದೇಹಾರದೊಳಿರಿಸಿ

ಅಲ್ಲಿಗೆ ದಿವ್ಯೌಷಧಮುಂ
ಬಲ್ಲವರಿಂ ತರಿಸಿ ವೈಶ್ಯತಿಲಕಂ ಮುಂದಿ
ರ್ದಲ್ಲಿಂದಗಲದೆ ಬೀಯ
ಕ್ಕಳ್ಳಕದೆ ಕೊಟ್ಟು ಪೊಂಗಳಂ ಪ್ರಿಯದಿಂದಂ ೧೫

ಮತ್ತಂ ತಾನೆ ಕೆಲದೊಳಿರ್ದು ಪಥ್ಯಪಾನಂಗಳಂ ಪ್ರಯತ್ನದಿಂ ಮಾಡಿ ನಿರ್ದಯನಂತೆ ನಿಷ್ಕರುಣೆಯಾಗದೆ, ಪಾವಂ ಪಿಡಿದವರಂತೆ ದೂರದೊಳಿರದೆ, ಕುವಿಟನೊಳ್ ಕೂಡಿದ ಸೂಳೆಯಂತೆ ಮೊಗಂದಿರುಪದೆ, ಜೀವಿತಂಗುಡ ದಾಳ್ದನ ಬೆಸಕ್ಕಂಜುವ ಬಂಟನಂತೆ ಮನದೊಳ್ ಜಱಿಯದೆ, ಕ್ರೂರರೊಡನೆ ಬಟ್ಟೆವೋಪ ದ್ರವ್ಯಪತಿಯಂತೆ ಪೆಱಗುಱಿಯದೆ, ಕೀಟಿಜ್ಞಾತಿಯಂ ಕಂಡ ಕುಲ ಜನದಂತುದಾಸೀನಂಗೆಯ್ಯದೆ ಪರಮಭಕ್ತಿಯಿಂದೋವುದುಂ, ಕೆಲವು ದಿವಸಕ್ಕೆ ಪುಣ್ಣೆಲ್ಲಂ ಮಾಯ್ದು ಲೇಸಪ್ಪುದುಂ ಜಿನಪಾಲಿತಮುನಿ ತನ್ನೊಳಿಂತೆಂದಂ

ವಿಪರೀತದ ಪುಣ್ಣನಿದಂ
ಕೃಪೆಯಿಂ ಸಾರಿರ್ದ ವೈಶ್ಯವಂಶಲಲಾಮಂ
ಸುಪರೀಕ್ಷೆಯುಳ್ಳ ವೈದ್ಯರಿ
ನಪಹರಿಸಿದನಿಂತು ಸಾದ್ರ್ರಹೃದಯರುಮೊಳರೇ ೧೬

ಎಂದು ಮನದೊಳ್ ಮೆಚ್ಚಿ ಕಿರ್ಚಿನೊಳಾದ ವೇದನೆಯುಂ ಮನದೊಳಾದ ಸಂಕ್ಲೇಶಮುಂ ತೀರ್ದುದೆನಿತು ಕಾಲಮಿಲ್ಲಿರ್ದೆನನಿತೆ ಸಾಲ್ಗುಮಿನ್ನು ಧರಣೀ ವಳಯದೊಳ್ ವಿಹಾರಿಸುವೆನೆಂಬ ಬಗೆಯಂ ತಂದು ಸೆಟ್ಟಿಗೆ ತಮ್ಮ ಪೋಗಂ ಪೇೞ್ದು ತದಾಲಯದಿಂ ಪೊಱಮಡುವುದುಂ

ವರಮುನಿಪಾದಾಂಬುರುಹಮ
ನುರುವಂದನೆಗೆಯ್ದು ಮಗಲಲಾಱದೆ ವೈಶ್ಯಾಂ
ಬರಭಾನು ಪೆಱಗೆ ನಿಲ್ಲದೆ
ಕರಮಾದರದಿಂದೆ ತಾನುಮಾತ್ಮಾಲಯದಿಂ ೧೭

ಪೊಱಮಟ್ಟು ಬರ್ಪುದುಂ ಮುನಿ
ಕಿಱಿದಂತರದಲ್ಲಿ ನಿಂದು ಸದ್ಧರ್ಮಮನುಂ
ಮಱೆಯದೆ ಸನ್ಮುನಿಮತಮಂ
ತಱುವಲಿತನದಿಂದಮೋಟಿಸದೆ ನೀಂ ಮಗನೇ ೧೮

ಸದ್ಧರ್ಮಸಮೇತನುಂ ಸನ್ಮಾರ್ಗಪ್ರೀತನುಮಪ್ಪುದೆಂದು ಜಿನದತ್ತ ಸೆಟ್ಟಿಯುಂ ಮೃದುವಚನಂಗಳಿಂ ಬೋಧಿಸಿ ಮನೆಗೆ ಮಗುಳ್ದು ಪೋಗಿ ಮೆಂಬುದುಂ ಮಹಾಪ್ರಸಾದಮೆಂತೆಗೆಯ್ವೆನೆಂದು ಪ್ರದಕ್ಷಿಣಂ ಮಾಡಿ ಬಂದಿಸಿ ಮನೆಗೆ ಬಂದಿರ್ಪನ್ನೆಗಂ

ತಂದೆಯು ಪೋಗಂ ಕಂಡಾ
ನಂದದಿನರ್ಥಕ್ಕೆ ಮುನ್ನಮುಡಹಡಿಸಿ ಮನಂ
ಗುಂದಿ ಕಡುನೊಂದು ಮನದೊಳ್
ಬೆಂದು ಮಹಾಮುಱುಕದಿಂದಮಿರ್ಪ ದುರಾತ್ಮಂ ೧೯

ಮನೆಯುವರಂ ಬಂಚಿಸಿ ಮೆ
ಲ್ಲನೆ ದೂರ್ತಿಂ ಕೊಂಡು ಬೀಯಗದ ಕಯ್ಯಂ ನೆ
ಟ್ಟನೆ ತೆಱೆದು ಪಡಿಯನೊರ್ವನೆ
ಮನಮಂಜದೆ ಪೊಕ್ಕು ಕಂಡು ಕನಕಮನಾಗಳ್ ೨೦

ಸಂತೋಷಂಬಟ್ಟು ಮುನ್ನಿನಂತೆ ಪಡಿಯಂ ಕೆತ್ತು ಪೊನ್ನನಿಂದು ನೋಡಿ ಕಣ್ಣೇಹತನದಿಂ ತನ್ನಾರ್ಪನಿತಂ ಕಟ್ಟಿಕೊಂಡು ಪೋಪೆನೆಂದಿರ್ಪುದುಂ ಜಿನದತ್ತಸೆಟ್ಟಿ ಬಂದು ಪೆಱತೊಂದುಮಂ ನೋಡದೆ ತನಗೆ ಪೊನ್ನೊಳಾದ ಮೋಹಂ ಪಿರಿದಪ್ಪುದಱಿಂ ಪೊನ್ನೆಡೆಯೊಳ್ ನಾಯನಪ್ಪೊಡಂ ನಂಬಲಾಗ ದೆಂಬ ನಾಣ್ಣುಡಿಯನವಧರಿಸಿ ಪೊನ್ನಿರ್ದೋವರಿಯ ಬಾಗಿಲಂ ನೋಡಿ ತನ್ನಿಕ್ಕಿದ ಬೀಯಗಮುಂ ಕಾಣದೆ ಪಡಿಯಂ ನೂಂಕುವುದುಂ ಜಿನದಾಸಂ ತಂದೆ ಬಂದನೆಂದಱಿದು ಮನದೊಳ್ ಬೆಗಡುಗೊಂಡು ನಾಡೆಯುಂ ಭಯಸ್ಥ ನಾಗಿ ಪೊಱಮಟ್ಟು ಪೋಗಲಣ್ಮದೆ ಚಿನ್ನದ ದಿಂಡಿರ್ದೆಡೆಯಂ ಪೊಕ್ಕು ಮೇಲೊಂದು ಚಿನ್ನದ ದಿಂಡಂ ತೆಗೆದುಕೊಂಡು ತಾನಲ್ಲದಂತುಸಿರದಿರ್ಪುದುಂ ಸೆಟ್ಟಿ ಮನೆಯೊಳಗೆ ಪೊಕ್ಕು ನೋಡಿ ಪೊನ್ನರಾಸಿಯೊಳ್ ಕಿಱಿದು ಪೊನ್ ಪೋದುದಂ ಕಂಡು

ಮಱುಕಂ ತೊಟ್ಟನೆ ಪುಟ್ಟನೊಂದು ಮತಿಗೆಟ್ಟೋವೆಂದು ಜಾಣ್ಗೆಟ್ಟು ಬೆಂ
ದಱಿತಂಗೆಟ್ಟೆರ್ದೆಗೆಟ್ಟು ಮೆಯ್ಮಱುಗಿ ಕೆಟ್ಟೆಂ ಬಾಱಿನೆಂದತ್ತು ಬಾ
ಯ್ದಱಿದೋರಂತಿರೆ ಕಂದಿ ಕುಂದಿ ಮನದೊಳ್ ಮಂಕಾಗಿ ನಿಂದತ್ತು ಮೆ
ಯ್ಮಱಿದಿನ್ನೇಗುವೆನೆಂದು ಮೋಹದೊದವಿಂ ಬಿರ್ದಂ ಧರಾಚಕ್ರದೊಳ್ ೨೧

ಅಂತು ಬಿರ್ದು ಕಿಱಿದು ಬೇಗದಿನೆರ್ದು ಕಳ್ಳನಿರ್ದನೆಂದು ಕೋಣೆಯಿಟ್ಟೆಡೆಕುಸುಕುಱಿಳೆಲ್ಲಂ ನೋಡಿ ತದಾವಾಸದೊಳಾರುಮಂ ಕಾಣದೆ ಮನೆಯಂ ಪೊಱಮಟ್ಟು ಪಡಿಯಂ ಕಿತ್ತು ಮುನ್ನಿನಂತೆ ಮುದ್ರಿಸಿ ಬಿಲ್ ಕೆಟ್ಟವರ್ ಕೀಲಂ ತಡವರಿಸಿದರೆಂಬಂತೆ, ಕುದುರೆ ಕೆಟ್ಟವರ್ ಬಾದಣಮಂ ನೋಡಿದರೆಂಬಂತೆ ನಾಣ್ಣುಡಿಯಂ ನನ್ನಿವಾಡಿ ಮನದ ಮಱುಕದಿಂ ಭ್ರಮೆಗೊಂಡು ಜಿನಪಾಲಿತ ಮುನಿನಾಥನೆ ಕೊಂಡು ಪೋದನೆಂದು ಬೆನ್ನನೆ ಪರಿದು ಮುನಿಕುಂಜರನನೆಯ್ದಿ ಮಾಯಾವಿನಯದಿಂ ಪೊಡೆಮಟ್ಟು

ಇನ್ನೆಗವೆನ್ನನುತ್ತಮಗುಣಾಂಬುಧಿ ಭವ್ಯಪಯೋರುಹಾರ್ಕ ಮ
ತ್ತೆನ್ನದೆ ಕೂರ್ಮೆಯಿಂ ಪರಸುತಿರ್ದರವೋಘದಿನಿಂದು ಪೋಗಲಾ
ಗೆನ್ನನವಜ್ಞೆಗೆಯ್ದು ಬಿಸಿಲಾದುದು ನಿಮ್ಮಡಿ ನಾಳೆ ಪೋಪುದೆಂ
ದುನ್ನತಶೀಲರಂ ತೆಗೆವುದುಂ ನಯದಿಂ ಪಲವುಂ ವ್ರತಂಗಳಿಂ ೨೨

ಮುನಿನಾಥಂ ಕಾರುಣ್ಯದಿಂ ಮಗುಟ್ವುದುಂ ಜಿನದತ್ತಸೆಟ್ಟಿ ತನ್ನ ಮನೆಗೊಡಗೊಂಡು ಬಂದು ಪೊನ್ನಿರ್ದೋವರಿಯ ಬಾಗಿಲಲ್ಲಿ ಪಿರಿದಪ್ಪ ಮಣೆಯಂ ತಂದಿಕ್ಕಿಸಿ ಯತಿನಾಥನಂ ಕುಳ್ಳಿರಿಸಿ ತಾನುಂ ಕೆಲದೊಳ್ ಕುಳ್ಳಿರ್ದು ತನ್ನೊಳಿಂತೆಂದಂ

ತನುವಂ ಬಿಟ್ಟು ಪರತ್ರೆಯಂ ಪಡೆವೆನೆಂಬಾಕಾಂಕ್ಷೆಯಿಂ ಜೈನಸೇ
ವನೆಯಂ ಮಾಡುತುಮಿರ್ದು ನಿಷ್ಕಪಟದಿಂ ಪಾಪಾರಿಯಂ ಗೆಲ್ದು ನೆ
ಟ್ಟನೆ ಕೈವಲ್ಯವಿಭೂತಿಯಂ ಪಡೆಯದಿಂತೀ ಸಾಧು ಬೇೞಾಗಿ ಕೆ
ಮ್ಮನೆ ಮೋಹೋದಯದಿಂದಮೆನ್ನ ಧನಮಂ ತಾನೇಕೆ ಕಳ್ದೊಯ್ದನೋ ೨೩

ಎಂದು ತನ್ನ ದುರ್ಭಾವದಿಂ ಲೋಭಿ ಗುಣವಿಶೇಷಮನಱಿಯನೆಂಬುದಂ ನನ್ನಿಮಾಡಿ ಮುನಿನಾಥಂ ಕಳ್ಳನೆಂದು ನಿಶ್ಚಯಿಸಿ ಪೊನ್ನನೊರ್ಮೆಯೆ ಬೇಡಿದೆನಪ್ಪೊಡೆ ಮಹಾತಪೋಧನರಂ ಬಱಿದೆ ಕಾಡುತುಮಿರ್ದಪನನ್ಯಾಯಿಯೆಂದು ಕೆಲದವರೆಲ್ಲಮೆನ್ನಂ ದೂಱಿ ಕೊಲ್ವರದುಕಾರಣದಿಂ ಮೆಲ್ಲನುಪಾಯದಿಂ ನುಡಿದು ಪೊಲ್ಲಮೆಯುಂ ದುರ್ಯಶಮುಮಾಗದಂತೆ ಬುದ್ಧಿಯಿಂದೆನ್ನ ಪೊನ್ನಂ ಕೊಳ್ವೆನೆಂದು ಮೆಲ್ಲನಲ್ಲಿಗೆ ತಕ್ಕಂತಪ್ಪ ಕಥೆಯಂ ಪೇೞ್ದಪೆನೆಂದಿಂತೆಂದಂ

ಮುನಿಪತಿ ಕೇಳ್ ಪೇೞ್ವೆಂ ಕಥೆ
ಯನಿದೊಂದಂ ವ್ಯಾಘ್ರಖೇಡಮೆಂಬಾ ಪೊಳಲೊಳ್
ದಿನಕರಸನ್ನಿಭನಿರ್ಪಂ
ದಿನಕರನೆಂಬೊರ್ವನಾತನಗ್ರತನೂಜಂ ೨೪

ಕರಾಳನೆಂಬನಾತಂ ದುಷ್ಟಗೋಷ್ಠಿಯಿಂ ಸಪ್ತವ್ಯಸನ ಸಮೇತನಾಗಿ ಪಲ ಕಾಲಮಿರ್ದೊಂದು ದಿವಸಂ ಸೂಳೆಗೆ ಕುಡಲರ್ಥಮಿಲ್ಲದೆ ರಾಜಭವನಮಂ ಕನ್ನಮನಿಕ್ಕಿ ಪೊಕ್ಕು ತನ್ನಾರ್ಪನಿತು ಪೊನ್ನಂ ಕೊಂಡು ಮುನ್ನಿನ ಪರಿಯಿಂ ಪೊಱಮಡುವುದುಂ ತೊೞಲ್ವ ತಳಾಱರ್ ಕಂಡು

ಕಲ್ಲಿಂ ಗುಂಡಿಂ ಬಡಿಯಿಂ
ನಿಲ್ಲದೆ ಕೈವಾರಮಿಡುತುಮವರೆಯ್ದುವುದುಂ
ತಲ್ಲಣಿಸಿ ಕರಾಳಂ ತಳು
ವಿಲ್ಲದೆ ನಿಲ್ಲದೆ ಭಯಸ್ಥನಾಗಿ ದುರಾತ್ಮಂ ೨೫

ಬೆನ್ನನೆ ಕಾಲಾಗಿಸುತ್ತುಮಿನ್ನೆತ್ತ ಪೋದಪೆನೆಂದು ಬೆಗಡುಗೊಂಡು ಪರಿದು ಪರಿಯಲಾಱದೆ ಬಂದೊರ್ವ ಪರದನ ಕಾಲ ಮೇಲೆ ಬಿರ್ದು

ಸಾವಾದುದೆನಗೆ ನೀನೀ
ಸಾವಂ ಪೋಗಿಸುವುದೊಲ್ಲೆನೆಂದೊಡಮವರುಂ

ನಾನಾವಿಧದಿಂ ಕೊಂದಪ
ರಾವಂಗಂ ಕಾಯಬಾರದಿಂದಿನ ಕೊಲೆಯಂ ೨೬

ಎಂದು ದೈನ್ಯವೃತ್ತಿಯಿಂ ನುಡಿದು ಕಳ್ಳನೊಳ್ಳಿದನಿಲ್ಲ ನಾಯ್ ವೋನಿಯಿಲ್ಲೆಂಬ ನೀತಿಯಂ ಭಾವಿಸದೆ ಕಾರುಣ್ಯದಿಂ ಕರಾಳನಂ ತೆಗೆದು ತನ್ನ ಸಾರೆ ಕುಳ್ಳಿರಿಸಿ ಸೀರೆಯಂ ಪೊದೆದುಕೊಂಡಿರ್ದನನ್ನೆಗಂ ತಳಾಱರ್ ಪರಿತಂದೀ ಮನೆಯಂ ಪೊಕ್ಕನೆಂದು ಮನೆಯೊಳಗಱಸಿ ಕಾಣದೆ ಮುಂದೆ ಕುಳ್ಳಿರ್ದ ಸೆಟ್ಟಿ ಡೊಳ್ಳಿಗನಪ್ಪುದಱಿಂ ಪರೀಕ್ಷಿಸದೆ ಪೋದರಿತ್ತಲ್

ಊರೊಳಗಾದುಲಿಯೆಲ್ಲಂ
ಭೋರೆನಲಂದುಡುಗೆ ಮನದ ನಿರ್ವೇಗಂ ವಿ
ಸ್ತಾರದೊಳೆ ಪೋಗೆ ಪರದನ
ಚೀಲಮನೊಳಗಿರ್ದು ಮೆಲ್ಲನೀಕ್ಷಿಸಿ ಚೋರಂ ೨೭

ಪುಸಿಯ ತಾಯ್ಮನೆ ಪಾಪದಾಗರಮಿಂದ್ರಿಯಂಗಳ ಪೆರ್ಚು ಶೋ
ಭಿಸುವ ಪೆಂಪಿನ ಕೇಡು ಕೋಪದ ಪುತ್ತು ದುಃಖದ ಬಿತ್ತು ದು
ರ್ವ್ಯಸನದಿಕ್ಕೆಯ ಠಾವು ರೌರವ ಪಂಥಮಲ್ಲದೆ ಮನ್ಮಥ
ವ್ಯಸನಮೆಂಬ ಜಿನೇಂದ್ರವಾಕ್ಯಮನಾ ಖಳಂ ನೆಱೆ ತೋಱಿದಂ ೨೮

ಮತ್ತಂ ವ್ಯಸನಿಯಿಂ ಬಿಟ್ಟು ಪಾತಕರುಂ ಪುಲಿಯಿಂ ಬಿಟ್ಟು ಕ್ರೂರರುಮಿಲ್ಲೆಂಬ ಮಾತಂ ನನ್ನಿಮಾಡಿ

ಈ ಪರದನ ಕತದಿಂದೆನ
ಗಾಪತ್ತಿದು ಪೋದುದಱಿದೊಡವನಿಯೊಳೆನಗಿ
ನ್ನೀ ಪರದನೆ ಸಖನೆನ್ನದೆ
ಪಾಪಯುತಂ ಪೊನ್ನೊಳಾದ ಪದೆಪನೆ ಬಗೆದಂ ೨೯

ಪುಸಿವಂಗೆ ಮಾಡಿದ ಹಿತಮುಂ ಕಳ್ಳಂಗೆ ಮಾಡಿದುಪಕಾರಮುಂ ಸಮುದ್ರ ದೊಳ್ ಒಳಕೊಂಡ ಮಱಿಯುಂ ಗ್ರಾಮಣಿಗೆ ಮಾಡಿದ ಗುಣಮುಂ ವೃಥೆ ಯೆಂಬುದಂ ಮಾಡಿ ತನ್ನ ಕಟ್ಟಿದ ಗೇಣಿಂ ಪರದನಂ ಜಾಲೆಯಾಡಂ ಕೊಲ್ವಂತೆ ಪೊರಟ್ಟಿ ಕೊಂದು ಚೀಲಮಂ ಕೊಂಡುಪೋದನಂತೆ ಕೆಲರ್ ದುರ್ಜನತ್ವಮಂ ಮಾಳ್ಪರಲ್ಲದೆ ಪರಮೋಪಕಾರಮಂ ನೆನೆಯರೆಂದು ಪೇಳ್ದುಸಿರದಿರ್ಪುದುಂ ಮುನಿಕುಂಜರರ್ ಜಿನದತ್ತಂ ಪೇಳ್ದ ಕಥೆಯಂದಕ್ಕೆ ವಿಸ್ಮಯಂಬಟ್ಟು

ಇಂದೀ ಜಿನದತ್ತನ ಕಥೆ
ಯಂದಂ ಲೇಸಲ್ಲದಿದಱ ಭಾವಂ ಬೇಱೆ
ನೆಂದಪನೊ ತಿಳಿಯದೀತನ
ಮಂದಿರದೊಳ್ ಕೇಳ ವಸ್ತುವೊಂದೇನಾನುಂ ೩೦

ಕೆಟ್ಟುದಱಿಂದೀತಂ ಬಾ
ಯ್ವಿಟ್ಟು ಮಹಾಮೋಹದಿಂದೆ ಮೆಯ್ಯಱಿಯದೆ ಜಾ
ಣ್ಗೆಟ್ಟು ಮತಿಗೆಟ್ಟು ಗತಿಯಂ
ಬಿಟ್ಟೆಮ್ಮಂ ಕಳ್ಳನೆಂದು ಶಂಕಿಪನಕ್ಕುಂ ೩೧

ಇದೆಲ್ಲಮಿೂತನ ಗೊಟ್ಟಾಟಮಲ್ಲ ದುಷ್ಕರ್ಮದ ಗೊಟ್ಟಾಟಮೆಂದು ಮನ ದೊಳೆ ನಕ್ಕು ವಣಿಗ್ಜಾತಂಗೆ ನಂಬುಗೆಯಪ್ಪಂತೆ ತಮ್ಮ ಮನದ ಶುದ್ಧವೃತ್ತಿಯ ನುಪಾಯದಿಂದಾತಂಗೆ ತಿಳಿಪಂತೊಂದು ಕಥೆಯಂ ಪೇಳ್ದರ್

ಕೇಸರಿಪುರಮೆಂಬುದದಂ
ವಾಸವನೆಂಬವನಿಪಾಲನಾಳುತ್ತಿರ್ಪಂ
ಭಾಸುರಕೀರ್ತಿಪತಾಕಂ
ವಾಸವನಿಭವಿಭವನಮುಳನೆಂಬಂ ಪೆಸರಿಂ ೩೨

ರಾಜಶ್ರೇಷ್ಠಿ ತದ್ವಣಿಗ್ಜಾತನ ನಂದನಂ ವಿಮಳನೆಂಬ ಶಿಶು ಬಾಲಾಭರಣ

ಸಮೇತನಾಗಿ ನಿಚ್ಚಲುಂ ತನ್ನ ಮನೆಯಂಗಣದೊಳಾಡುತ್ತಿರ್ಪುದುಂ

ನೆರೆಮನೆಯಾಕೆ ಕಂಡು ಕಡುಮೋಹದಿನಾ ಶಿಶು ತೊಟ್ಟ ಮಿಂಚುವಾ
ಭರಣಮನೊಯ್ಯನೊಯ್ಯನಳಿಪಿಂ ಪೆಱರೇಗುವರೆನ್ನನೆಂದು ನಿ
ಷ್ಠುರೆ ಕರಮುಲ್ಲದುಮ್ಮಳಿಸಿ ತಚ್ಛಿಶುವಂ ಪಿಡಿದೊತ್ತಿ ಗಂಟಲಂ
ಮುಱಿದು ಕವರ್ತೆಗೊಳ್ವ ತೆಱದಿಂ ಬಿಡದಾಭರಣಂಗಳೆಲ್ಲಮಂ ೩೩

ಕೊಂಡು ಮಗವಿನ ಪೆಣನನೀ ಮನೆಯೊಳ್ ಪೂಳ್ದಿನಪ್ಪೊಡೆ ವಿಷಮರಪ್ಪ ತಳಾಱರ ದೆಸೆಯಿಂದೆನಗೆ ಕೇಡು ಪುಟ್ಟುಗುಂ ಕಜ್ಜಮಲ್ಲದಿದನೀಗಳೆ ಕೊಂಡೊಯ್ದು ಬೀದಿಯೊಳಾಡುವ ಸಾದುಬಸವನ ಕೋಡಿನೊಳಗಿಕ್ಕಿ ಬುದ್ಧಿಯಿಂದೆತ್ತು ಕೊಂದುದು ಕೂಸನೆಂಬಂತು ಮಾಡಿ ದೂಱನೆತ್ತಿನ ಮೇಲಿಕ್ಕಿ ಸುಖದಿಂದಿರ್ಪೆನೆಂಬ ಸಮಕಟ್ಟನೆತ್ತಿಕೊಂಡು ಕೂಸಿನ ಪೆಣನನೊಯ್ದು

ಪಗಲೆಲ್ಲ ತಿರಿತಂದು ಬೀದಿಗಳೊಳಾರಾನುಂ ಭರಂಗೆಯ್ದು ಕ
ಬ್ಬುಗಳಂ ಜೋಳವನಕ್ಕಿಯುಂ ಕಡಲೆಯುಂ ತೌಡಂ ಮನಂಪೆರ್ಚೆ ಪಿಂ
ಡಿಗಳಂ ಪುಲ್ಗಳನಿಕ್ಕೆ ಮೇದು ತಣಿವಿಂ ಮೆಲ್ಕೊತ್ತುಗಂ ನೋಡ ಪ
ಟ್ಟಗವೇಂದ್ರಾಧಿಪನಲ್ಲಿಗಾ ಕುಟಿಲೆ ಬಂದಾಗಳ್ ಮನೋರಾಗದಿಂ ೩೪

ಕೂಸಿನ ಪೆಣನಂ ತಾಟಕಿ
ಲೇಸಾಗಿರೆ ಬಸವನೆಡದ ಕೋಡಿನ ಮೇಲ
ತ್ಯಾಸುರಮುಪ್ಪಂತಿಕ್ಕಿ ನಿ
ವಾಸಕ್ಕಾ ಧೂರ್ತೆ ಪೋದಳನ್ನೆಗಮಿತ್ತಲ್ ೩೫

ಅಮರ್ದಿನೊಳ್ದೊರೆಯಪ್ಪ ಬಾಟೆಯ ಪಣ್ಣನೊಯ್ಯನೆ ಕೊಂಡು ಬಂ
ದಮಿತಸೌಖ್ಯನುದಾರನಾವ ಣಿಗೀಶ್ವರಂ ಮಗನೆಲ್ಲಿದಂ
ಕಮಲಲೋಚನನೆಂದು ಪುತ್ರನ ಮೋಹದಿಂ ಬೆಸಗೊಳ್ವುದುಂ
ಭ್ರಮೆಯಿನೆಲ್ಲರುಮಲ್ಲಿಗಲ್ಲಿಗೆ ನೋಡಿ ಕಾಣದೆ ದುಃಖದಿಂ ೩೬

ಬೀದಿಬೀದಿಗಳೊಳೆಲ್ಲಂ ಪರಿದು ನೋಡುತ್ತುಮಿರ್ದು ಬಸವನ ಕೋಡಿನೊಳಿರ್ದ ಪೆಣನಂ ಕಂಡು ಮೆಯ್ಮಱಗಿ ಸೈರಿಸಲಾಱದೆ ಪಾಪಂಗೆಯ್ದತ್ತು ಕೊಂದುದೆಂದು ಸುತ್ತಿ ಮುತ್ತಿಕೊಂಡು ಬಾಲಮುಂ ಬಡಿದು ಕಂಡರ್ ಕಂಡ ಮುಖದೊಳೆ ನುರ್ಗುನುರ್ಗಾಗೆ ಬಡಿವುದುಂ ಬಸವಂ ವೇದನೆಗಿರಲಾಱದೆ ಗೋಟಿಟ್ಟೊಳಱ ದೆಸೆಗೆ ಬಿರ್ದು ಪರಿಯುತ್ತುಂ ತನ್ನ ಮನದ ನಿರ್ಮಲತೆಯನೆಲ್ಲರ್ಗಂ ತೋಱುವಂತೆ ಕಮ್ಮಱನ ಮನೆಯಂ ಪೊಕ್ಕು ಕಾಸುತಿರ್ದ ಕಾಯ್ದ ಕಬ್ಬುನಮುಂ ಕರ್ಚಿ ನೆರೆದ ನೆರವಿಗೆ ಇದಿರಾಗಿ ಬರ್ಪುದುಂ

ನೆರೆದು ನೋಡುವ ನೋಟಕರ್ ಬೆಱಗಾಗಿ ಮಾಣಿಸಿ ಪೊಯ್ಗಳಂ
ನಿರುತಮಿಂತಿದು ಕೊಲ್ಲದೀ ಮಗನಂ ಪೆಱರ್ ಧನವಂಚಕರ್
ಕರುಣಮಿಲ್ಲದೆ ಕೊಂದರೆಂದು ತಳಾಱನಂ ಕ್ಷಣಮಾತ್ರದಿಂ
ಕರೆದು ನೀನಿದನಿಂತುಪೇಕ್ಷಿಸಿ ಪೋಗಲೀಯದೆ ಕಳ್ಳನಂ ೩೭

ತರವೇಟ್ಕುಮೆಂದು ಪೇಟ್ವುದು
ಮರವರಿಸದೆ ಪೋಗಿ ನೋಡಿ ಬುದ್ಧಿಯ ಬಲದಿಂ
ಪರಿಣತನಾರಯ್ದಱದಂ
ದುರಿತಂ ಪೊಳ್ಳಂಟೆ ಕೊಂದವರ್ ಬದ್ಧಪರೇ ೩೮

ಅಂತು ಕಳ್ಳಿಯುಂ ಪಿಡಿದಂಗಂ ಬೆರಸು ತಂದು ಪ್ರಜೆಗೊಪ್ಪಿಸುವುದುಂ ಬಟ್ಕ್ಕೆ ಬಡಸಾಧುಗೊಂದೆಯುಂ ಬಱದೆ ವಿಚಾರಣೆಯಿಲ್ಲದೆ ಮುಱಯೆ ಮೋದಿದೆವೆಂದು ತಮ್ಮಂ ತಾವೆ ಬಯ್ದುಕೊಂಡರದಱಂ ಮಹಾತ್ಮರಪ್ಪರ್‌-ವಿಚಾರಿಗಳಾಗದೆ ವಿಚಾರಿಸಿ ನೆಗಟ್ವುದೆಂಬುದಂ ಜಿನದತ್ತಸೆಟ್ಟಿ ಮತ್ತಂ ಮನದ ಸಂಶಯಂ ಪೋಗದೆ ಮೋಹವಶದಿಂ ಮುನೀಂದ್ರನ ಮಾತಂ ಕೈಕೊಳ್ಳದೆ ಧನದೆಱಕದಿಂದಿನ್ನುಪಾಯದಿನೆನ್ನ ಪೊನ್ನಂ ಕೊಳ್ವೆನೆಂದು ಮತ್ತೊಂದು ಕಥೆಯುಂ ಪೇಟ್ದಂ

ಜಿನಪಾಲಿತಮುನಿಪತಿ ಮೇ
ದಿನಿವಂದಿತ ಕಥೆಯನೊಂದನವಧಾರಿಸಿ ಕೇ

ಳನಘ ಮನಮೊಲ್ದು ಕಾಮುಕ
ವನಮೆಂಬುದು ದುರ್ಗಮುಂಟು ಕೇಳ್ ತದ್ವನದೊಳ್ ೩೯

ಪಿರಿದಪ್ಪ ಪುರಾಣಕೂಪಮುಂಟಾ ಕೂಪದೊಳ್

ಗರಧರನುಂ ಪುಲಿಯುಂ ವಾ
ನರನುಂ ಬಿಡವಕ್ಕಸಾಲೆಯುಂ ಬಿರ್ದಿರೆ ಭೂ
ಸುರನೊರ್ವಂ ಗಂಗೆಗೆ ಸ
ಚ್ಚರಿತಂ ಪೋಗುತ್ತುಮಿರ್ದು ಕೌಶಿಕನೆಂಬಂ ೪೦

ನೀರಡಸಿ ತತ್ಕೂಪದೆಡೆಯಂ ವನಚರರಿಂದಱಿದು ಬಾವಿಯ ತಡಿಯೊಳ್ ನಿಂದು ತನ್ನಟ್ಟುಂಬ ಮಡಕೆಯ ಕೊರಲೊಳ್ ಬಳ್ಳಿಯಂ ಕಟ್ಟಿ ನೀರಂ ಸೇದಲೆಂದು ಬಾವಿಯೊಳಗಿಕ್ಕುವುದುಂ

ತಡೆಯದೆ ಸೇದೆಯ ನೇಣಂ
ಪಿಡಿದಿರೆ ಪುಲಿ ತೋಯಮೆಂದು ತದ್ವಿಪ್ರಂ ನೇ
ರ್ಪಡೆ ಪೆರ್ಚಿ ತೆಗೆಯೆ ಪುಲಿ ಬಂ
ದೊಡೆ ಭಯದಿಂ ನೋಡುತಿರ್ಪುದುಂ ತದ್ವ್ಯಾಘ್ರಂ ೪೧

ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂ ಪ್ರಾಣಭಯಂ ಪಿಂಗಿದುದೆನ್ನಂ ಬೆಸಕೆಯ್ಸಿ ಕೊಳ್ವುದೆಂದು ತನ್ನ ನೆಲೆಗೆ ಪೋಯ್ತಿತ್ತಲ್

ನೀರಟ್ಟೆ ಪೆರ್ಚಿ ವಿಪ್ರನು
ದಾರಂ ಮತ್ತಿಕ್ಕೆ ಬಾವಿಯೊಳ್ ಸೇದೆಯನಂ
ತೋರಂತೆ ಪಾವು ಪಿಡಿದಿರೆ
ವೀರಂ ನೀರೆಂದು ತೆಗೆವುದುಂ ತತ್ಕ್ಷಣದಿಂ ೪೨

ಪಾವು ಬಂದೊಡೆ ಪಾವಂ ನೋಡಿ ಬೆಱಗಾಗಿರ್ಪುದುಂ ಫಣಿಪತಿ ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂದೊಂದು ಕಂಟಕಂ ಪೋಯ್ತೆಂದು ನಿಮ್ಮ ಮಾಡಿದುಪಕಾರಮನೆಂದಿಂಗಂ ಮಱೆಯಲ್ ಬಾರದು ನಿಮಗೊಂದೇನಾನುಮಾಪತ್ತಾದೊಡೆ ಮಱೆಯದೆ ನೆನೆವುದೆಂದು ತನ್ನಿರ್ಪಾವಾಸಕ್ಕೆ ಪೋಯ್ತನ್ನೆಗಂ

ಪಿರಿದಪ್ಪ ತೃಷ್ಣೆಯಿಂ ಭೂ
ಸುರನಾಗಳೆ ಮತ್ತೆ ಸೇದೆಯಂ ಭಾವಿಯೊಳೊ
ಪ್ಪಿರೆ ಬೇಗಮಿಕ್ಕೆ ನೇಣಂ
ತ್ವರಿತಂ ಭಯದಿಂದೆ ಪಿಡಿಯೆ ವಾನರನಾಗಳ್ ೪೩

ನೀರೆಂದು ತೆಗೆವುದುಂ ಕೋಡಗಂ ಪೊಱಮಡೆ ಕೌಶಿಕಂ ಬೆಱಗಾಗಿರ್ಪುದುಂ ಮರ್ಕಟಂ ದ್ವಿಜಂಗೆ ವಿನತನಾಗಿ ನಿನ್ನ ಧರ್ಮದಿಂದೊಂದು ಸೂೞಿನಗೆ ಬಂದಪಮೃತ್ಯು ಪಿಂಗಿಪೋಯ್ತು ನಿನಗಾನೇನಂ ಮಾಡಿದೊಡಂ ಮಾಟಮಲ್ಲೆನ್ನಿರ್ಕೆಯುಮಿಾ ಕಾಮುಕವನಮೆ ನಿನ್ನ ಚಿತ್ತದೊಳವಧರಿಸಿ ಕಾರುಣ್ಯದಿಂದೊಂದವಸರದೊಳ್ ನೆನೆವುದೆಂದು ನಿಜಸ್ಥಾನಕ್ಕೆ ಪೋಪುದುಂ

ಅಡಹಡಿಸಿ ತೃಷ್ಣೆಯಿಂದಾ
ಗಡೆ ವಿಪ್ರಂ ಬಾವಿಯೊಳಗೆ ಸೇದೆಯನಿಕ್ಕಲ್
ಕಡುಭಯದಿಂದಂ ಮನದೊಳ್
ನಡುಗುತ್ತಿರ್ಪಕ್ಕಸಾಲಿ ಸೇದೆಯ ನೇಣಂ ೪೪

ಪಿಡಿವುದುಂ ನೀರೆಂದು ಪೊಱಗಣ್ಗೆ ತೆಗೆಯೆ ಸ್ವರ್ಣಕಾರಕಂ ಬರೆ ಕೌಶಿಕಂ ನೋಡಿ ಚೋದ್ಯಂಬಟ್ಟಿರ್ಪುದುಮಕ್ಕಸಾಲಿ ವಿಪ್ರಂಗೆ ಪೊಡೆಮಟ್ಟು

ನೀನಿತ್ತ ಜೀವಮಿದು ಧರ
ಣೀನುತ ನೀನಿಲ್ಲದಂದು ಸಾವದು ಪುಸಿಯೇ

ಕಾನನದೊಳಿಲ್ಲಿ ನಿಮಗಾ
ನೇನಂ ಮಾಡುವೆನೊ ಮಾಡದಿರ್ದೊಡೆ ಕಷ್ಟಂ ೪೫

ಈ ನೆಗಟ್ದ್ದವನದ ಪೊರೆಯೊಳ್
ತಾನಗ್ಗದ ತಾಮ್ರಕೂಟಮೆಂಬುದು ಪೊಟಿಲಂ
ತಾ ನಗರದೊಳಾನಿರ್ಪೆಂ
ನೀನಲ್ಲಿಗೆ ಬರ್ಪುದೆಂದು ಕೈಮುಗಿದಾತಂ ೪೬

ಪ್ರಾರ್ಥಿಸುವುದುಂ ಮಗುಟ್ದ್ದು ಬರ್ಪಾಗಳ್ ನಿನ್ನಲ್ಲಿಗೆ ಬಂದಲ್ಲದೆನ್ನ ನೆಲೆಗೆ ಪೋಗೆನೆಂದಕ್ಕಸಾಲೆಯನೊಡಂಬಡಿಸುವುದುಮಾತನೊಡಂಬಟ್ಟು ತನ್ನ ಪುರಕ್ಕೆ ಪೋದನಿತ್ತಲ್ ಕೌಶಿಕಂ ತನ್ನಿಷ್ಟಸ್ಥಾನಕ್ಕೆ ಪೋಗಿ ಕೆಲವು ದಿವಸಕ್ಕೆ ಮಗುಟ್ದ್ದು ಬರುತುಂ ಕಾಮುಕವನಕ್ಕೆ ಬಂದು ಕೋಡಗನಿರ್ದಲ್ಲಿಗೆವರ್ಪುದುಂ ವಾನರನಾ ನರನನಱಿದು ಮುನ್ನಿನುಪಕಾರಮುಂ ನೆನೆದು ಪಣ್ಪಲಂಗಳಂ ತಂದಿಕ್ಕುವುದುಂ ಪಸಿವು ಪೋಸಿನಂ ಮೆಲ್ದು ಪಥಪರಿಶ್ರಮುಮಂ ಕಳೆದು

ಪುಲಿಯಿರ್ಪ ಗುಹೆಗೆ ಬರ್ಪುದು
ಮಲಂಘ್ಯಗುಣನೆನ್ನನೆತ್ತಿದಾತಂ ಬಂದಂ
ಫಲಮಿತ್ತುದೆನ್ನ ಪುಣ್ಯಂ
ಕುಲ ಸಫಲಮುಮೆಂದು ಪೆರ್ಚಿ ಪುಲಿ ಬಂದಿದಿರಂ ೪೭

ಅಂದು ಪೊಡೆಮಟ್ಟು ಪರಮಾ
ನಂದದಿನಟ್ಕಿತ್ತುರ್ ತಂದು ರತ್ನದ ತೊಡವಂ
ಮುಂದಿಡೆ ತದ್ವಿಪ್ರನುಮಾ
ನಂದದಿನವನರ್ತಿವೆರಸು ಕೊಂಡಾ ವನದಿಂ ೪೮

ಪೊಱಮಟ್ಟು ತಾಮ್ರಕೂಟಕ್ಕೆ ಬಂದು ಸ್ವರ್ಣಕಾರನ ಮನೆಗೆ ಬರ್ಪುದುಂ ಪೂರ್ವೋಪಕಾರಮಂ ನೆನೆದಿದಿರಂ ಪರಿತಂದು ಪೊಡೆಮಟ್ಟಭ್ಯಾಗತ ಪ್ರತಿಪತ್ತಿ

ಯಂ ಮಾಡಿ ಬಟ್ಟೆಯು ಬಟಲ್ಕೆಯುಂ ಕಳೆದು ಕೌಶಿಕನಂ ಕೊಂಡಾಡುತಿರ್ಪುದುಂ ಮಱುದಿವಸಂ ಬೃಹಸ್ಪತಿರವಿಶ್ವಾಸಂ ಎಂಬೀ ನೀತಿಯುಂ ಮಱೆದು ಚಮೂರನಿತ್ತ ಪೊನ್ನಾಭರಣಗಳೆಲ್ಲಮುಂ ಗಟ್ಟಿಮಾಡಿ ಕುಡುವುದೆಂದೇಕಾಂತದೊಳಕ್ಕಸಾಲೆಯ ಕೈಯೊಳ್ ಕುಡುವುದುಮಾತನಂತೆ ಗೆಯ್ವೆನೆಂದು

ಮನದೊಳ್ ಭಾವಿಸಿ ನೋಡಿ ನೋಡಿ ಪಿರಿದಪ್ಪೀ ದ್ರವ್ಯಮುಂ ಸಾರ್ಚಿ ಮೇ
ದಿನಿ ಕಾಂತಾಪತಿಯಲ್ಲಿ ಮೆಚ್ಚುಗೊಳುವೆಂ ನಿಷ್ಕಾರಣಂ ಕೊಟ್ಟು ಕೆ
ಮ್ಮನೆ ವಿಪ್ರೋನ್ನತನಲ್ಲಿ ಬರ್ಪ ಪಡಪೇನೆಂದಾ ದುರಾತ್ಮಂ ಮಹೀ
ಶನನಾನಂದದಿನೆಯ್ದೆ ಪೇೞ್ದೊಡರಸಂ ಕೇಳ್ದಾಗಳುತ್ಸಾಹದಿಂ ೪೯

ತಳಾಱನಂ ಕರೆದು ನೀನೀ ಸ್ವರ್ಣಕಾರಕಂ ತೋಱಿದ ಪಾರ್ವನಂ ಸೆಱೆಯಿಡೆಂಬುದುಂ ತಳಾಱನಕ್ಕಸಾಲೆಯೊಡನೆ ಪೋಗಿ ಕೌಶಿಕನಂ ಪಿಡಿತಂದು ಕೋಳದೊಳಿಕ್ಕುವುದುಂ ಕೌಶಿಕಂ ಬೆಱಗಾಗಿ

ಎನಗರ್ಥಮುಳ್ಳುದಂ ಮೇ
ದಿನಿಪತಿಯೆಂತಱಿವನೀ ದುರಾತ್ಮನೆ ಪೇೞ್ದಂ
ಧನಮುಂಟೆಂಬುದನೀ ದು
ದುರ್ಜನನಿಂ ಕೇಡಾದುದೆಂದು ಚಿಂತಿಸಿ ವಿಪ್ರಂ ೫೦

ಫಣಿಪತಿಯುಂ ನೆನೆವುದುಮಾ
ಫಣಿಪತಿ ಬಂದೇಕೆ ನೆನೆದಿರೆಂಬುದುಮಾ ಧಾ
ರಿಣಿದೇವನೆಂದನೀ ನಿ
ರ್ಘೃಣನಿಂದೆನಗಾದ ದುಃಖಮುಂ ತತ್ಕ್ಷಣದಿಂ ೫೧

ಪಿಂಗಿಸುವುದೆಂಬುದುಂ ತದ್ರಾಜಸುತನಂ ಕೊಂಡು ಆರ್ಗಮಱಿಯದಿರೆ ಕೌಶಿಕಂ ನಿರ್ವಿಷಂಮಾಡಿ ಮೆಚ್ಚುಗೊಂಡು ತದ್ವೃತ್ತಾಂತಮೆಲ್ಲಮನರಸಂಗೆ ಪೇೞೆ ಮಹೀನಾಥಂ ಚೋದ್ಯಂಬಟ್ಟು ಮುನಿದು ಅಕ್ಕಸಾಲೆಯುಂ ವಿಶ್ವಾಸ

ಘಾತಕನಿವನಂ ಕವರ್ದೊಡೆ ದೋಷಮಿಲ್ಲೆಂದು ಕವರ್ದುಕೊಂಡನಂತೆ ಕೆಲ ರುಪಕಾರಶೂನ್ಯರೊಳರೆಂದು ಜಿನದತ್ತಸೆಟ್ಟಿ ನುಡಿದುಸಿರದಿರ್ಪುದುಂ ಜಿನಪಾಲಿತ ಮುನಿ ವಿಸ್ಮಯಂಬಟ್ಟು ಸೆಟ್ಟಿಯ ಮುಖಮುಂ ನೋಡಿ

ಅವಧರಿಸು ವೈಶ್ಯವಂಶ
ಪ್ರವರ ಮಹಾಚೋದ್ಯಮಪ್ಪ ಕಥೆಯನಿದಂ ಭೂ
ಭುವನಕ್ಕೆ ರೂಢಿವೆತ್ತಿ
ರ್ದವಂತಿಯೆಂಬೊಂದು ನಾಡು ತದ್ಧಾರಿಣಿಯೊಳ್ ೫೨

ಉಜ್ಜೈನಿಯೆಂಬುದು ಪುರಮದನಾಳ್ವಂ ಮಹೇಂದ್ರನೆಂಬರಸನಾತನ ರಾಜ ಶ್ರೇಷ್ಠಿ ಕುಬೇರನೆಂಬನಾ ಪರದನೊರ್ವಂ ಜಲಯಾತ್ರೆಗೆ ಪೋಗಿ ಪಿರಿದಪ್ಪರ್ಥ ಲಾಭನಾಗಿರ್ಪುದುವೊರ್ವನೊಂದು ಮಾವಿನ ಪಣ್ಣಂ ತಂದು ಕುಬೇರನಂ ಕಂಡು ಅಪೂರ್ವಮಪ್ಪ ಮಾವಿನ ಪಣ್ಣಿದಂ ಮೆಲ್ವೊಡೆ ಸಕಲರುಜೆಗಳುಂ ಕಿಡುಗುಮಿದಱ ಪೆಸರುಂ ಸರ್ವರುಜಾಪಹಾರಿಯೆಂಬುದೆಂದು ಕುಡುವುದುಂ, ಸೆಟ್ಟಿಯಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಸಂತೋಷಂಬಡಿಸಿ ಕಳಿಪೆ ಮಾವಿನ ಪಣ್ಣಂ ನೋಡಿ

ಇದನಿಲ್ಲಿ ಮೆಲ್ದು ಕಿಡಿಸದೆ
ಪದುಳಂ ಕೊಂಡೊಯ್ದು ಮಾಳವೇಶಂಗಿತ್ತ
ಭ್ಯುದಯ ಶ್ರೀಯಂ ಪಡೆವೆಂ
ಮುದದಿಂದಾನೆಂದು ಮೆಲ್ಲದಂತಾ ಪಣ್ಣಂ ೫೩

ಪ್ರಯತ್ನದಿಂ ತಂದುಜ್ಜೈನಿಯಂ ಪೊಕ್ಕು

ತೊಳಗುವ ವಸ್ತುಗಳಂ ಪರಿ
ಯಳದೊಳ್ ಲೇಸಾಗಿ ತೀವಿ ಮಾವಿನ ಪಣ್ಣಂ

ಬೆಳಗುವ ರತ್ನದ ಮೇಲು
ಜ್ಜ್ವಳಕೀರ್ತಿ ಪತಾಕನಿಟ್ಟು ತಂದವನಿಪನಂ ೫೪

ಕಂಡು ಪೊಡೆಮಟ್ಟು ರತ್ನದಿಂ ತೀವಿದ ಪರಿಯಣಮಂ ಭೂಪಾಲನ ಮುಂದಿ ಡುವುದುಂ

ಅರಸಂ ಮಾವಿನ ಪಣ್ಣಂ
ಕರಮಾದರದಿಂದೆ ಕಳೆಗುಕೊಂಡೆಂದಂ ಭೂ
ಧರಧೈರ್ಯ! ಚೂತಫಲಮಿದು
ಧರಣೀಚಕ್ರದೊಳಪೂರ್ವಮಾದುದೆ ಮರುಳೇ ೫೫

ಅಮೂಲ್ಯಮಪ್ಪ ವಸ್ತುಗಳನೇಕಾರಣದಿಂ ತಂದಿರೆಂಬುದುಂ ಕುಬೇರ ನಿಂತೆಂದಂ

ನರೆ ಬಂದ ನರರ್ ಮೆಲ್ದಿರೆ
ತರುಣತ್ವಮನೆಯ್ದುವರ್ ಮಹಾವ್ಯಾಧಿಗಳಿಂ
ಕರಗುವರ್ ಮೆಲ್ದೊಡೆ ನಿ
ರ್ಜರಸನ್ನಿಭರಪ್ಪರೆಂದು ಪೇೞ್ವುದುಮರಸಂ ೫೬

ವಿಸ್ಮಯಂಬಟ್ಟು ಕುಬೇರಂಗೆ ಮೆಚ್ಚಂ ಕೊಟ್ಟು ಮನೆಗೆ ಕಳಿಪಿ ಮಾವಿನ ಪಣ್ಣಂ ಭಾವಿಸಿ ನೋಡಿ

ಮಱೆಯುಂ ಸಿಂಧುನಿಕಾಯಮುಂ ಪಶುಗಳುಂ ವೈದ್ಯಾಂಗನಾನೀಕಮುಂ
ಬೆಳಸುಂ ಪಣ್ಪಲಮುಂ ಜಿನೇಂದ್ರಮತಮುಂ ಸರ್ವೋಪಕಾರಂಗಳಂ
ತಿಳಿಯೊಳ್ ಸದ್ಗುಣನಪ್ಪ ಮಾನಿಸನುಮಿನ್ನಾ ಮಾರ್ಗದಿಂ ಬಾೞ್ಗೆ ತ
ನ್ನಳವಂ ಮಾಸಿಸಿ ಲೋಗರಂ ಕಿಡಿಸುತಿರ್ಪಾ ಕಷ್ಟನುಂ ಮರ್ತ್ಯನೇ ೫೭

ಅದು ಕಾರಣದಿಂ ಪರೋಪಕಾರಿಯಪ್ಪನ ಬಾೞ್ಕೆ ಸಫಲಮೆಂದು ಪಣ್ಣ ನೊರ್ವನೆ ಮೆಲ್ಪುದು ಕಷ್ಟಂ ಪುರಮುಂ ಪರಿವಾರಮುಮರಸಿಯರುಂ ಕುಮಾರ

ರುಂಬೆರಸು ಮೆಲ್ಪೆನೆಂದು ಪಣ್ಣನರಮನೆಯ ಪೆಱಗಣ ನಂದನವನದೊಳ್ ಬಿತ್ತಿಸುವುದುಮದು ಬೆಳೆದು ಪೆರ್ಮರನಾಗಿ ಫಲಮುಪ್ಪುದುಂ

ಉರಗನನೊಂದು ಪರ್ದು ಪಿಡಿದಾ ಮರನಂ ಪರಿದೇಱಿ ತದ್ವಿಷಂ
ತ್ವರಿತದಿನಾಗಳೊಂದು ಫಲದೊಳ್ ನೆಲೆಗೊಳ್ವುದುಮಾ ಫಲಂ ಸವಿ
ಸ್ತರದೊಳೆ ಪಣ್ತು ಬೀೞೆ ವನಪಾಲಕನಂತದನೊಯ್ದು ಕೊಟ್ಟೊಡಂ
ದರಸನುಮರ್ತಿಯಿಂ ಕೆಲದೊಳಿರ್ದ ಮಗಂಗಿರದೀವುದುಂ ಮಗಂ ೫೮

ಮೆಲ್ದು ವಿಷಪೂರಿತನಾಗಿ ಸಾವುದುಂ ಮಹೇಂದ್ರಭೂಮೀಶ್ವರಂ ಮಗನ ಸಾವಿಂಗೞಲ್ದು ವಿಷವೃಕ್ಷಮದಂ ಕಡಿದು ಕಳೆಯಿಮೆಂದು ಕಱದೀಡಾಡಿಸಿ ಕುಬೇರನಂ ನಾಯೆ ಬಡಿಸಿ ಸರ್ವಸ್ವಮುಂ ಕವರ್ದು ಕೊಂಡನೆನ್ನೆಗಂ ಪುರದೊಳಗಣ ತೊನ್ನರುಂ ಪೆಳವರುಂ ಕುಂಟರುಂ ಕುರುಡರುಂ ಪರಿತಂದು ಸಾವೆವೆಂದು ಪಣ್ಣುಮಂ ಕಾಯುಮಂ ತಿಂದು ಸುವರ್ಣಮಯ ಶರೀರರಪ್ಪುದುಮರಸನವರಂ ಕಂಡು ವಿಸ್ಮಯಂಬಟ್ಟು ಮಱುಗಿ ಕುಬೇರನರ್ಥಮುಂ ಕೊಟ್ಟು ಕ್ಷಮೆಗೊಂಡು ಮಾವಿನ ಮರನಂ ಪಾತಕನೆಂ ವಿಚಾರಿಸದೆ ಕಡಿಸಿದೆನೆಂದು ಚಿಂತಿಸಿದನಂತೆ ಕೆಲರವಿಚಾರತೆಯಂ ಮಾಡುವರದಱಿಂ ಸಜ್ಜನರ್ ಪುರುಷರ್ ವಿಚಾರಿಸಿ ನೆಗಳ್ವುದೆಂದು ಜಿನಪಾಲಿತಮುನಿ ಪೋಸಂಗೊಂಡಿರ್ಪುದುಂ ಮನಮುಂ ಪಿಡಿಯಲಾಱದೆ ಜಿನದತ್ತಂ

ವಂದಿತಗುಣ ಪಲವೇಕಿ
ನ್ನೊಂದನೆ ಕೇಳ್ಕಥೆಯನತ್ಯಪೂರ್ವಮಿದಂ ನಾ
ನಂದಗಿರಿಯೆಂಬ ಪುರದೊಳ್
ಸಂದಿರ್ದ ಪುಳಿಂದನಮಿತನೆಂಬಂ ಪೆಸರಿಂ ೫೯

ಆತನೊಂದು ದಿವಸಂ ತೊೞಲುತ್ತುಂ ಪೈತ್ಯವನಮೆಂಬಡವಿಯೊಳ್ ನೀರಡಿಸಿ ಪೋಗಲಾಱದೆ ಕುಳ್ಳಿರ್ದುದುಮವನನೊಂದು ಕೋಡಗಂ ಕಂಡು

ಕರುಣಿಸಿ ನೀರೆಡೆಯಂ ವಾ
ನರನಾಥಂ ತೋಱಿ ಕುಡಿದು ಬೇಡಂ ತದ್ವಾ
ನರನೆನಗುಪಕಾರಮನೊ
ಪ್ಪಿರೆ ಮಾಡಿದನೆಂಬ ಬಗೆಯನುೞಿದಳಿಪಿಂದಂ ೬೦

ಎನ್ನ ಪೋಪೆಡೆಯೊಪ್ಪೊಡೆ ದೂರಮೀ ನೀರಿರ್ದೆಡೆಯೊಳ್ ನೀರಂ ತುಂಬು ವೆಂ ನೀರಿಲ್ಲದೆ ತೃಷ್ಣೆಯಿಂ ಸಾಯೆಬಾರದೆಂದು ಕೋಡಗನುಂ ಕೊಂದದಱ ತೊವಲೊಳ್ ನೀರಂ ತುಂಬಿಕೊಂಡು ಪೋದನಂತೆ ಕೆಲರುಪಕಾರಶೂನ್ಯರೊಳ ರೆಂದು ವಣಿಕ್ಪತಿ ನುಡಿಯದಿರ್ಪುದುಂ ಮುನಿವೃಂದಾರಕಂ ನಾಡೆಯುಂ ವಿಸ್ಮಯಂಬಟ್ಟು

ವರವೈಶ್ಯೋತ್ತಮ ಕೇಳು
ರ್ವರೆಯೊಳಿದಾಶ್ಚರ್ಯಮಪ್ಪ ಕಥೆಯಂ ನೀನಾ
ದರದಿಂ ಧಾತ್ರಿಯೊಪ್ಪುವ
ದುರು ಮುದದಿಂ ಧನದರೆನಿಪ ವೈಶ್ಯಾತ್ಮಜರಿಂ ೬೧

ಕೌಶಾಂಬಿಯೆಂಬ ಪುರಮದಱೊಳ್ ವಿಶಾಖನಂದನನೆಂಬ ಪರದನಿರ್ಪ ನಾತನ ಮಗನಂಗಾರಕನೆಂಬನಾತನೊಂದು ದಿವಸಮೊಂದು ಪದ್ಮರಾಗಮಂ ಬೞಿವಿಡಿದು ಪೊಱಗೆ ಪಟ್ಟವಣೆಯ ಮೇಗೆ ದಿವ್ಯವಸ್ತ್ರಮಂ ಪಾಸಿ ತದ್ವಸ್ತ್ರದ ಮೇಲೆ ತದ್ರತ್ನಮನಿಕ್ಕಿ ನೋಡುತ್ತುಮಿರ್ಪನ್ನೆಗಂ

ತ್ವರಿತಂ ಮೇಧಾವಿಮುನೀ
ಶ್ವರರೆಂಬರ್ ಚರಿಗೆವರ್ಪುದುಂ ವೈಶ್ಯಕುಲಾಂ
ಬರಭಾನು ಕಂಡು ಪರಮಾ
ದರದಿಂ ಪರಿತಂದು ಭಕ್ತಿಯಿಂ ನಿಲಿಸುವುದುಂ ೬೨

ಮುನಿನಾಥಂ ನಿಲ್ವುದುಂ ಕೃತಾರ್ಥನಾದೆನೆಂದು ಮನೆಯೊಳಗಣ್ಗೊಡ

ಗೊಂಡು ಪೋದನನ್ನೆಗಮಿತ್ತಲ್ ಪದ್ಮರಾಗಮಾಣಿಕ್ಯಮಂ ನೆರೆಮನೆಯಂಗಣದೊಳಾಡುತ್ತುಮಿರ್ದ ನವಿಲ್ ಕಂಡು ಮಾಂಸಮೆಂದು ಬಗೆದು ಪರಿತಂದು ನುಂಗಿಪೋಯ್ತು ; ವಿಶಾಖನಂದನಂ

ನವವಿಧ ಪುಣ್ಯದಿಂ ಕುಡುವುದುಂ ಮುನಿಗನ್ನಮನೆಂದು ತನ್ಮುನಿ
ಪ್ರವರನುದಾತ್ತಚಾರುಚರಿತಂ ಬಟುಕಕ್ಷಯದಾನಮೆಂದು ಭೂ
ಭುವನಹಿತಂ ಸಮಸ್ತನುತನಾಗಳೆ ಪೋಪುದುಮಿತ್ತಲಾ ವಣಿ
ಕ್ಪ್ರವರನಮರ್ಕೆವೆತ್ತು ಬರಲಲ್ಲಿಗೆ ರಾಗಿಸಿ ಬಂದು ರತ್ನಮಂ ೬೩

ಕಾಣದೆ ಮಱುಗಿ ಲೋಭಿಯೆ ಕಡುಪಾಪಿ ತುಡುಗುಣಿಯೆ ಕಡುದೂರ್ತನೆಂಬ ಮಾತಂ ದಿಟಂಮಾಡಿ ಮೇಧಾವಿಮುನೀಂದ್ರನೆ ರತ್ನಮಂ ಕೊಂಡು ಪೋದನೆಂದು ಪೆಱಗೆ ಪರಿತಂದು ಕೃತಕದಿಂ ಪೊಡೆಮಟ್ಟು ಮನೆಗೊಡಗೊಂಡು ಬಂದು ಕುಳ್ಳಿರಿಸಿ ನಿಮ್ಮಡಿಗಳ್ ಸಕಲವಸ್ತುವಂ ತೊಱೆದುಂ ನಿಮಗೆ ಮತ್ತೀರತ್ನದ ಮೋಹಮೇಕೆ ಕಾಡವೇಡ ಬೇಗಮೆನ್ನ ಪದ್ಮಪರಾಗದ ಮಣಿಯನೀಯಿಮೆಂದು ಗಜಱಿ ಗರ್ಜಿಸಿ

ನುಡಿದೊಡೆ ಮುನೀಂದ್ರವಂದ್ಯಂ
ಕಡುಮೂರ್ಖನ ನುಡಿಗೆ ನಾಡೆಯುಂ ಚೋದ್ಯಂಬ
ಟ್ಟೊಡಮೆಯನೀತಂ ಕಾಣದೆ
ಕಿಡೆ ನುಡಿದವಿಚಾರಿ ಕಳ್ಳನೆಂದಪನೆನ್ನಂ ೬೪

ಆ ಪದ್ಮರಾಗಮಣಿಯಂ
ಕೋಪಿಸದಿರ್ ಕೊಳ್ಳೆನೆಂದೊಡಂ ನಂಬದ ದು
ಷ್ಪಾಪಿ ಫಲಮೇವುದಿವಗಿ
ನ್ನೀ ಪದದೊಳ್ ಮೋನದಿಂದಮಿರ್ಪುದೆ ಕಜ್ಜಂ ೬೫

ಎಂದು ಪರಿಚ್ಛೇದಿಸಿ ಪೆಱ
ತೋಂದುಮನಾ ಮುನಿಪನೆನ್ನದರ್ಹತ್ಪದಮಂ
ಮಂದರ ಧೈರ್ಯ೦ ತದ್ಧೃದ
ಯೇಂದೀವರದಲ್ಲಿ ತಾಳ್ದಿ ನಿಲ್ವುದುಮಿತ್ತಲ್ ೬೬

ನುಡಿದೊಡೆ ನೀನಿಂತಿರ್ದೊಡೆ
ಕೆಡೆನೂಂಕಿ ಪೊರಟ್ಟಿ ಗಂಟಲಂ ಮೆಟ್ಟಿ ಕರಂ
ತಡೆಗೆಡಹಿ ತನುವ ಜಡಿದೆ
ನ್ನೊಡಮೆಯನುಗುೞಿಸದೆ ಮಾಣೆನಾರ್ಬಾರಿಪೊಡಂ ೬೭

ಎಂದು ನುಡಿದು ವೈಶ್ಯಜಂ ಮುನಿಕುಂಜರನಂ ನುಡಿಯಿಸಲಾಱದೆ ಕೋಪಾಗ್ನಿಯಿಂ ಕಣ್ಗಾಣದೆ ಕೆಲದೊಳಿರ್ದ ಬಂಡಿಯ ಪುಳ್ಳಿಗಳಂ ಕೊಂಡು ಸೊಪ್ಪುಸೊವಡಪ್ಪಿನಮಟ್ಟಿ ಬಡಿಯೆ

ಎನ್ನನಮೋಷಿಯಂ ಬಡಿದಪಂ ಖಳನೆನ್ನದೆ ಶುದ್ಧವೃತ್ತಿಯಿಂ
ದುನ್ನತ ಚಿತ್ತನಿಂದ್ರಧರಣೀಂದ್ರ ನಿಭಕ್ಷಮನಾಃ ಮಾನ್ವಿತಂ
ತನ್ನ ಶರೀರಮಲ್ಲದಿದು ತಾಂ ಪೆಱತೇಂ ಪೆಱರಂಗಮೆಂಬವೋಲ್
ಸನ್ನುತನಿರ್ದನಂತರದಃರೋಘವಿರೋಧಿಯನಿಕ್ಕಿ ಮೆಟ್ಟುತುಂ ೬೮

ಅಂತು ವೈಶ್ಯಜಂ ತನುವಂ ಬಾಧಿಸುವುದುಂ ಮೇಧಾವಿಮುನಿವರರ್ ಮೇಧಾವಿಯೆಂಬ ಪೆಸರನನ್ವರ್ಥಂಮಾಡಿ ಶುಕ್ರಧ್ಯಾನಮೆಂಬ ದಳ್ಳುರಿಯಿಂ ಕರ್ಮೇಂಧನಂಗಳಂ ಸುಟ್ಟು ಕೇವಲಿಗಳಾಗಿ ಕೋಟಿಸೂರ್ಯಪ್ರಭಾನ್ವಿತ ದೇಹರಾಗಿರ್ಪುದುಂ ಕೇವಲಿ ಪೂಜೆಯಂ ಮಾಡಲೆಂದು ಚತುರ್ವಿಧದೇವನಿಕಾಯಂ ನೆರೆದು ಬರೆ ಕಂಡಂಗಾರಕಂ ನೀರ್ಮುಟ್ಟಿದಂಗಾರಕನಂತೆ ತಣ್ಣಿದನಾಗಿರ್ಪುದುಂ

ಬಡಿವಲ್ಲಿ ನಿಡಿಯ ಪುಳ್ಳಿಯ
ಕಡೆಯುಡಿ ಸಿಡಿಲ್ದು ಪಾಱಿ ಕೊಂಚೆಯ ಕೊರಲಂ
ನಡುವುದು ಕೊರಲೊಡೆದಂತಾ
ಗಡೆ ರತ್ನಂ ಧರೆಗೆಬೀೞ್ವುದುಂ ತನ್ಮಣಿಯುಂ ೬೯

ಕಂಡಂಗಾರಕನೀ ಮುನಿ
ಮುಂಡನನಂ ನಿಷ್ಕಷಾಯನಂ ಮನದಟಿಲಿಂ
ಕೊಂಡಂ ರತ್ನಮನೆಂದಾಂ
ದಂಡಿಸಿದೆಂ ಪಾಪಕರ್ಮನೆಂ ನಿರ್ದಯನೆಂ ೭೦

ಎಂದಾಗಳ್ ತನ್ನಂ ತಾಂ
ನಿಂದಿಸಿ ವೈರಾಗ್ಯವೊದವೆ ಮನದೊಳ್ ಬೇಗಂ
ಕಂದರ್ಪಸರ್ಪಶನಮುರರ
ವೃಂದಂ ಕೈಮುಗಿಯೆ ಜೈನದೀಕ್ಷೆಯನಾಂತಂ ೭೧

ಅಂತಜ್ಞಾನಿಯಾಗಿ . ಕಳ್ಳರಲ್ಲದರಂ ಕಳ್ಳರೆಂದು ತನ್ನರ್ಥಾಭಿಲಾಷೆಯಿಂ ಬಱಿದೆ ಕಾಡುವುದು ಪುರುಷನಪ್ಪಂಗೆ ಧರ್ಮಮಲ್ಲಪೆಂಬುದಂ ವಣಿಜ್ಞಂದನಂ ಮತ್ತಂ ನಂಬದೆ ಬೆನ್ನನೆ ತಗುೞ್ವುದುಂ

ಜಿನಪಾಲಿತಮುನಿ ಪರದನ
ಮುನಿಸಂ ಕಂಡೀತನಪ್ಪೊಡತಿಲೋಭಂ ದು
ರ್ಜನನೆನ್ನ ಮೇಲೆ ಪರಿದಪ
ನನಘರಿವರ್ಶುದ್ಧರೆಂಬ ಮಾತನೆ ಬಿಟ್ಟಂ ೭೨

ಕೆಮ್ಮನೆ ಬಾಯಂ ಬಡಿವುದು ಕಜ್ಜಮಲ್ಲೆಂದು ಘೋರೋಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದು ಕೈಯನಿಕ್ಕಿ ಮೋನಂಗೊಂಡಿರೆ ಜಿನದತ್ತಸೆಟ್ಟಿ ನುಡಿಯಿಸಲಾಱದೆ ಮಾಸೆಯಂ ಕಡಿದು

ಕಡುಕೊಂಡೊಡಮೆಯನೀಗಳೆ
ಕಾಡದಿರ್ದೊಡೆ ಮುಟ್ಟೆವೆನಿಕ್ಕುೞೊಳ್ಕಯ್ಯಂ ಕೂ
ಗಿಡೆ ಕೊಯ್ದುಕೊಯ್ದು ಸುಣ್ಣಮ
ನಿಡುವೆಂ ಪಿಡಿದೊಯ್ದು ಮೆಟ್ಟುವೆಂ ಪೆರ್ಗೞಿಯೊಳ್ ೭೩

ಎಂದು ರೌದ್ರಾಟೋಪಮಂ ಪಣ್ಣಿ ನಿಗ್ರಹಂಗೆಯ್ಯಲೆಂದಿರ್ಪುದುಂ, ಒಳಗೆ ಪಡಿಯಂ ಪತ್ತಿರ್ದು ಕೇಳ್ದು

ಜಿನದಾಸಂ ನಕ್ಕು ತಮ್ಮಯ್ಯನ ಮನದ ಮಹಾದ್ವೇಷಮಂ ಕಂಡುಮೂರ್ಖಂ ಮುನಿವಂಗ್ಯಂಗುಗ್ರಕರ್ಮಾಂಬುರುಹರವಿಗೆ ಕೋಪಾಗ್ನಿಯಿಂ ಬಾಧೆಯಂ ಭೋಂ
ಕೆನೆ ತೀವ್ರಂ ಮಾಡದನ್ನಂ ಪೊಱಮಡುವೆನಿದಂ ಬೇಗದಿಂ ದ್ರವ್ಯಮಂ ದು
ರ್ವಿನಯಂಗಿತ್ತುಣ್ಮಿ ಲೋಕಂ ಪೊಗೞೆ ಪಲವುಮಾತೇವುದಾಂ ದೀಕ್ಷೆಗೊಳ್ವೆಂ

ಪೆಱತೇನೀ ಮುನಿಸಂ ಪೊಂ
ಗೆಱಗಂ ಪೊಂಗೆಱಗುವೊಂದು ಮನಮುಳ್ಳೊಡೆ ಮುಂ
ತೊಱೆವನೆ ಸಕಳಮನೆನ್ನದೆ
ನೆಱೆ ದಂಡಿಪನಿಂತು ಕಷ್ಟರಂ ಕಂಡಱಿಯೆಂ ೭೫

ಕಳ್ಳಸಿವನೆಂದೊಡನಿತಱಿಂ
ಕೊಲ್ಲರುಮಱಿಯೆಟ್ಟಿ ಪಿಡಿದು ನಾನಾವಿಧದಿಂ
ಕೊಲ್ಲದೆ ಮಾಣ್ಬರೆ ಕಳವಿಂ
ಪೊಲ್ಲಮೆ ಪೆಱತೊಳವೆ ಪಾಪದೆಟ್ಟಿರಮಲ್ತೇ ೭೬

ಎಂದು ಕಳವಿನ ಕಷ್ಟವೃತ್ತಿಯುಮಂ ದ್ರವ್ಯದೊಳಾದ ಸಂಕ್ಲೇಶಮುಮಂ ವಿಚಾರಿಸಿ ಸಂಸಾರಕ್ಕೆ ಪೇಸಿ ಪಡಿಯಂ ತೆಱೆಯಿಸಿ ಪೊಱಮಟ್ಟು ಮಹಾ ಪಾತಕಂ ಲೋಭದಿಂ ಮತಿಗೆಟ್ಟು ಸುಗತಿಯಂ ಕಿಡಿಸುವ ಕಜ್ಜಮನೆತ್ತಿಕೊಂಡು

ಗಣಧರರಪ್ಪಿವರಂ ಬಱಿದೆ ಸುತ್ತುತ್ತಿರ್ದಪೆ ಕೊಳ್ ನಿನ್ನ ಪೊನ್ನನೆಂದು ಪೊನ್ನಂ ತಂದೆರ್ದೆಯ ಮೇಲೀಡಾಡಿ ಮುನಿನಾಥಂಗೆ ಪೊಡೆಮಟ್ಟು ಮುಂದೆ ಸಿಂದಿರ್ದು

ದುರಿತಮದಗಂಧ ಸಿಂಧುರ
ಹರಿ ಚಾರುಚರಿತ್ರ ನಿರ್ವೃತಿ ಶ್ರೀಪತಿಯಂ
ಬರಿಸುವ ಜಿನೇಂದ್ರ ದೀಕ್ಷೆಯ
ನುರುಮುದದಿಂದೀವುದೆಂದು ಬೇಡುತೆ ಮುನಿಯಿಂ ೭೭

ಪರಮ ಶ್ರೀಯೊಳ್ ನೆರೆವುವ
ಗುರಿತಾರಿಯನಱಿವ ದೇವರಿಂ ಪೊಗಱಿಪ ಭಾ
ಸುರ ಜೈನದೀಕ್ಷೆಯಂ ಸ
ಚ್ಚರಿತಂ ಜಿನದಾಸನಾಕ್ಷಣಂ ಕೈಕೊಂಡಂ ೭೮

ಜಿನದಾಸಸೆಟ್ಟಿಯುಂ ವೈರಾಗ್ಯಂಪುಟ್ಟಿ ತನ್ನ ಮಾಡಿದ ಮಾಟಕ್ಕೆ ಕರ ಮಲ್ಲದೆ ನೊಂದೆನ್ನ ಪಾಪಮಿಂತಲ್ಲದೆ ಪೋಗದೆಂದು ತಾನುಂ ಜಿನದೀಕ್ಷೆಯಂ ಕೊಂಡು ತಪಂಗೆಯ್ದು ಸಂನ್ಯಸನ ವಿಧಿಯಿಂ ಮುಡಿಪಿ ಮಹರ್ಧಿಕದೇವನಾಗಿ ಪುಟ್ಟಿದಂ. ಜಿನದಾಸಮುನೀಂದ್ರನುಂ ಪಲಕಾಲಂ ತಪಂಗೆಯ್ದು ಸಮಾಧಿ ಮರಣದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱು ಸಾಗರೋಪ ಮಾಯುಷ್ಯಮನೊಡೆಯನಹಮಿಂದ್ರನಾಗಿ ಪುಟ್ಟಿದನ್

* * * *

ವರ ಸದ್ಧರ್ಮಮೆ ಜೀವೋ
ತ್ಕರಕ್ಕೆ ಶರಣನ್ಯವಸ್ತುಗಳ್ನಿಶ್ಚಯದಿಂ
ಶರಣಲ್ಲಮೆಂಬುದಂ ವಿ
ಸ್ತರದಿಂದಂ ತಿಳಿದು ಧರ್ಮಮಂ ಪಿಡಿಗೆಬುಧಂ ೭೯

ಜಿನಧರ್ಮಂ ಸಕಲಾವನೀತಳಮುಮಂ ಪರ್ವಿಕ್ಕೆ ಭೂಪಾಲಕರ್
ಜನಮಂ ನ್ಯಾಯದೊಳೊಂದಿ ರಕ್ಷಿಸುಗೆ ಭೂಲೋಕಕ್ಕೆ ಸಂತೋಷಮ
ಪ್ಪಿನೆಗಂ ಪೆರ್ಮೞಿಕೊಳ್ಗೆ ಭವ್ಯನಿಕರಕ್ಕಾನಂದಮುಂ ಬೇಟ್ಟ್ರೆ ಕಾಂ
ಚನಮುಂ ಕೀರ್ತಿಯುಮಕ್ಕೆ ದಿವ್ಯಸುಖಮುಂ ಭದ್ರಂ ಶುಭಂ ಮಂಗಳಂ ೮೦

## ಅಚ್ಚಿನಲ್ಲಿರುವ ಇದೇ ಲೇಖಕರ ಇತರ ಪುಸ್ತಕಗಳು

೧. ಗದ್ಯ ಮಣಿಮಾಲೆ – ೨ನೆಯ ಭಾಗ

೨. ಗದ್ಯ ಮಣಿಮಾಲೆ – ೩ನೆಯ ಭಾಗ

೩. ಕಾವ್ಯಾರಾಮ – ೧ನೆಯ ಭಾಗ

೪. ಕಾವ್ಯಾರಾಮ – ೨ನೆಯ ಭಾಗ

೫. ಧರ್ಮಾಮೃತ ಕಥಾಸಂಗ್ರಹ (ಗದ್ಯ)

★

ಪ್ರಕಾಶಕರು

ಜಿ. ಕೆ. ಅಂಡ್ ಬ್ರದರ್ಸ್

ಬಸವನಗುಡಿ – ಬೆಂಗಳೂರು ೪

ಸಾಹಿತ್ಯ ಭಂಡಾರ
ಹುಬ್ಬಳ್ಳಿ